# ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 21 ಸಂಚಿಕೆ 23 ಜೂನ್ 1-7, 1998 ರೂ. 2.00


# ಬಂದೇ ಬಿಟ್ಟಿದೆ ಪರಮಾಣು ಶಸ್ತ್ರಾಸ್ತ್ರ ಪೈಪೋಟಿಯ ಭೀತಿ!!

ವಾಜಪೇಯಿ ಸರಕಾರ 5 ಪರಮಾಣು ಸಾಧನಗಳ ಪರೀಕ್ಷಣೆ ನಡೆಸಿದ ಎರಡೇ ವಾರಗಳೊಳಗೆ ಪಾಕಿಸ್ತಾನದ ನವಾಝ್ ಶರೀಫ್ ಸರಕಾರ ಕೂಡಾ ಐದು ಪರಮಾಣು ಸಾಧನಗಳ ಪರೀಕ್ಷಣೆ ಮಾಡಿ 'ಲೆಕ್ಕ ಚುಕ್ತಾ ಮಾಡಿದೆವು' ಎಂದು ಸಾರಿದೆ. ಜತೆಗೆ ತನ್ನ ದೇಶದಲ್ಲಿ ತುರ್ತುಪರಿಸ್ಥಿತಿ ಹೇರಿದೆ. ಇತ್ತ ಮೇ 11-13 ರ ಪರೀಕ್ಷಣೆಗಳ ತಕ್ಷಣದ ಕಾರಣಗಳನ್ನು ದೇಶಕ್ಕಿನ್ನೂ ವಿವರಿಸಲಾಗದ ಬಿಜೆಪಿ ಮುಖಂಡರು ಇದು ಭಾರತದ ಪರೀಕ್ಷಣೆಗಳನ್ನು ಸಮರ್ಥಿಸುತ್ತದೆ ಎಂದಿದ್ದಾರೆ. ಆದರೆ ವಿಚಾರಶೀಲರು ಯಾರೂ ಇದನ್ನು ಒಪ್ಪಲು ಸಿದ್ಧರಿಲ್ಲ.

**ಭಾರತವಾಗಲೀ, ಪಾಕಿಸ್ತಾನವಾಗಲೀ ಪರಮಾಣು ಅಸ್ತ್ರಗಳನ್ನು ತಯಾರಿಸುವುದನ್ನು ಸಿಪಿಐ(ಎಂ) ಬಲವಾಗಿ ವಿರೋಧಿಸುತ್ತದೆ. ನಮ್ಮ ಉಪಖಂಡದಲ್ಲಿ ಪರಮಾಣು ಶಸ್ತ್ರಾಸ್ತ್ರ ಪೈಪೋಟಿ ಆರಂಭವಾಗಲು ವಾಜಪೇಯಿ ಸರಕಾರವೇ ಹೊಣೆ. ಈಗ ಪಾಕಿಸ್ತಾನವೂ ಅದನ್ನೇ ಅನುಸರಿಸಿದ್ದರೆ ಯಾರನ್ನು ದೂರುವುದು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಅಭಿಪ್ರಾಯ ಪಟ್ಟಿದ್ದಾರೆ. ಇದರಿಂದ ಯಾರಿಗೂ ಪ್ರಯೋಜನವಿಲ್ಲ, ನಮ್ಮೆರಡೂ ದೇಶಗಳಿಗೂ, ಇಡೀ ಈ ದಕ್ಷಿಣ ಏಷ್ಯಾ ಪ್ರದೇಶಕ್ಕೂ ಅಪಾಯಕಾರಿ ಎಂದು ಅವರು ಖೇದ ವ್ಯಕ್ತಪಡಿಸಿದ್ದಾರೆ.**

ಪರಮಾಣು ಸ್ಫೋಟಗಳನ್ನು ಬೆಂಬಲಿಸಿದವರು ಕೂಡಾ ಆ ನಂತರ ಸರಕಾರೀ ಮುಖಂಡರ ಲಂಗುಲಗಾಮಿಲ್ಲದ ಹೇಳಿಕೆಗಳು, ಮುಖ್ಯವಾಗಿ ಕೇಂದ್ರ ಗೃಹಮಂತ್ರಿಗಳು, ಸಂಸದೀಯ ವ್ಯವಹಾರ ಮಂತ್ರಿಗಳು ಹಾಗೂ ಪ್ರಧಾನ ಮಂತ್ರಿಗಳ ರಾಜಕೀಯ ಸಲಹೆಗಾರರ ಹೇಳಿಕೆಗಳು, ಒಂದೆಡೆ ನಾವು ಆತ್ಮರಕ್ಷಣೆಗಾಗಿ ಪರಮಾಣು ಅಸ್ತ್ರ ಹೊಂದುತ್ತೇವೆ ಎಂದರೆ ಇನ್ನೊಂದೆಡೆ ಪಾಕಿಸ್ತಾನ ಕಾಶ್ಮೀರದಲ್ಲಿ ತನ್ನ ಚಟುವಟಿಕೆ ಮುಂದುವರಿಸಿದರೆ ಅದನ್ನು ಬಳಸುವ ಪರೋಕ್ಷ ಬೆದರಿಕೆ, ಪ್ರಧಾನಿಗಳು ಅಮೆರಿಕಾ ಅಧ್ಯಕ್ಷರಿಗೆ ಬರೆದ ಪತ್ರ ಇವೆಲ್ಲವುಗಳಿಂದ ಪಾಕಿಸ್ತಾನ ಈ ಕ್ರಮ ಕೈಗೊಳ್ಳುವಂತೆ ಉದ್ರೇಕಿಸಲಾಯಿತು ಎಂದೂ ಈಗ ಖೇದದಿಂದ ಹೇಳುತ್ತಾರೆ.

ಭಾರತದಲ್ಲಿ ಮೇ 11 ರ ನಂತರ ಕಂಡುಬಂದಂತೆ ಪಾಕಿಸ್ತಾನದಲ್ಲೂ ಈಗ ಭಾವೋದ್ರೇಕವನ್ನು ಬಡಿದೆಬ್ಬಿಸಲಾಗುತ್ತಿದೆ. 'ನನಗೆ ಹೆಮ್ಮೆಯೆನಿಸುತ್ತಿದೆ' ಎಂದು ಹೇಳುವುದು ಬಹುಶಃ ಈಗ ಪಾಕಿಸ್ತಾನಿಗಳ ಸರದಿ. ಆದರೆ ಅಲ್ಲಿಯೂ ಭಾರತದಂತೆ ಭಿನ್ನ ದನಿಗಳೂ ಕೇಳಿಬಂದಿವೆ. 'ನಾವೊಂದು ಬಡ ದೇಶ. ಇನ್ನೂ ಹಣ ದುಬ್ಬರ ಏರುತ್ತದೆ. ನಾವು ಹೆಚ್ಚು ತಾಳ್ಮೆಯಿಂದರಬೇಕಿತ್ತು. ಇದರಿಂದ ತೊಂದರೆಯಾಗುವುದು ಬಡವರಿಗೆ. ಇದು ನಮಗೆ ಸಾಕಷ್ಟು ಹೊಟ್ಟೆ ತುಂಬಲು ಸಹಾಯವಾಗುವುದಿಲ್ಲ" ಎಂದಿದ್ದಾರೆ ಇಸ್ಲಾಮಾಬಾದಿನಲ್ಲಿ ಅಡುಗೆ ಕೆಲಸ ಮಾಡುತ್ತಿರುವ ಮಹಮ್ಮದ್ ಹಯಾತ್‌ಖಾನ್

ಇದು ಭಾರತದ ದುಡಿಯುವ ಜನರ ಅಭಿಪ್ರಾಯ ಕೂಡಾ. ಆದ್ದರಿಂದಲೇ ಸಿಪಿಐ(ಎಂ) ಭಾರತವಾಗಲೀ, ಪಾಕಿಸ್ತಾನವಾಗಲೀ ಪರಮಾಣು ಪರೀಕ್ಷಣೆ ಮಾಡುವುದನ್ನು ಬಲವಾಗಿ ವಿರೋಧಿಸುತ್ತದೆ ಎಂದು ಸುರ್ಜಿತ್ ಹೇಳಿದ್ದಾರೆ. ಈಗ ಎರಡೂ ದೇಶಗಳು ಸಂಯಮದಿಂದ ವರ್ತಿಸಿ ಇನ್ನಷ್ಟು ಪರೀಕ್ಷಣೆಗಳನ್ನು ನಡೆಸದಂತೆ ಪರಸ್ಪರ ಮಾತುಕತೆ ನಡೆಸುತ್ತಾರೆ ಎಂದು ಅವರು ಆಶಯ ವ್ಯಕ್ತಪಡಿಸಿದ್ದಾರೆ.

ಇತ್ತೀಚೆಗೆ ತಾನು ಪಂಜಾಬಿಗೆ ಭೇಟಿ ನೀಡಿದ್ದನ್ನು ನೆನಪಿಸಿಕೊಂಡ ಸುರ್ಜಿತ್‌ರವರು ಎರಡೂ ಕಡೆ ಪಂಜಾಬ್, ಜಮ್ಮು-ಕಾಶ್ಮೀರದಂತಹ ಗಡಿ ರಾಜ್ಯಗಳ ಜನರು ನಿರಂತರ ಭಯದ ವಾತಾವರಣದಲ್ಲಿ ಈಗ ಬದುಕಬೇಕಾಗಿದೆ. ವಾಜಪೇಯಿ ಮತ್ತು ನವಾಝ್‌ಶರೀಫ್ ಸರಕಾರಗಳೆರಡೂ ಭಾವೋದ್ರೇಕ ಸೃಷ್ಟಿಸಿ ಈ ಭಯವನ್ನು ಸೃಷ್ಟಿಸಿವೆ ಎನ್ನುತ್ತಾರೆ ಅವರು.

ಪಾಕಿಸ್ತಾನ ಕಾಶ್ಮೀರದಲ್ಲಿ ತಲೆ ಹಾಕದಂತೆ ಮಾಡುವುದಕ್ಕೆ ಈ 'ಪರಮಾಣು ಪಡೆ' ಎಂದು ಸಮರ್ಥಿಸಿಕೊಳ್ಳುತ್ತಿದ್ದ ಗೃಹಮಂತ್ರಿಗಳ ಪ್ರಕಾರ ಪಾಕಿಸ್ತಾನವೂ ಪರೀಕ್ಷಣೆ ಮಾಡಿದ್ದು ಒಳ್ಳೆಯದೇ ಆಯಿತಂತೆ! ಆದರೆ ಇನ್ನು ಮುಂದೆ ಜಮ್ಮು-ಕಾಶ್ಮೀರದಲ್ಲಿ ಪಾಕಿಸ್ತಾನದ ಪರೋಕ್ಷ ಯುದ್ಧ ತೀವ್ರಗೊಳ್ಳುವುದಿಲ್ಲವೇ ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸುತ್ತಾ 'ತೀವ್ರಗೊಳ್ಳುತ್ತದೆ' ಎಂದಿದ್ದಾರೆ. ಹಾಗಿದ್ದರೆ ಈ 'ಪರಮಾಣು ಪಡೆ' ಏತಕ್ಕಾಗಿ? ನಮ್ಮೆರಡೂ ದೇಶಗಳ ದುಡಿಯುವ ಜನರ ಬದುಕನ್ನು ಉತ್ತಮಪಡಿಸಲು ಬೇಕಾದ ಸಂಪನ್ಮೂಲವನ್ನು ಬಾಂಬು ತಯಾರಿಕೆಯತ್ತ ತಿರುಗಿಸಿ ಒಂದು ಪರಮಾಣು ಶಸ್ತ್ರಾಸ್ತ್ರ ಪೈಪೋಟಿ ಆರಂಭಿಸಿ, ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ತಮ್ಮ ಬೇಳೆ ಬೇಯಿಸಿಕೊಳ್ಳಲು ಅವಕಾಶ ಮಾಡಿಕೊಡಲಿಕ್ಕಾಗಿಯೇ? ಇದರಿಂದ ದೇಶದ ಭದ್ರತೆ ಹೆಚ್ಚುತ್ತದೆಯೇ? ಇದು ನಮ್ಮ ಭಾರತೀಯ ಉಪಖಂಡದ ದುಡಿಯುವ ಜನರು ಕೇಳುವ ಪ್ರಶ್ನೆ.


## ಉಪಖಂಡದಲ್ಲಿಂದು ತುಂಬಾ ಗಂಭೀರ ಪರಿಸ್ಥಿತಿ ಉಂಟಾಗಿದೆಯೆಂದು ಜ್ಯೋತಿ ಬಸು

ಪಾಕಿಸ್ತಾನ ಅಣು ಸಾಧನ ಪರೀಕ್ಷೆ ನಡೆಸುವುದರೊಂದಿಗೆ ಭಾರತ ಉಪಖಂಡದಲ್ಲಿನ ಪರಿಸ್ಥಿತಿ ತುಂಬಾ ಗಂಭೀರವಾಗಿದೆ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಜ್ಯೋತಿ ಬಸು ಹೇಳಿದ್ದಾರೆ. ಭಾರತ ಅಣು ಸಾಧನ ಪರೀಕ್ಷಿಸಿದಾಗಲೇ ಪಾಕಿಸ್ತಾನ ಇಂದಲ್ಲ ನಾಳೆ ಪರೀಕ್ಷೆ ನಡೆಸುತ್ತದೆ ಎಂಬುದು ಸ್ಪಷ್ಟವಾಗಿ ಹೋಗಿತ್ತು ಎಂದಿದ್ದಾರೆ ಅವರು.

ಭಾರತ ಈಗಲೂ ಪಾಕಿಸ್ತಾನ ಮತ್ತು ಚೀಣಾಗಳ ಜೊತೆ ಸಂಪರ್ಕ ಬೆಳೆಸಿ ದ್ವಿಪಕ್ಷೀಯ ಮಾತುಕತೆಗಳ ಮೂಲಕ ಪರಿಸ್ಥಿತಿ ಹತೋಟಿಗೆ ಮುಂದಾಗಬೇಕೆಂದು ಅವರು ಸಲಹೆ ನೀಡಿದ್ದಾರೆ.

1974 ರ ಪೋಖ್ರಾನ್ ಅಣು ಪರೀಕ್ಷೆಗಳ ಬಗ್ಗೆ ಪ್ರಸ್ತಾಪಿಸುತ್ತಾ ಅವರು 'ಅಂದಿನ ಪರಿಸ್ಥಿತಿಯೇ ಬೇರೆಯಾಗಿತ್ತು. ಇಂದು ಬಿಜೆಪಿ ಸರ್ಕಾರದಡಿ ಇಡೀ ಅಣ್ವಸ್ತ್ರ ನೀತಿಯೇ ಬದಲಾಗಿ ಪಾಕಿಸ್ತಾನ ಪ್ರತಿಕಾರ ಕ್ರಮ ಕೈಗೊಳ್ಳುವುದರೊಂದಿಗೆ ಅಣ್ವಸ್ತ್ರ ಪೈಪೋಟಿಯೇ ಉಂಟಾಗಿದೆ' ಎಂದಿದ್ದಾರೆ.

ಕೇಂದ್ರ ಸರಕಾರ ಅನುಸರಿಸುತ್ತಿರುವ ಯುದ್ಧಕೋರ ನೀತಿಯನ್ನು ಪ್ರತಿಭಟಿಸಿ ಬೆಂಗಳೂರಿನಲ್ಲಿ ಮೇ 25 ರಂದು ಮೈಸೂರು ಬ್ಯಾಂಕ್ ವೃತ್ತದಲ್ಲಿ ನೂರಾರು ಸಿಐಟಿಯು ಕಾರ್ಯಕರ್ತರು ಕೇಂದ್ರ ಸರ್ಕಾರದ ಭೂತದಹನ ಮಾಡುವುದರೊಂದಿಗೆ ಪ್ರತಿಭಟಿಸಿದರು.



## ಕರ್ನಾಟಕದಲ್ಲಿ ಉಪಚುನಾವಣೆಗಳು ಮತ್ತು ನಮ್ಮ ಕರ್ತವ್ಯಗಳು

ಪಿ.ರಾಮಚಂದ್ರರಾವ್

ಕರ್ನಾಟಕದಲ್ಲಿ 7 ವಿಧಾನ ಸಭಾ ಕ್ಷೇತ್ರಗಳಲ್ಲಿ ಉಪ ಚುನಾವಣೆಗಳು ನಡೆಯುತ್ತಿವೆ. ಇದೇ ಜೂನ್ 3 ರಂದು ಮಂಡ್ಯ, ಹುಣಸೂರು, ದಾವಣಗೆರೆ, ಬೈಂದೂರು, ಬಾಗಲಕೋಟೆ, ಬಿಜಾಪುರ ಮತ್ತು ಉತ್ತರ ಹಳ್ಳಿ ವಿಧಾನಸಭಾ ಕ್ಷೇತ್ರಗಳ ಮತದಾರರು ಮತವೀಯಲು ಹೋಗುತ್ತಾರೆ. ಈ ಸಂದರ್ಭದಲ್ಲಿ ಮತದಾರರಿಗೆ ಸಿಪಿಐ(ಎಂ) ಪಕ್ಷದ ಸಲಹೆ: ನೀವು ಈ ಚುನಾವಣೆಯಲ್ಲಿ ಕೇಂದ್ರದಲ್ಲಿ ಅತ್ಯಂತ ಅಲ್ಪಮತಗಳ ಬಹುಮತದಿಂದ ಆಡಳಿತ ಮಾಡುತ್ತಿರುವ ಬಿಜೆಪಿ ಮತ್ತು ಲೋಕಶಕ್ತಿ ಪಕ್ಷಗಳನ್ನು (ಬಿಜೆಪಿಯು ಕೇಂದ್ರದಲ್ಲಿ 22 ಪಕ್ಷಗಳ ಸಹಾಯದಿಂದ ಆಡಳಿತ ನಡೆಸುತ್ತಿದೆ) ಸೋಲಿಸಿರಿ. ನಿಮ್ಮ ಮತಗಳನ್ನು ಈ ಪಕ್ಷಗಳ ಅಭ್ಯರ್ಥಿಗಳ ವಿರುದ್ಧ ಹಾಕಿ, ಅವರು 'ಇಂದು ಅನುಸರಿಸುತ್ತಿರುವ ಆದ್ಯತೆ ರಹಿತ, ನೆರೆಹೊರೆ ರಾಷ್ಟ್ರಗಳೊಡನೆ ಕಾಲುಕೆರೆದು ಯುದ್ಧ ಹೂಡಲು ಸಿದ್ಧರಾದ, ಆರ್ಥಿಕವನ್ನು ಸಂಪೂರ್ಣ ನಾಶಗೈಯುವ ಹಾಗೂ ದೇಶದ ಬಹುಭಾಗದ ಜನತೆ ಹಸಿವು, ಉದ್ಯೋಗ, ಮನೆ, ಆರೋಗ್ಯ, ಇತ್ಯಾದಿ ಮೂಲ ಸಮಸ್ಯೆಗಳನ್ನು ತೀವ್ರ ನಿರ್ಲಕ್ಷ್ಯಕ್ಕೆ ಗುರಿ ಮಾಡುವ..... ನೀತಿಗಳ ವಿರುದ್ಧ ಮತವೀಯಿರಿ.

ರಾಜ್ಯದ ಮತದಾರ ಬಂಧುಗಳೇ, ಕೇಂದ್ರದ ಬಿಜೆಪಿ-ಲೋಕಶಕ್ತಿ (ಮತ್ತಿತರ 22 ಪಕ್ಷಗಳ) ಸರಕಾರವು ಅಧಿಕಾರಕ್ಕೆ ಬಂದು ಕೇವಲ 45-50 ದಿನಗಳಾಯಿತಷ್ಟೆ. ಕೇವಲ 10 ದಿವಸಗಳಲ್ಲಿ ಈ ಮಿಶ್ರ ಸರಕಾರಕ್ಕೆ ವಿಶ್ವಾಸಮತ(272 ಮಾತ್ರ) ಸಿಕ್ಕಿದ ಮರುದಿನ, 'ಅಣು ಶಸ್ತ್ರಾಸ್ತ್ರ ತಯಾರಿಕೆಗೆ ಬೇಕಾದ ಪರೀಕ್ಷೆಗಳನ್ನು ನಡೆಸಲು ಈ ಸರಕಾರವು ಆದೇಶ ಹೊರಡಿಸಿತು. ಇದೇ ಮೇ 11 ಮತ್ತು 12 ರಂದು 5 ಅಣು ಬಾಂಬು ಸ್ಫೋಟ ಮಾಡಿತು. ಸರಕಾರವು ಕೊಟ್ಟ ಕಾರಣಗಳು : ಗಡಿಯ ರಾಷ್ಟ್ರಗಳು ಅಣು ಶಸ್ತ್ರಾಸ್ತ್ರಗಳನ್ನು ಹಿಡಿದು ನಮ್ಮ ದೇಶದ ರಕ್ಷಣೆಗೆ ಗಂಡಾಂತರಕಾರಿಗಳಾಗಿವೆ. ಚೀನಾ ನಮ್ಮ ವೈರಿ ನಂಬರ್ 1 ಮತ್ತು ಪಾಕಿಸ್ತಾನ ಗಡಿಯಲ್ಲಿ ಯುದ್ಧ ಮಾಡಲು ಸನ್ನದ್ಧವಾಗಿ ನಿಂತಿದೆ' ಎಂದು.

ಕಳೆದ ಹಲವು ವರ್ಷಗಳಲ್ಲಿ 'ಗಡಿಯಲ್ಲಿ ದೇಶದ ರಕ್ಷಣೆ' ಗೆ ಇಲ್ಲದ ಅಪಾಯ ಒಮ್ಮೆಲೇ ಬಿಜೆಪಿ ಸರಕಾರವು ಅಧಿಕಾರಕ್ಕೆ ಬಂದ ಮರುಕ್ಷಣದಲ್ಲಿ ಹೇಗೆ ಸೃಷ್ಟಿಯಾಯಿತು.? ಎಂಬುದು ಇದೀಗ ದೇಶಾದ್ಯಂತ ಮಾತ್ರವಲ್ಲ ವಿಶ್ವಾದ್ಯಂತ ಮಿಲಿಯನ್ ಡಾಲರಿನ ಪ್ರಶ್ನೆಯಾಗಿದೆ.

ಮೇ 26 ರಂದು ಭಾರತದ ಲೋಕಸಭೆಯಲ್ಲಿ ಪ್ರಧಾನ ಮಂತ್ರಿ ವಾಜಪೇಯಿಯವರು ಮಾಡಿದ ಭಾಷಣ, ಲೋಕಸಭೆಯಲ್ಲಿ ಮಂಡಿಸಿದ 13 ಪುಟಗಳ 'ಅಣು ನೀತಿಯ ವ್ಯಾಖ್ಯಾನ'ಗಳಲ್ಲಿ 'ದೇಶದ ರಕ್ಷಣೆಗೆ ಅಣು ಸ್ಫೋಟಮಾಡುವ ತುರ್ತು ಅವಶ್ಯಕತೆ ಎಲ್ಲಿಂದ ಬಂತು? ಎಂಬ ವಿಷಯದ ಕುರಿತು ವಿವರಣೆಗಳು ಇರಲಿಲ್ಲ!! ಎಲ್ಲಾ ವಿರೋಧ ಪಕ್ಷಗಳ ಮುಖಂಡರು - ಕಾಂಗ್ರೆಸ್ ಪಕ್ಷದ ನಟವರಲಾಲ್, ಸಿಪಿಐನ ಇಂದ್ರಜಿತ್ ಗುಪ್ತಾ, ಟಿಎಂಸಿಯ ಚಿದಂಬರಂ ........ ಕೇಳಿದ ಈ ಕಾರಣಗಳಿಗೆ ವಾಜಪೇಯಿಯಾಗಲೀ, ಜಾರ್ಜ್ ಫರ್ನಾಂಡೀಸ್ ಆಗಲೀ, ಬಿಜೆಪಿ ಮುಖಂಡರಾಗಲೀ ಉತ್ತರಗಳನ್ನು ಕೊಡಲಿಲ್ಲ.

ಅಣು ಬಾಂಬು ಸ್ಫೋಟಗಳನ್ನು ಪೋಖ್ರಾನ್‌ನಲ್ಲಿ ನಡೆಸಿದ ಮರುಕ್ಷಣದಲ್ಲಿ ವಾಜಪೇಯಿ ಅಮೆರಿಕದ ಅಧ್ಯಕ್ಷ ಕ್ಲಿಂಟನ್‌ರವರಿಗೆ ಬರೆದ ಪತ್ರದಲ್ಲಿ ಕಾಣಿಸಲಾದ ಚೀನಾ ಮತ್ತು ಪಾಕಿಸ್ತಾನಗಳ ಅಣು ಶಸ್ತ್ರಾಸ್ತ್ರಗಳ ಭಯದ ಕಾರಣ'ಗಳು ದೇಶದ ಜವಾಬ್ದಾರಿಯ ಲೋಕಸಭೆಯಲ್ಲಿ ಕೊಡಲು ವಾಜಪೇಯಿಯವರು ಹಿಂಜರಿದಿದ್ದಾರೆ.

ಅಂದರೆ, ಇದು ಬಿಜೆಪಿ, ಲೋಕಶಕ್ತಿ... ಈ ಪಕ್ಷಗಳ 'ದೇಶದ ಜನತೆಯಿಂದ ಮರೆಯಲ್ಲಿ ಗುಪ್ತವಾಗಿ ಜಾರಿಗೆ ತರಬೇಕೆಂದಿರುವ ಗುಪ್ತ ಕಾರ್ಯಕ್ರಮಗಳ ಭಾಗವೇ? ಎಂದು ನಾವು ಪ್ರಶ್ನಿಸೋಣವೇ?

ಹಾಗೆಯೇ, ರಾಷ್ಟ್ರದ ಗೃಹಮಂತ್ರಿ ಸ್ಥಾನದಲ್ಲಿರುವ ಅಡ್ವಾಣಿಯವರ ಹೇಳಿಕೆ - "ನಾವು ಕಾಶ್ಮೀರದಲ್ಲಿ ಈ ತನಕ ಭಾರತ ಸರಕಾರವು ಅನುಸರಿಸುತ್ತಾ ಬರುತ್ತಿದ್ದ ಮೃದು ಧೋರಣೆಯ, ಸೌಹಾರ್ದತೆಯ ಧೋರಣೆಯ ಸ್ಥಾನದಲ್ಲಿ ಕಠಿಣ ಹಾಗೂ ಆಕ್ರಮಣಕಾರಿ ಧೋರಣೆಯನ್ನು ಅನುಸರಿಸಲು ತೀರ್ಮಾನಿಸಿದ್ದೇವೆ.......... ನಾವು ನಮ್ಮ ಸೈನ್ಯಾಧಿಪತಿಗಳಿಗೆ ಗಡಿಗಳಲ್ಲಿ ಧಾಳಿಗಳನ್ನು ವೈರಿಗಳನ್ನು ಬೆನ್ನಟ್ಟಿಸಿಕೊಂಡು ಹೋಗುವ ಆಕ್ರಮಣಕಾರಿ ದಾರಿಯಲ್ಲಿ ಎದುರಿಸಬೇಕೆಂದು ಆಜ್ಞೆ ಇತ್ತಿದ್ದೇವೆ"

ಇದೇ ಅಡ್ವಾಣಿಯವರು ಬಿಜೆಪಿಯ ಅಧ್ಯಕ್ಷರಾಗಿ ಹಿಂದೆ ಹೇಗೆ ಹೇಳಿದ್ದರು ಎಂಬುದನ್ನು ಇಲ್ಲಿ ನೆನಪಿಸಬಹುದು. 'ಪಾಕಿಸ್ತಾನದ ವಶದಲ್ಲಿರುವ ಕಾಶ್ಮೀರದೊಳಗೆ ಹೋಗಿ ನಮ್ಮ ಸೈನ್ಯಗಳು ಧಾಳಿ ಮಾಡುವ ಮೂಲಕ ಮತ್ತು ಪಾಕಿಸ್ತಾನಿ ಪ್ರೇರಿತ ಆತಂಕಕೋರರ ಧಾಳಿಗಳನ್ನು ಸದೆಬಡಿಯುವುದು ಎಂದು. ಪರಿಣಾಮವಾಗಿ, ಯುದ್ಧವೇ ಸಂಭವಿಸಿದರೆ ಎಂದು ಕೇಳಿದ್ದಕ್ಕೆ ಆಗ ಅವರ ಉತ್ತರ ಇರಲಿಲ್ಲ. ಈಗ ಅವರ ಹೇಳಿಕೆಯ ಇಂಗಿತವನ್ನು ಬಿಜೆಪಿ ಪಾರ್ಲಿಮೆಂಟರಿ ಮಂತ್ರಿ ಖುರಾನ ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ. 'ಬನ್ನಿ ನಾವು 4ನೇ ಯುದ್ಧವನ್ನು ಮಾಡಲು ಸಿದ್ಧರಾಗಿದ್ದೇವೆ' ಎಂದು ಪಾಕಿಸ್ತಾನದ ಕಾಲು ಕೆರೆಯುತ್ತಿದ್ದಾರೆ.

ಇನ್ನು ದೇಶದ ಒಳಗೂ, ವಿದೇಶಗಳಲ್ಲಿ ಭಾರತವು ತನ್ನ 50 ವರ್ಷಗಳ ಅಣು ಶಸ್ತ್ರಾಸ್ತ್ರ ನೀತಿಯನ್ನು ಮುರಿದು ಅಣು ಸ್ಫೋಟಗಳನ್ನು ಮಾಡಿ "ನೋಡಿ ನಾವು ಈಗ ಅಣುರಾಷ್ಟ್ರ' ಎಂದು ಸಾರಿದ ಮರುಕ್ಷಣ, ನಾವು ಇನ್ನು ಮುಂದೆ ಅಣುಪ್ರಯೋಗ, ಶಸ್ತ್ರಾಸ್ತ್ರ ಪ್ರಯೋಗಗಳನ್ನು ಮಾಡುವುದಿಲ್ಲ. ನಾವು ಪ್ರಯೋಗ ನಿಲುಗಡೆ ಮಾಡುತ್ತೇವೆ ಎಂದು ಬಿಜೆಪಿ ಸರಕಾರದ ವಕ್ತಾರರು ಸಾರಿದರು... ಮರುದಿನವೇ ಎಂಬಂತೆ ರಕ್ಷಣಾಮಂತ್ರಿಗಳಾದ ಜಾರ್ಜ್ ಫರ್ನಾಂಡೀಸ್‌ರು ಹೀಗೆ ಸಾರಿದರು " ನಾವು ಪ್ರಯೋಗ ಮಾಡಿ ಯಶಸ್ವಿಯಾಗಿದ್ದೇವೆ. ನಾವು ಇನ್ನು ನಮ್ಮ ಕ್ಷಿಪಣಿಗಳಿಗೆ ಅಣು ಬಾಂಬ್‌ಗಳನ್ನು ಅಳವಡಿಸಲು ಮುಂದಾಗುತ್ತೇವೆ" ಎಂದು.

ಇವೆಲ್ಲಾ ವಿಶ್ವಕ್ಕೆ ಎಂತಹ ನೀತಿಯನ್ನು ಸಾರುತ್ತದೆ? ಯುದ್ಧಕೋರ ನೀತಿಯನ್ನು ಸಾರುವುದಿಲ್ಲವೇ?

ನೆರೆ ಹೊರೆಯ ರಾಷ್ಟ್ರಗಳೊಡನೆ ಶಾಂತಿ ಸೌಹಾರ್ದದಿಂದ ಇರುವ ನೀತಿಯ ಸ್ಥಾನದಲ್ಲಿ ಕಾಲುಕೆರೆಯುವ ನೀತಿ ಸಾರುವನೀತಿ ಇದಲ್ಲವೇ?

ಪುಟ 2 ಕ್ಕೆ




ಜಿ.ಎಸ್.ಮಣಿ

# ಸುಖಾ ಸುಮ್ಮನೆ ಗುಮ್ಮನ ಕರೆದವರು

ಅಧಿಕಾರ ವಹಿಸಿಕೊಂಡ ದಿನದಿಂದಲೇ ಸಮಸ್ಯೆಗಳ ಸುಳಿಯಲ್ಲಿ ಸಿಕ್ಕಿಕೊಂಡ ಬಿಜೆಪಿ ಸರ್ಕಾರ ಈ ಸಮಸ್ಯೆಗಳಿಂದ ಹೊರ ಬರಲೋ ಎಂಬಂತೆ ವೀರಾವೇಶದಿಂದ ಅಣ್ವಶಕ್ತಿ ಪ್ರಯೋಗ ನಡೆಸಿದೆ. ರಾಜಸ್ಥಾನದ ಪೋಖ್ರಾನ್‌ನಲ್ಲಿ ಭಾರತ ನಡೆಸಿದ ಸ್ಫೋಟ ಜಗತ್ತಿಗೇ ಭಾರತದ ಅಣ್ವಸ್ತ್ರ ಸಾಮರ್ಥ್ಯದ ಬಗ್ಗೆ ಮನವರಿಕೆ ಮಾಡಿಕೊಟ್ಟಿದೆ. ಈ ಸಾಮರ್ಥ್ಯ ಒಂದೆರಡು ದಿನಗಳಲ್ಲಿ ಅಥವಾ ವರ್ಷಗಳಲ್ಲಿ ಬಂದದ್ದಲ್ಲ. ಹಲವು ವರ್ಷಗಳ ಸಂಶೋಧನಾ ಶ್ರಮದ ಫಲ ಇದು.

ಈ ಅಣ್ವಸ್ತ್ರ ಪರೀಕ್ಷೆ ಈಗ ಅವಶ್ಯವಿತ್ತೆ ಎಂಬುದು ಪ್ರಶ್ನೆ. ಅಣ್ವಸ್ತ್ರ ಸಾಮರ್ಥ್ಯ ಪಡೆದ ಮೇಲೆ ಅದನ್ನು ಶಸ್ತ್ರಾಸ್ತ್ರವನ್ನಾಗಿ ರೂಪಿಸುವ ಅವಕಾಶ ಎಂದಿಗೂ ಇದ್ದೇ ಇರುತ್ತಿತ್ತು.

ಭಾರತ ಅಣ್ವಸ್ತ್ರ ಪರೀಕ್ಷೆ ನಡೆಸಿದ್ದಕ್ಕಾಗಿ ಅಮೇರಿಕ, ಜಪಾನ್ ಸೇರಿದಂತೆ ಹಲವು ದೇಶಗಳು ಆರ್ಥಿಕ ದಿಗ್ಬಂಧನಗಳನ್ನೂ ಹೇರಿದ್ದಾರೆ. ಉದಾರೀಕರಣದ ದಾರಿ ಹಿಡಿದಿರುವ ಭಾರತಕ್ಕೆ ಈ ದಿಗ್ಬಂಧನದ ಕ್ರಮಗಳನ್ನು ಎದುರಿಸುವುದು ಅಷ್ಟೇನೂ ಸುಲಭದ ವಿಷಯವಾಗಲಾರದು.

ಬಿಜೆಪಿ ಮತ್ತು ಅದರ ಮಿತ್ರ ಪಕ್ಷಗಳ ಕೇಂದ್ರ ಸರ್ಕಾರ ಈ ಅಣ್ವಸ್ತ್ರ ಪರೀಕ್ಷೆಯ ಕ್ರಮವನ್ನು ರಾಜಕೀಯ ಕಾರಣಗಳಿಗಾಗಿಯೇ ಮಾಡಿದ್ದಾರೆ ಎಂಬುದು ಈಗ ಸ್ಪಷ್ಟವಾಗುತ್ತದೆ. ಯಾಕೆಂದರೆ ಈ ಒಂದು ನಿರ್ಧಾರದ ರಾಜಕೀಯ ಲಾಭ ಗಳಿಸಲು ಬಿಜೆಪಿ ಎಲ್ಲ ತರಹದ ಹುನ್ನಾರಗಳನ್ನು ಮಾಡುತ್ತಲೇ ಇದೆ. ಸಂಘಪರಿವಾರದ ವಿಶ್ವ ಹಿಂದೂ ಪರಿಷತ್ ಪೋಖ್ರಾನ್‌ನಲ್ಲಿ 'ಶಕ್ತಿಪೀಠ' ಸ್ಥಾಪನೆ ಮತ್ತು ಪೋಖ್ರಾನ್‌ನಿಂದ ದೇಶದ ಹಲವು ಭಾಗಗಳಿಗೆ ಮೆರವಣಿಗೆ ನಡೆಸುವ ಮಾತನ್ನಾಡಿದೆ. ರಾಜಸ್ಥಾನದ ಬಿಜೆಪಿ ಘಟಕ ಅಣ್ವಸ್ತ್ರ ಪರೀಕ್ಷೆಯ ವಿಷಯವನ್ನು ರಾಜಕೀಯ ವಿಷಯವನ್ನಾಗಿಸುವ ವಿಚಾರವನ್ನು ಬಯಲುಗೊಳಿಸಿದೆ. ಪಾಕಿಸ್ತಾನಗಳ ಬಗ್ಗೆ ತಮ್ಮ ಹೇಳಿಕೆಗಳಿಂದ ಯುದ್ಧ ವಾತಾವರಣದಂತಹ ವಾತಾವರಣವನ್ನು ಸೃಷ್ಟಿಸುತ್ತಿದ್ದಾರೆ.

ಇಂತಹ ಅತಿರಿಕ್ತ ನಡವಳಿಕೆಗೆ ಕಾರಣ ಹುಡುಕ ಹೊರಟರೆ ಬಿಜೆಪಿಯ ನಿಜವಾದ ಗುಣ ಹೊರಬರುತ್ತದೆ. ಅಧಿಕಾರ ವಹಿಸಿಕೊಂಡಂದಿನಿಂದ ದಿನನಿತ್ಯ ಮಿತ್ರ ಪಕ್ಷಗಳ ಕಿರಿಕಿರಿ ಅನುಭವಿಸುತ್ತಿದ್ದ ಬಿಜೆಪಿಗೆ ಈ ಕಿರಿಕಿರಿ ಕಡಿಮೆಯಾಗಿದೆ. ಅಣ್ವಸ್ತ್ರ ಪರೀಕ್ಷೆಯ ವಿಷಯವನ್ನು ಒಂದು ಭಾವನಾತ್ಮಕ ವಿಷಯವನ್ನಾಗಿ ಮಾರ್ಪಡಿಸುವ ಎಲ್ಲ ಪ್ರಯತ್ನಗಳನ್ನೂ ಸರ್ಕಾರ ಮಾಡಿದೆ.

ಇದಕ್ಕೆ ಇನ್ನೊಂದು ಆಯಾಮವೂ ಇದೆ. ಉದಾರೀಕರಣದಿಂದಾಗಿ ದೇಶದ ಆರ್ಥಿಕ ಸ್ಥಿತಿ ದಿನದಿಂದ ದಿನಕ್ಕೆ ಹದಗೆಡುತ್ತಲೇ ಬಂದಿದೆ. ರಫ್ತಿನಲ್ಲಿ ಕುಸಿತ, ಆಮದು ಹೆಚ್ಚಳ, ವಿಶ್ವ ವ್ಯಾಪಾರ ಸಂಸ್ಥೆಯ ಒತ್ತಡ, ಹಣಕಾಸು ಕೊರತೆಯೂ ಹೆಚ್ಚಳ, ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಕುಸಿತ, ಔದ್ಯಮಿಕ ಬೆಳವಣಿಗೆಯ ದರಗಳಲ್ಲಿ ಕುಸಿತ - ಹೀಗೆ ಒಂದೆರಡಲ್ಲ ಹಲವು ತರಹದ ಸಮಸ್ಯೆಗಳು ಬೃಹದಾಕಾರದಲ್ಲಿ ಬೆಳೆದು ಬಿಜೆಪಿಯೆದುರು ನಿಂತಿದೆ. ಜನಪರ ಧೋರಣೆಯಿರುವ ಪಕ್ಷವಾದರೆ ಈ ಎಲ್ಲ ಸಮಸ್ಯೆಗಳಿಗೂ ಜನಪರ ಪರಿಹಾರಗಳನ್ನು ಅದು ಕಂಡು ಹಿಡಿದು ಸೂಕ್ತ ಕ್ರಮಗಳನ್ನು ಜಾರಿಗೆ ತರುತ್ತಿತ್ತು. ಆದರೆ ಬಿಜೆಪಿ ಸರ್ಕಾರಕ್ಕೆ ಜನಪರವಾಗಿ ಕೆಲಸ ಮಾಡುವ ಇಚ್ಛೆಯಿಲ್ಲ. ಆದ್ದರಿಂದ ಬಿಜೆಪಿ ಸರ್ಕಾರಕ್ಕೆ ಜನರ ಗಮನವನ್ನು ಬೇರೆಡೆಗೆ ತಿರುಗಿಸುವ ಅವಶ್ಯಕತೆ ಇತ್ತು. ಬಿಜೆಪಿ ತನ್ನ ಅಂತಹ ಅವಶ್ಯಕತೆಯನ್ನು ಸದ್ಯಕ್ಕೆ ಸ್ವಲ್ಪಮಟ್ಟಿಗೆ ಪೂರೈಸಿಕೊಂಡಿದೆ. ಆದರೆ ಇದು ನಿಜವಾದ ಸಮಸ್ಯೆಯ ಪರಿಹಾರವಂತೂ ಅಲ್ಲ. ನಿಧಾನವಾಗಿಯಾದರೂ ಜನ ಈ ವಿಷಯದಲ್ಲಿ ಎಚ್ಚೆತ್ತುಕೊಂಡು ಬಿಜೆಪಿಗೆ ಬುದ್ಧಿ ಹೇಳುತ್ತಾರೆ.

## ಭೂಮಿ ಸಾಮ್ರಾಜ್ಯವೇ ಬಂಡವಾಳಿಗರಿಗೆ

ಕೇಂದ್ರ ಮಂತ್ರಿಮಂಡಳ ಬಂಡವಾಳಿಗರಿಂದ ಭೂ ಸಾಮ್ರಾಜ್ಯವನ್ನೇ ನೀಡಲು ತೀರ್ಮಾನಿಸಿದೆ. ಅಲ್ಕ್ಯಾ ಅಂದರೆ ಅರ್ಬನ್ ಲ್ಯಾಂಡ್ (ಸೀಲಿಂಗ್ ಅಂಡ್ ರೆಗುಲೇಷನ್) ಆಕ್ಟ್ ಎಂಬುದು ನಗರ ಭೂಮಿತಿ ಕಾಯಿದೆ. ಈ ಕಾಯಿದೆ ನಗರ ಪ್ರದೇಶಗಳಲ್ಲಿ ವ್ಯಕ್ತಿಯೊಬ್ಬ ಎಷ್ಟು ಭೂಮಿ ಹೊಂದಿರಬಹುದೆಂಬುದನ್ನು ನಿಗದಿಪಡಿಸಿತ್ತು. ನಗರ ಪ್ರದೇಶಗಳ ಭೂಮಿಯ ಬೆಲೆ ಹೆಚ್ಚಾಗಿರುವುದರಿಂದ ಈ ಮಿತಿ ಬಂಡವಾಳಿಗರೇ ಎಲ್ಲ ಭೂಮಿಯನ್ನು ಕಬಳಿಸದಂತೆ ತಡೆಯುತ್ತಿತ್ತು. ಇದರಿಂದಾಗಿ ಬಂಡವಾಳಿಗರ ಆಸೆಬುರುಕತನಕ್ಕೆ ಕಡಿವಾಣ ಬಿತ್ತು. ನಗರ ಪ್ರದೇಶಗಳಲ್ಲಿ ಬಡವರೂ ಬದುಕುವಂತಾಯಿತು.

ಈಗ ಕೇಂದ್ರ ಸರ್ಕಾರ ಈ ಕಾಯಿದೆಯನ್ನು ಹೊಸ ಕಾಯಿದೆಯಿಂದ ಬದಲಾಯಿಸಿದೆ. ಹೊಸ ಕಾಯಿದೆ ಈಗಿನ ಕಾಯಿದೆ ಹೇರಿದ್ದ ಹಲವು ಮಿತಿಗಳನ್ನು ತೆಗೆದು ಹಾಕಿದೆ. ಉದಾಹರಣೆಗೆ ನಗರ ಭೂಮಿತಿ ಕಾಯಿದೆಯಂತೆ ಹೆಚ್ಚುವರಿ ಭೂಮಿಯನ್ನು ಭೂ ಮಾಲಿಕರಿಂದ ಸರ್ಕಾರ ವಶಪಡಿಸಿಕೊಂಡಿದ್ದರೆ ಹೊಸ ಕಾಯಿದೆ ಯಡಿ ಅದನ್ನು ಭೂ ಮಾಲಿಕರಿಗೆ ಹಿಂದಿರುಗಿಸಲಾಗುವುದಂತೆ. ಶ್ರೀಮಂತರ ಕೈಯಲ್ಲಿ ಭೂಮಿ ಕೇಂದ್ರೀಕರಣವಾಗಲು ನೆರವಾಗುವ ಈ ಕಾಯಿದೆ ಉದಾರೀಕರಣದ ಕ್ರಮ ಎಂದು ಬೇರೆ ಹೇಳಬೇಕಾಗಿಲ್ಲವಲ್ಲ. ಶ್ರೀಮಂತರಿಗೆ ಸ್ವದೇಶಿ(ಆಸ್ತಿ) ಬಡವರು ಪರದೇಶಿ ಇದು ಬಿಜೆಪಿಯ ಉದ್ದೇಶವಿರಬೇಕಲ್ಲವೇ?

## ಬಾಂಬು ತಯಾರಿಸುವವರಿಗೆ ಜನರ ಆರೋಗ್ಯದ ಬಗ್ಗೆ ಚಿಂತೆ ಇಲ್ಲ

ವಿಶ್ವ ಆರೋಗ್ಯ ಸಂಸ್ಥೆ ವಿಶ್ವ ಸಂಸ್ಥೆಯ ಒಂದು ಅಂಗ ಸಂಸ್ಥೆ. ಜಗತ್ತಿನಾದ್ಯಂತ ಜನತೆಯ ಆರೋಗ್ಯದ ಬಗ್ಗೆ ಕಾಳಜಿ ವಹಿಸುವ ಬಗ್ಗೆ ವಸ್ತುನಿಷ್ಠ ಅಧ್ಯಯನಗಳ ಮೂಲಕ ಜನಪರ ನಿಲುವ ಧೋರಣೆಗಳನ್ನು ಹೊಂದಿರುವ ಸಂಸ್ಥೆ ಇದು. ಜೊತೆಗೇ ಜನತೆಯ ಆರೋಗ್ಯದ ವಿಷಯದಲ್ಲೂ ರಾಜಕೀಯ ಮಾಡುವ ದೇಶಗಳ ಮೇಲೆ ಸಾಧ್ಯವಾದಲ್ಲಿ ಒತ್ತಡವನ್ನೂ ಇದು ಹೇರುತ್ತದೆ. ಈ ಸಂಸ್ಥೆಯ 'ಜಾಗತಿಕ ಆರೋಗ್ಯ ಸಭೆ' ವರ್ಷಕ್ಕೊಮ್ಮೆ ನಡೆಯುತ್ತದೆ. ಇದು ದೇಶದ ಜನತೆಯ ಆರೋಗ್ಯದ ದೃಷ್ಟಿಯಿಂದ ಬಹಳ ಮುಖ್ಯ ಸಭೆ. ಯಾಕೆಂದರೆ ದೇಶಗಳು ತಮ್ಮ ಆರೋಗ್ಯ ಕಾರ್ಯಕ್ರಮಗಳ ಬಗ್ಗೆ ವಿಮರ್ಶಿಸಿಕೊಂಡು ಮುಂದಿನ ಯೋಜನೆಗಳ ಬಗ್ಗೆ ವಿಚಾರ ಮಾಡುವ ಬೇರೆಯವರ ಅನುಭವಗಳಿಂದ ಕಲಿಯುವ, ನಮ್ಮ ಅನುಭವಗಳನ್ನು ಬೇರೆಯವರೊಂದಿಗೆ ಹಂಚಿಕೊಳ್ಳುವಂತಹ ಸಭೆ ಇದು.

ಭಾರತ ಈ ವರ್ಷದ ಅಂದರೆ ವಿಶ್ವ ಆರೋಗ್ಯ ಸಂಸ್ಥೆಯ 51ನೇ ಸಭೆಗೆ ತನ್ನ ನಿಯೋಗವನ್ನೇ ಕಳುಹಿಸಲಿಲ್ಲ. ಜನತೆಯ ಆರೋಗ್ಯದ ಬಗ್ಗೆ ನಿಷ್ಕಾಳಜಿಯ ಧೋರಣೆಯನ್ನು ಸರ್ಕಾರ ಹೊಂದಿದೆ ಎಂಬುದಕ್ಕೆ ಇದಕ್ಕಿಂತ ಹೆಚ್ಚಿನ ಪುರಾವೆ ಬೇಕಾಗಿಲ್ಲ. ಈ ಸಭೆಯ ಪ್ರಾಮುಖ್ಯತೆಯನ್ನು ವಿವರಿಸಿರುವುದು ಇದೇ ಕಾರಣಕ್ಕಾಗಿ

ಹಾಗಿದ್ದರೆ ಭಾರತ ಜನತೆಯ ಆರೋಗ್ಯದ ಕ್ಷೇತ್ರದಲ್ಲಿ ನಮ್ಮ ಸಾಧನೆಗಳು ತೃಪ್ತಿಕರವೇ? ಖಂಡಿತ ಇಲ್ಲ. ಶಿಶು ಸಾವು ಮತ್ತು ಸಾಮಾನ್ಯ ಆಯಸ್ಸು ಇವನ್ನು ಗಮನಿಸಿದರೆ ಭಾರತದಲ್ಲಿ ಕಳೆದ ಇಪ್ಪತ್ತು ವರ್ಷಗಳಲ್ಲಿ ಅಂತಹ ಸುಧಾರಣೆಯೇನು ಕಾಣಬರುವುದಿಲ್ಲ. ಸ್ವಾತಂತ್ರ್ಯದ ಐವತ್ತು ವರ್ಷಗಳಲ್ಲಿ, ಸರಾಸರಿ ಆಯಸ್ಸು 32 ವರ್ಷಗಳಿಂದ 62 ವರ್ಷಗಳಿಗೆ ಏರಿರುವುದು ನಿಜವಾದರೂ ಇದು ಸ್ಕ್ಯಾಂಡಿನೇವಿಯಾ, ಜಪಾನ್ ಇತ್ಯಾದಿ ದೇಶಗಳಲ್ಲಿ 75 ವರ್ಷಗಳಿಗಿಂತ ಕಡಿಮೆ.

ಉದಾಹರಣೆ ಕ್ಷಯರೋಗ ಹತೋಟಿ ಕಾರ್ಯಕ್ರಮ ಪೂರ್ತಿ ವಿಫಲವಾಗಿದೆ. ಭಾರತದಲ್ಲಂತೂ 30 ಕೋಟಿ ಕ್ಷಯರೋಗಿಗಳಿದ್ದಾರೆ. ಹಾಗೆಯೇ ಏಡ್ಸ್ ರೋಗಿಗಳ ಸಂಖ್ಯೆಯೂ ಹೆಚ್ಚಿದೆ. ಇಂತಹ ಪರಿಸ್ಥಿತಿ ಇರುವಾಗ ಸಾರ್ವಜನಿಕ ಆರೋಗ್ಯ ಕ್ಷೇತ್ರದಲ್ಲಿ ಹೆಚ್ಚಿನ ಕ್ರಮಗಳ ಅವಶ್ಯಕತೆಯಿದೆ. ಆದರೆ ಸರ್ಕಾರ ನಿಷ್ಕ್ರಿಯವಾಗಿದೆ.

ಉದಾರೀಕರಣದ ಆರ್ಥಿಕ ನೀತಿಗಳು ಇಂದಿನ ಆದ್ಯತೆಗಳನ್ನು ನಿರ್ಧರಿಸುತ್ತಿರುವಾಗ ಸರ್ಕಾರಿ ಹಸ್ತಕ್ಷೇಪ ಇಲ್ಲದೇ ಇರುವ ಈ ನೀತಿಯನ್ನೇ ಸಾರ್ವಜನಿಕ ಆರೋಗ್ಯದ ಬಗೆಗೂ ಅನ್ವಯಿಸಲಾಗುತ್ತಿದೆ.

ಹಾಗೆ ಉದಾರೀಕರಣದಿಂದಾಗಿ ಸಾರ್ವಜನಿಕ ಆರೋಗ್ಯಕ್ಕಾಗಿ ಮಾಡುತ್ತಿರುವ ವೆಚ್ಚದಲ್ಲಿ ತೀವ್ರ ಕಡಿತವಾಗಿ ಸಾರ್ವಜನಿಕ ಆರೋಗ್ಯ ಪರಿಸ್ಥಿತಿ ಕ್ಷೀಣಿಸುತ್ತಿರುವುದಾಗಿ ಸಮೀಕ್ಷೆಗಳು ತಿಳಿಸಿವೆ.

ಬಾಂಬುಗಳನ್ನು ತಯಾರಿಸುವುದರಲ್ಲಿ ಉತ್ಸಾಹ ತೋರುವ ಬಿ.ಜೆ.ಪಿ.ಗೆ ದೇಶದ ರಕ್ಷಣೆಗೆ ಆರೋಗ್ಯವಂತ ಜನರು ಅವಶ್ಯವೆಂಬ ಕನಿಷ್ಠ ತಿಳುವಳಿಕೆಯೂ ಇಲ್ಲವೆ.

○

## ಬಡವರ ಬೆನ್ನು ಮುರಿಯಲಿರುವ ಕೇಂದ್ರದ ಬಜೆಟ್

ಇದನ್ನು ನೀವು ಓದುವ ವೇಳೆಗೆ ಭಾರತದ ಕೇಂದ್ರ ಸರಕಾರದ ರೈಲ್ವೇ ಮತ್ತು ಸಾಮಾನ್ಯ ಬಜೆಟ್‌ಗಳ ಮಂಡನೆ ಆಗಿರುತ್ತವೆ. ಬಜೆಟ್ ಎಂದರೆ ಎಂತೆಂತಹ ತೆರಿಗೆಯ ಹೊರೆಯನ್ನು ಯಾವ ವರ್ಗದ ಮೇಲೆ ಹೇರುತ್ತದೆ ಎಂಬ ಕುತೂಹಲ ವಿರುತ್ತದೆ.

ಬಿ.ಜೆ.ಪಿ. ತನ್ನ ಮಿತ್ರ ಪಕ್ಷಗಳೊಡನೆ ಸೇರಿ ಅಧಿಕಾರದಲ್ಲಿರುವ ಈ ವರ್ಷದ ಬಜೆಟ್ ಏನೆಂಬುದನ್ನು ಯಾರಾದರೂ ಊಹಿಸಬಹುದು. ಅದು ಶ್ರೀಮಂತರ ಪರ ಮತ್ತು ಬಡಜನರ ವಿರೋಧಿಯಾಗಿರುತ್ತದೆ ಎಂಬುದು.

ಆದರೆ ಇವುಗಳ ಜೊತೆಗೆ ಈ ವರ್ಷ ದೇಶದಲ್ಲಿ ವಿಶೇಷ ಪರಿಸ್ಥಿತಿ ಇದೆ. ಈ ಪರಿಸ್ಥಿಯನ್ನು ನಿರ್ವಹಿಸುವ ಜನಪರವಾಗಿ ಪರಿವರ್ತಿಸುವ ಸೈದ್ಧಾಂತಿಕ ನಿಲುವಾಗಲೀ ಸಾಮರ್ಥ್ಯವಾಗಲೀ ಬಿ.ಜೆ.ಪಿ. ನೇತೃತ್ವದ ಸರ್ಕಾರಕ್ಕೆ ಇಲ್ಲ.

ಕಳೆದ ವರ್ಷದ ಕನಸಿನ ಬಜೆಟ್ ನಿರೀಕ್ಷೆಯ ಪರಿಣಾಮಗಳನ್ನು ತರಲಿಲ್ಲ. ಕಂದಾಯ ಸಂಗ್ರಹ ನಿರೀಕ್ಷಿತ ಮಟ್ಟಕ್ಕೂ ಬರಲೇ ಇಲ್ಲ. ರಫ್ತಿನಲ್ಲಿ ಕುಸಿತ, ಔದ್ಯಮಿಕ ಬೆಳವಣಿಗೆ ದರದಲ್ಲಿ ಕುಸಿತ, ಹಣಕಾಸು ಕೊರತೆಯಲ್ಲಿ ಹೆಚ್ಚಳ ಹೀಗೆ ಸಮಸ್ಯೆಗಳ ಸರಮಾಲೆಯೇ ಮೂಡಿ ಬಂದಿದೆ.

ಇವೆಲ್ಲವುಗಳಿಗೆ ಕಿರೀಟವಿಟ್ಟಂತೆ ಬಿ.ಜೆ.ಪಿ.ಯ ಸರ್ಕಾರ ಅಣ್ವಸ್ತ್ರ ಪರೀಕ್ಷೆ ನಡೆಸಿ ಜಾಗತಿಕ ಸಮುದಾಯದ ಆರ್ಥಿಕ ದಿಗ್ಬಂದನವನ್ನು ಹೇರಿಸಿಕೊಂಡಿದೆ. ಉದಾರೀಕರಣದ ಆರ್ಥಿಕ ನೀತಿಗಳಿಂದಾಗಿ ವಿದೇಶೀ ಹಣಕಾಸಿನ ಮೇಲೆ ಇಂದು ಭಾರತದ ಅವಲಂಬನೆ ಎಂದಿಗಿಂತ ಹೆಚ್ಚಾಗಿದೆ. ಇಂತಹ ಸಂದರ್ಭದಲ್ಲೇ ಈ ಆರ್ಥಿಕ ದಿಗ್ಬಂಧನ ಬಂದಿರುವುದರಿಂದಲೇ ಪರಿಸ್ಥಿತಿ ಹೆಚ್ಚು ಕಷ್ಟಕರವಾಗಿರುವುದು.

ಇಲ್ಲಿಯೂ ಖಂಡಿತವಾಗಿ ಜನಪರವಾದ ಕ್ರಮಗಳನ್ನು ಕೈಗೊಂಡು ಜನಸಾಮಾನ್ಯರಿಗೆ ಅತ್ಯಾವಶ್ಯವಾದ ಪರಿಹಾರ ನೀಡಿ ಶ್ರೀಮಂತರ ಮೇಲೆ ಹೆಚ್ಚಿನ ತೆರಿಗೆ ಹಾಕುವ ಪರ್ಯಾಯ ಸಾಧ್ಯತೆ ಇದ್ದೇ ಇದೆ.

ಆದರೆ ಇದನ್ನು ಮಾಡಲು ಸರಕಾರಕ್ಕೆ ಸಂಕಲ್ಪವಿರಬೇಕು. ಅದೇ ಇಲ್ಲದಿದ್ದರೆ ಶ್ರೀಮಂತರಿಗೆ ಹೆಚ್ಚಿನ ನೋವುಗಳಿಲ್ಲ. ನೋವುಗಳೆಲ್ಲ ಬಡವರಿಗೆ ಬಂದುಬಿಡುತ್ತದೆ.

ರೈಲ್ವೆ ಬಜೆಟ್‌ನಲ್ಲಿ ರೈಲ್ವೇ ಪ್ರಯಾಣದ ದರ ಮತ್ತು ಸಾಗಾಣಿಕೆ ದರ ಹೆಚ್ಚಿಸುವ ಮಾತು ಆಗಲೇ ಬಂದಿದೆ. ಆದರೆ ಸಾಗಾಣಿಕೆ ದರಗಳನ್ನು ಹೆಚ್ಚಿಸಿದರೆ ಮತ್ತು ಕೆಳವರ್ಗದ ಪ್ರಯಾಣದ ದರಗಳನ್ನು ಹೆಚ್ಚಿಸಿದರೆ ತೀವ್ರ ಪ್ರತಿಭಟನೆ ಎದುರಿಸಬೇಕಾಗುವ ಭಯವಿರುವ ಸರ್ಕಾರ ಮೇಲ್ವರ್ಗದ ಪ್ರಯಾಣ ದರವನ್ನು ಮಾತ್ರ ಹೆಚ್ಚಿಸುವ ವಿಚಾರದಲ್ಲಿದೆಯಂತೆ.

ಹಾಗೆಯೇ ಸಾಮಾನ್ಯ ಬಜೆಟ್ಟಿನಲ್ಲಿ ಜನತೆಯ ಮೇಲೆ ಹಲವು ಹೊರೆಗಳನ್ನು ಹೇರುವ ವಿಚಾರದಲ್ಲಿ ಸರ್ಕಾರವಿದೆಯಂತೆ. ಯೋಜನಾ ವೆಚ್ಚಕ್ಕೆ ಬಜೆಟ್ಟಿನ ಬೆಂಬಲವನ್ನು 2000 ಕೋಟಿ ರೂಪಾಯಿಗಳಿಂದ ಕಡಿತಗೊಳಿಸಲಾಗುವುದಂತೆ. ಯೋಜನೆಗೆ ಬಜೆಟ್ಟಿನ ಬೆಂಬಲವನ್ನು ಕಡಿತಗೊಳಿಸುವುದೆಂದರೆ ಸಾಮಾಜಿಕ ವಲಯದ ವೆಚ್ಚಗಳನ್ನು ಅಂದರೆ ಬಡಜನತೆಗೆ ನೀಡುವ ಸೌಲಭ್ಯಗಳನ್ನು ಕಡಿತ ಮಾಡುವುದೆಂದೇ ಅರ್ಥ.

ಇಂತಹ ವಿಚಾರಗಳನ್ನು ಹೊಂದಿರುವ ಬಿಜೆಪಿ ಸರ್ಕಾರ ಭಾರತ ಅಣ್ವಸ್ತ್ರ ಪರೀಕ್ಷೆ ಮಾಡಿದ್ದರಿಂದ ಆರ್ಥಿಕ ದಿಗ್ಬಂಧನಗಳನ್ನು ಹೇರಿದ್ದರಿಂದ ಎಲ್ಲ ಆರ್ಥಿಕ ಸಮಸ್ಯೆಗಳು ಉಂಟಾದವು. ದೇಶದ ಜನತೆ ಒಗ್ಗಟ್ಟಿನಿಂದ ಇರಬೇಕು. ಎಂತಹ ಕಷ್ಟಬಂದರೂ ನಾವು ಎದುರಿಸಬೇಕು. ಯಾಕೆಂದರೆ ದೇಶದ ಸುಭದ್ರತೆಗೆ ಅಪಾಯವಿತ್ತು ಆದ್ದರಿಂದ ಅಣ್ವಸ್ತ್ರ ಪರೀಕ್ಷೆ ಮಾಡಿದೆವು. ಅಣ್ವಸ್ತ್ರ ಪರೀಕ್ಷೆ ಮಾಡಿದ್ದರಿಂದ ಆರ್ಥಿಕ ದಿಗ್ಬಂಧನ ಹೇರಲಾಯಿತು. ಆದ್ದರಿಂದ ಇವೆಲ್ಲವನ್ನು ನಾವು ಎದುರಿಸಬೇಕು. ಬೇರೆ ದಾರಿಯೇ ಇಲ್ಲವೆಂದು ಪ್ರಚಾರ ಮಾಡುತ್ತಿದೆ.

ಹೀಗೆ ತನ್ನ ಕುಕೃತ್ಯಗಳನ್ನು ಮುಚ್ಚಿಕೊಂಡು ಸಮುದ್ರಕ್ಕೆ ಬೆಂಕಿ ಬಿದ್ದಿತು, ಬಿದಿರ ಬುಟ್ಟಿಯಲ್ಲಿ ನೀರು ಹೊತ್ತು ಬೆಂಕಿ ನಂದಿಸಿದೆ' ಎಂಬ ಕತೆಗಳನ್ನು ಬಿಜೆಪಿ ಸರ್ಕಾರ ಹೇಳತೊಡಗಿದೆ.

## ಅಮೇರಿಕನ್ ಬ್ಯಾಂಕುಗಳ ಪೀಕಲಾಟ

ಅಮೇರಿಕ ಭಾರತದ ಮೇಲೆ ಆರ್ಥಿಕ ದಿಗ್ಬಂಧನ ಹೇರಿದೆ. ಆದರೆ ಅಮೇರಿಕದ ಬ್ಯಾಂಕುಗಳಿಗೆ ತಮ್ಮ ಲಾಭದ ಚಿಂತೆ. ಆರ್ಥಿಕ ದಿಗ್ಬಂಧನವಿರಲಿ ಇಲ್ಲದೇ ಇರಲಿ ತಮ್ಮ ಲಾಭ ತಮಗೆ ಬೇಕೆಂಬುದೇ ಅವರ ಧೋರಣೆ.

ಭಾರತ ಮಿತ್ರ ದೇಶ ಆದ್ದರಿಂದ ಈ ದಿಗ್ಬಂಧನವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾಗಿಲ್ಲ ಎನ್ನುವ ಅವರು ಈ ವಿಷಯದಲ್ಲಿ ಅಮೆರಿಕದ ಫೆಡರಲ್ ರಿಸರ್ವ್ ಈ ದಿಗ್ಬಂಧನದ ಮೇಲ್ವಿಚಾರಣೆ ಮಾಡಬೇಕೆಂದು ಒತ್ತಾಯಿಸಿದ್ದಾರೆ. ನಿಜವೇನೆಂದರೆ ಅಮೆರಿಕದ ಫೆಡರಲ್ ರಿಸರ್ವ್ ಕಟ್ಟುನಿಟ್ಟಾಗಿ ಶಿಸ್ತನ್ನು ಹೇರುವುದಿಲ್ಲವಂತೆ. ಹೇಗಿದೆ ಅಮೆರಿಕದ ಬ್ಯಾಂಕುಗಳ ಈ ಲಾಭಾವಕಾಶವಾದಿತನ?

## ಅರವತ್ತರವರೆಗೆ ಉದ್ಯೋಗ

ಬಿಜೆಪಿಯ ಸರ್ಕಾರ ಕೇಂದ್ರ ಸರ್ಕಾರದ ಉದ್ಯೋಗಿಗಳಿಗೆ ನಿವೃತ್ತಿಯ ವಯಸ್ಸನ್ನು ಅರವತ್ತಕ್ಕೆ ಏರಿಸಿದೆ. ಈಗಾಗಲೇ ಉದ್ಯೋಗದಲ್ಲಿರುವವರು ಮುಂದೆ ಉದ್ಯೋಗಕ್ಕೆ ಸೇರುವವರು ಈಗಿನ 58 ವರ್ಷಕ್ಕೆ ಬದಲು 60 ವರ್ಷಕ್ಕೆ ನಿವೃತ್ತಿ ಹೊಂದುತ್ತಾರೆ.

ನಿಜವಾದ ಸಮಸ್ಯೆಯನ್ನು ಮುಟ್ಟದೇ ಅಡ್ಡ ಕ್ರಮಗಳಿಂದ ಜನರ ಗಮನವನ್ನು ನಿಜ ಸಮಸ್ಯೆಗಳಿಂದ ಬೇರೆಡೆಗೆ ತಿರುಗಿಸುವ ಬಿಜೆಪಿಯ ಗುಣವನ್ನು ಈ ಕ್ರಮ ಒಡೆದು ಹೇಳುತ್ತದೆ.

ಉದಾರೀಕರಣದ ಈ ದಿನಗಳಲ್ಲಿ ಎಲ್ಲೆಡೆ ಉದ್ಯೋಗಗಳ ಕಡಿತವಾಗುತ್ತಿದೆ. ಕೇಂದ್ರ ಸರ್ಕಾರವೂ ತನ್ನ ನೌಕರರ ಸಂಖ್ಯೆ ಬೆಳೆಯದಂತೆ ನೋಡಿಕೊಳ್ಳುತ್ತಿದೆ. ಹಲವು ಸ್ಥಾನಗಳನ್ನು ಖಾಲಿ ಬಿಡಲಾಗಿದೆ. ಈ ಎಲ್ಲ ಕ್ರಮಗಳ ನಡುವೆ ಉದ್ಯೋಗಗಳ ಸಂಖ್ಯೆ ಕಡಿಮೆಯಾಗುತ್ತಿದ್ದು ನಿರುದ್ಯೋಗ ಹೆಚ್ಚುತ್ತಿದೆ. ಇಂದು ಪರಿಹರಿಸಬೇಕಾದ ನಿಜ ಸಮಸ್ಯೆ ನಿರುದ್ಯೋಗದ್ದು.

ಸರ್ಕಾರ ನಿವೃತ್ತಿ ವಯಸ್ಸನ್ನು ಹೆಚ್ಚು ಮಾಡಿರುವುದರಿಂದ ಉದ್ಯೋಗಗಳ ಸಂಖ್ಯೆ ಹೆಚ್ಚುವುದಿಲ್ಲ. ಬದಲಿಗೆ ಇರುವ ಉದ್ಯೋಗಿಗಳು ಇನ್ನೆರಡು ವರ್ಷ ಹೆಚ್ಚಿಗೆ ಸೇವೆಯಲ್ಲಿರುವುದರಿಂದ ಆ ಎರಡು ವರ್ಷಗಳಿಗೆ ಉಂಟಾಗಬಹುದಾದ ಉದ್ಯೋಗಗಳು ಸೃಷ್ಟಿಯಾಗುವುದಿಲ್ಲ.

ಆರೋಗ್ಯಕರ ಸಮಾಜವನ್ನು ಸೃಷ್ಟಿಸ ಬಯಸುವವರು ನಿವೃತ್ತಿಯ ವಯಸ್ಸನ್ನು ಕಡಿಮೆ ಮಾಡಬೇಕು. ಯಾಕೆಂದರೆ ವಯಸಾದಂತೆ ಕೆಲಸ ಮಾಡುವ ಶಕ್ತಿ ಕಡಿಮೆಯಾಗಿ ಹೆಚ್ಚು ವಿಶ್ರಾಂತಿಯ ಅವಶ್ಯಕತೆ ಇರುತ್ತದೆ. ಅಂತಹ ವಿಶ್ರಾಂತಿ ದೊರೆಯುವಂತಾಗಬೇಕು. ಅದಕ್ಕೆ ಸಾಮಾಜಿಕ-ಆರ್ಥಿಕ ಭದ್ರತೆ ಇರಬೇಕು. ಭದ್ರತೆ ಇಲ್ಲದೇ ಇರುವುದರಿಂದಲೇ ನಿವೃತ್ತಿ ವಯಸ್ಸನ್ನು ಏರಿಸುವ ಬೇಡಿಕೆ ಬಂದದ್ದು.

ಈಗಾಗಲೇ ಉದ್ಯೋಗದಲ್ಲಿರುವವರಿಗೆ ಮುಂದೆ ಉದ್ಯೋಗಕ್ಕೆ ಸೇರಲಿರುವವರಿಗೆ ಇದರಿಂದ ಲಾಭವಾಗಬಹುದು: ಆದರೆ ಅಸಂಖ್ಯಾತ ನಿರುದ್ಯೋಗಿಗಳಿಗೆ? ನಿರುದ್ಯೋಗವೇ ಗತಿಯೇ?

## ವಿಶ್ವ ವ್ಯಾಪಾರ ಸಂಸ್ಥೆಗೆ ಐವತ್ತು ವರ್ಷ

ವಿಶ್ವ ವ್ಯಾಪಾರ ಸಂಸ್ಥೆಗೆ ಐವತ್ತು ವರ್ಷವಾಗಿದೆ. ಹಿಂದೆ ಗ್ಯಾಟ್ ಎಂದು ಕರೆಯಲ್ಪಡುತ್ತಿದ್ದ ಈ ಸಂಸ್ಥೆ ಐವತ್ತು ವರ್ಷಗಳಲ್ಲಿ ಮಾಡಿದ ಕೆಲಸಗಳ ಬಗ್ಗೆ ಬೇರೆ ಬೇರೆ ವರ್ಗಗಳಿಗೆ ಬೇರೆ ಬೇರೆ ಅಭಿಪ್ರಾಯಗಳಿರುತ್ತವೆ.

ಸಾಮ್ರಾಜ್ಯಶಾಹಿ ದೇಶಗಳು ಜಗತ್ತಿನ ಬಡ ಮತ್ತು ಅಭಿವೃದ್ಧಿಶೀಲ ದೇಶಗಳ ಶೋಷಣೆಗಾಗಿ ಹುಟ್ಟಿಹಾಕಿ ಬೆಳೆಸಿದ ಸಂಸ್ಥೆ ಈ ಗ್ಯಾಟ್ ಎಂದರೆ ತಪ್ಪಾಗಲಾರದು. ಅಂದಿನ ಗ್ಯಾಟ್‌ನಲ್ಲಿ ಹಾಗೂ ಇಂದಿನ ವಿಶ್ವವ್ಯಾಪಾರ ಸಂಸ್ಥೆಯಲ್ಲಿ ಅಮೇರಿಕ, ಯುರೋಪಿನ ದೇಶಗಳು, ಜಪಾನ್‌ಗಳದ್ದೇ ಪ್ರಾಬಲ್ಯ. ಆದ್ದರಿಂದ ಈ ದೇಶಗಳ ಲಾಭಕ್ಕಾಗಿಯೇ ಕೆಲಸ ಮಾಡುವ ಸಂಸ್ಥೆ ಈ ಸಂಸ್ಥೆ.

ಬಂಡವಾಳಿಗರು ಈ ಸಂಸ್ಥೆಯ ಸಾಧನೆಗಳೂ ಗಮನಾರ್ಹವಾದದ್ದು. ಎಂದೇ ಹೊಗಳಿದ್ದಾರೆ. ಹೊಗಳಿಕೆಗೆ ತಕ್ಕಂತೆ ಈ ಸಂಸ್ಥೆಯಿಂದ ಅವರು ಲಾಭ ಹೊಂದಿದ್ದಾರೆ ಎಂಬುದು ಸ್ಪಷ್ಟವಲ್ಲವೇ?

## ಕರ್ನಾಟಕದಲ್ಲಿ ಉಪಚುನಾವಣೆಗಳು

ಪುಟ 1 ರಿಂದ

ಮೆಲ್ಲಮೆಲ್ಲನೆ ಬಿಜೆಪಿ ನೇತೃತ್ವದ ಸರಕಾರವು ತನ್ನ 'ನಿಜ ಸ್ವರೂಪ' ವನ್ನು ಹೊರಹಾಕುತ್ತಿದೆ.

ಪ್ರಮುಖವಾಗಿ, ಜನತೆಯ ಮೇಲೆ ಬಹುರಾಷ್ಟ್ರೀಯ ಕಂಪನಿಗಳ ಮತ್ತು ಗುತ್ತೇದಾರಿ ಬಂಡವಾಳಶಾಹಿಗಳ ಆರ್ಥಿಕ ನೀತಿಗಳನ್ನು ಹೇರುತ್ತಾ, ಅದೇ ವೇಳೆ ಜನತೆಯು ಅವುಗಳಿಂದಾಗಿ ಹಲವಾರು ರೀತಿಯ ಕಷ್ಟನಷ್ಟಗಳಿಗೆ ಒಳಗಾಗಿ ಅವರು ಆ ನೀತಿಗಳ ವಿರುದ್ಧ ಸಿಟಿದು ನಿಲ್ಲದಂತೆ ಅವರ ದೃಷ್ಟಿಯನ್ನು ಬೇರೆಡೆಗೆ ಒಯ್ಯುವ - ನಾವು ಅಣು ರಾಷ್ಟ್ರವೆಂದು ಹೆಮ್ಮೆ ಪಡೋಣ? - ನೀತಿಯಲ್ಲದೆ ಇದು ಬೇರೆಯಲ್ಲ.

ಇದೇ ರೀತಿ 'ನಾವೂ ನಮ್ಮ ಜತೆಯಲ್ಲಿ ಆಡಳಿತ ನಡೆಸುವ ಮಿತ್ರಪಕ್ಷಗಳು ಅಂಗೀಕರಿಸಿದ ರಾಷ್ಟ್ರೀಯ ನೀತಿಯಲ್ಲಿ ಅಯೋಧ್ಯೆಯ ವಿವಾದಾಸ್ಪದ ಜಾಗದಲ್ಲಿ ಶ್ರೀರಾಮಮಂದಿರ ಕಟ್ಟುವ ನೀತಿಯನ್ನು ಬಿಟ್ಟುಕೊಟ್ಟಿದ್ದೇವೆ! ಎಂದು ಸಾರಿ, 'ತಾವು ಆಳುತ್ತಿರುವ ರಾಜಸ್ಥಾನದಲ್ಲಿ ಇದೀಗ ಶ್ರೀರಾಮಮಂದಿರಕ್ಕೆ ಬೇಕಾದ ಸ್ತಂಭಗಳನ್ನು ಕೆತ್ತಿ ತಯಾರು ಮಾಡುವ ಕೆಲಸವನ್ನು ತ್ವರಿತವಾಗಿ ಇದೇ ಬಿಜೆಪಿಯ ಸಹ ಸಂಘಟನೆ - ವಿಹೆಚ್‌ಪಿ- ನಡೆಸುತ್ತಿದೆ.

ಜನತೆ ಈ ಬಗ್ಗೆ ಜಾಗ್ರತೆಯಿಂದಿರಬೇಕು.

ಬಿಜೆಪಿ-ಲೋಕಶಕ್ತಿಯ ಕೂಟವನ್ನು ಉಪಚುನಾವಣೆಯಲ್ಲಿ ಸೋಲಿಸಲು ಶಕ್ತರಾದ ಜಾತ್ಯಾತೀತ ಅಭ್ಯರ್ಥಿಗೆ ಮತವೀಯಬೇಕು.

## ಕರ್ನಾಟಕದಲ್ಲಿ ಕಳೆದವಾರ

**ಮೇ 22 1998**

- ವಿಧಾನ ಮಂಡಲದಲ್ಲಿ ವಿವಿಧ ಉಪಸಮಿತಿಗಳ ಪುನರ್ರಚನೆ.
- ಗ್ರಾಮೀಣ ಪ್ರದೇಶಗಳಲ್ಲಿ ನಿಯೋಜಿಸಿದ ವೈದ್ಯರು 15 ದಿನಗಳೊಳಗೆ ಕರ್ತವ್ಯಕ್ಕೆ ಹಾಜರಾಗದಿದ್ದರೆ ನಿರ್ದಾಕ್ಷಿಣ್ಯ ಕ್ರಮ ಎಂದು ಆರೋಗ್ಯ ಸಚಿವರು ಎಚ್ಚರಿಕೆ.
- ಚದುರಂಗರ 'ಹೆಜ್ಜಾಲ' ಕಾದಂಬರಿ ಬಿಡುಗಡೆ

**ಮೇ 23, 1998**

- ಔರಾದ್ ತಾಲ್ಲೂಕಿನಲ್ಲಿ ಮತ್ತೊಬ್ಬ ರೈತನ ಆತ್ಮಹತ್ಯೆ ಪ್ರಕರಣ ವರದಿ.
- ಮೊತ್ತಮೊದಲ ಬಾರಿಗೆ ಕಂಪ್ಯೂಟರೀಕರಣಗೊಂಡ ಕೆ.ಪಿ.ಎಸ್.ಸಿ. ಫಲಿತಾಂಶದಲ್ಲಿ ವಿವಾದ.

**ಮೇ 26, 1998**

- ಡಾ. ವಿಜಯಾ ದಬ್ಬೆ ಅವರಿಗೆ 'ಅನುಪಮಾ' ಪ್ರಶಸ್ತಿ ಪ್ರದಾನ

**ಮೇ 25, 1998**

- ಅಕ್ಕಿ ಆಲೂರಿನಲ್ಲಿ ಗಲಭೆ - 25 ಮಂದಿಗೆ ಗಾಯ
- ಎನ್‌ಜಿಇಎಫ್ ಉತ್ಪಾದನಾ ಘಟಕಗಳನ್ನು ವಿವಿಧ ಖಾಸಗಿಯವರಿಗೆ ಬಿಟ್ಟುಕೊಡಬೇಕೆಂದು ಸರ್ಕಾರದ ಕ್ರಮಕ್ಕೆ ಕಾರ್ಮಿಕ ಸಂಘದ ವಿರೋಧ.

**ಮೇ 26, 1998**

- ಒಂದರಿಂದ 10ನೇ ತರಗತಿಯವರೆಗೆ ಪಠ್ಯಪುಸ್ತಕಗಳ ಕೊರತೆ ಉಂಟಾಗದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಪುಸ್ತಕಗಳ ಜಂಟಿ ನಿರ್ದೇಶಕರು.
- ಕರ್ನಾಟಕ ವಿದ್ಯುತ್ ಜಾಲದ ಎರಡು ಪೂರೈಕೆ ಘಟಕಗಳು ಕೆಟ್ಟಿದ್ದರಿಂದ ರಾಜ್ಯದಲ್ಲಿ ವಿದ್ಯುತ್ ಕೊರತೆ.

**ಮೇ 27, 1998**

- ವೀರಪ್ಪನ್‌ನಿಂದ ಮತ್ತೆ ಮೂವರ ಒತ್ತೆ.

**ಮೇ 28, 1998**

- ರಾಜ್ಯದ 12 ಕೊಲೆ ಪ್ರಕರಣಗಳಲ್ಲಿ ರಾಜ್ಯದ ಒಬ್ಬ ಪ್ರಮುಖ ಸಚಿವರು ಹಾಗೂ ಶಾಸಕರು ಇದ್ದಾರೆ ಎಂದು ಮಹಾರಾಷ್ಟ್ರ ಪೋಲೀಸರ ಪ್ರಕಟಣೆ.

# ಯುದ್ಧಕೋರ ನೀತಿ ವಿರುದ್ಧ ಸಿಐಟಿಯು ಪ್ರತಿಭಟನೆ

ಕೇಂದ್ರ ಸರಕಾರ ಅನುಸರಿಸುತ್ತಿರುವ ಯುದ್ಧಕೋರ ನೀತಿಯನ್ನು ಪ್ರತಿಭಟಿಸಿ ಬೆಂಗಳೂರಿನಲ್ಲಿ ಮೇ 25 ರಂದು ಮೈಸೂರು ಬ್ಯಾಂಕ್ ವೃತ್ತದಲ್ಲಿ ನೂರಾರು ಸಿಐಟಿಯು ಕಾರ್ಯಕರ್ತರು ಕೇಂದ್ರ ಸರ್ಕಾರದ ಭೂತದಹನ ಮಾಡುವುದರೊಂದಿಗೆ ಪ್ರತಿಭಟಿಸಿದರು.

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ರಾಷ್ಟ್ರದ ಶ್ರಮಿಕ ಜನತೆ ಎದುರಿಸುತ್ತಿರುವ ನೈಜ ಸಮಸ್ಯೆಗಳಾದ ಬೆಲೆ ಏರಿಕೆ, ನಿರುದ್ಯೋಗ, ಬಡತನ, ಸಾಮಾಜಿಕ ಅಸಮಾನತೆ ತಡೆಗಟ್ಟುವ ಬದಲು ತನ್ನ ಮಿತ್ರಕೂಟದ ಆಂತರಿಕ ಸಂಕಷ್ಟ ಎದುರಿಸಲಾರದೆ ಅಣ್ವಸ್ತ್ರ ಪರೀಕ್ಷೆ ಮುಖಾಂತರ ಉಪಖಂಡದಲ್ಲಿ ಯುದ್ಧಭೀತಿ ಬಿತ್ತಿದೆ ಎಂದ ರಾಜ್ಯ ಸಿಐಟಿಯು ಅಧ್ಯಕ್ಷರಾದ ಎಸ್.ಸೂರ್ಯನಾರಾಯಣ ರಾವ್ ಕೇಂದ್ರ ಸರ್ಕಾರದ ನೀತಿಯನ್ನು ಕಟುವಾಗಿ ಟೀಕಿಸಿದರು.

ಕೇಂದ್ರ ಸರ್ಕಾರ ಕಾರ್ಮಿಕ ಚಳುವಳಿಯ ವಿರೋಧಿಯಾಗಿದ್ದು ಕೋಟ್ಯಾಂತರ ಅಸಂಘಟಿತ ಕಾರ್ಮಿಕರನ್ನೊಳಗೊಂಡು ಎಲ್ಲಾ ಕಾರ್ಮಿಕರಿಗೂ ನ್ಯಾಯಯುತವಾದ ಮೂರನೇ ನಿವೃತ್ತಿ ಸೌಲಭ್ಯ, ಎಲ್ಲರಿಗೂ ಬೋನಸ್, ಕಾರ್ಮಿಕ ಕಾಯಿದೆಗೆ ತಿದ್ದುಪಡಿ ಮಾಡಿ ವೇತನ ಮಿತಿ ತೆಗೆದುಹಾಕುವುದು, ಕಾರ್ಮಿಕ ವಿಮಾ ಯೋಜನೆ ಸರಿಪಡಿಸುವುದೆ ಅಲ್ಲದೆ, ರೋಗಗ್ರಸ್ತ ಸಾರ್ವಜನಿಕ ಉದ್ದಿಮೆಗಳನ್ನು ಪುನಶ್ಚೇತನಗೊಳಿಸುವ ಬದಲು ಕೇಂದ್ರದ ಒಬ್ಬೊಬ್ಬ ಮಂತ್ರಿವರ್ಯರು ಒಂದೊಂದು ಹೇಳಿಕೆ ನೀಡಿ ನೆರೆದೇಶಗಳನ್ನು ಯುದ್ಧಕ್ಕೆ ಕರೆಯುವುದು ದೇಶದ ಶ್ರಮಿಕ ವರ್ಗವನ್ನು ಸಂಕಷ್ಟಕ್ಕೆ ತಳ್ಳುವುದೇ ಆಗಿದೆ ಎಂದರು ರಾಜ್ಯ ಕಾರ್ಯದರ್ಶಿ ವಿಜೆಕೆ.ನಾಯರ್. ಜಾರ್ಜ್ ಫರ್ನಾಂಡೀಸ್‌ರಂತಹ ಕಾರ್ಮಿಕ ಮುಖಂಡರು ಕಾರ್ಮಿಕರ ಸಮಸ್ಯೆಗಳನ್ನು ಮರೆ ಮಾಚಲು ನೆರೆಹೊರೆ ದೇಶಗಳಾದ ಚೀನಾ ಹಾಗೂ ಪಾಕ್‌ಗಳಿಂದ ಬೆದರಿಕೆ ಇದೆ ಎಂಬುದು ಖಂಡನೀಯವೆಂದರು. ಸಭೆಯನ್ನುದ್ದೇಶಿಸಿ ಆರ್.ಶ್ರೀನಿವಾಸ್ ಮತ್ತು ಮೀನಾಕ್ಷಿ ಸುಂದರಂ ಮಾತನಾಡಿದರು.

## ವಯೋಮಿತಿ ವಿರೋಧಿಸಿ ಕೇಂದ್ರ ಸರ್ಕಾರದ ಭೂತ ದಹನ

ವಾಜಪೇಯಿ ನೇತೃತ್ವದ ಬಿ.ಜೆ.ಪಿ. ಕೇಂದ್ರ ಸರಕಾರವು ನೌಕರರ ಸೇವಾ ಅವಧಿಯನ್ನು 58ರಿಂದ 60ಕ್ಕೆ ಏರಿಸಿರುವುದನ್ನು ಪ್ರತಿಭಟಿಸಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ.) ಬೆಂಗಳೂರು ಜಿಲ್ಲಾ ಸಮಿತಿ ಕೇಂದ್ರ ಸರ್ಕಾರದ ಭೂತ ದಹನ ಮಾಡಿತು.

ಸರ್ಕಾರದ ಈ ಕ್ರಮದಿಂದ ವರ್ಷಕ್ಕೆ 18 ಲಕ್ಷ ಯುವಜನರು ಕೆಲಸವಿಲ್ಲದೆ ಬೀದಿಪಾಲಾಗಲಿದ್ದಾರೆ ಎಂದ ಜಿಲ್ಲಾ ಸಮಿತಿ ಅಧ್ಯಕ್ಷ ಗೋಪಾಲಕೃಷ್ಣ ಯುವಜನರು ಕೆಲಸವಿಲ್ಲದೆ ಸಮಾಜ ವಿರೋಧಿಗಳು ಹಾಗೂ ಉಗ್ರಗಾಮಿಗಳಾಗಿ ರೂಪುಗೊಳ್ಳುತ್ತಿದ್ದಾರೆ ಎಂದರು.

ಬಿ.ಜೆ.ಪಿ. ತನ್ನ ಚುನಾವಣೆ ಪ್ರಣಾಳಿಕೆಯಲ್ಲಿ ಕೋಟಿ ಉದ್ಯೋಗ ಸೃಷ್ಟಿಸುವುದಾಗಿ ಹೇಳಿ ಒಂದು ಉದ್ಯೋಗವನ್ನು ಸೃಷ್ಟಿಸುವ ಯೋಜನೆ ರೂಪಿಸುವ ಬದಲು ಕೋಟ್ಯಾಂತರ ಹಣ ಖರ್ಚು ಮಾಡಿ ಬಾಂಬ್ ತಯಾರಿಸುತ್ತೇವೆ ಎಂದು ಹೇಳಿ ಯುವಜನತೆಯ ವಿರುದ್ಧ ನಡೆದಿದೆ ಎಂದು ಕಾರ್ಯದರ್ಶಿ ಲಕ್ಷ್ಮೀಶ್ ಕುಮಾರ್ ಮಾತನಾಡಿದರು. ಕಾರ್ಯಕ್ರಮದಲ್ಲಿ ನೂರಾರು ಯುವಜನತೆ ಪಾಲ್ಗೊಂಡಿದ್ದರು.

## ಪರೀಕ್ಷಾ ಮಂಡಳಿ ಅಕ್ರಮ ತನಿಖೆಗೆ ಎಸ್.ಎಫ್.ಐ. ಒತ್ತಾಯ

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಎಸ್.ಎಸ್.ಎಲ್.ಸಿ. ಉತ್ತರ ಪತ್ರಿಕೆಗಳ ಮೌಲ್ಯಮಾಪನದ ಸಮೀಕರಣ (ಟ್ಯಾಬುಲೇಷನ್) ಕಾರ್ಯವನ್ನು ಖಾಸಗಿ ಕಂಪ್ಯೂಟರ್ ಕಂಪನಿಗಳಿಗೆ ಗುತ್ತಿಗೆ ನೀಡಿರುವ ವಿಚಾರ ಅತ್ಯಂತ ಆಘಾತಕಾರಿಯಾಗಿದ್ದು, ವ್ಯಾಪಕ ಅವ್ಯವಹಾರಗಳ ಉದ್ದೇಶದ ವ್ಯವಸ್ಥಿತ ಪಿತೂರಿ ಇದಾಗಿದ್ದು, ಈ ಹಗರಣದ ಬಗ್ಗೆ ಸರ್ಕಾರ ತಕ್ಷಣ ತನಿಖೆ ನಡೆಸಿ ತಪ್ಪಿತಸ್ಥರನ್ನು ಉಗ್ರವಾಗಿ ಶಿಕ್ಷಿಸಬೇಕೆಂದು ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್.ಎಫ್.ಐ.) ಕರ್ನಾಟಕ ರಾಜ್ಯ ಸಮಿತಿಯು ಒತ್ತಾಯಿಸಿದೆ.

ಈ ತಕ್ಷಣ ಅಂಕಪಟ್ಟಿ ತಯಾರಿಸುವಿಕೆಯ ಪ್ರಕ್ರಿಯೆ ಮತ್ತು ಮೌಲ್ಯಮಾಪನ ಸಮೀಕರಣ ಪ್ರಕ್ರಿಯೆಯಲ್ಲಿ ಯಾವುದೇ ಅಕ್ರಮಕ್ಕೆ ಅವಕಾಶವಿಲ್ಲದಂತೆ ಮತ್ತು ವಿಳಂಬವಿಲ್ಲದೆ ಎಸ್.ಎಸ್.ಎಲ್.ಸಿ. ಫಲಿತಾಂಶ ಒದಗಿಸಲು ಸೂಕ್ತ ವ್ಯವಸ್ಥೆ ಮಾಡಬೇಕೆಂದು ಒತ್ತಾಯಿಸಿದೆ.

ಅಂಕಪಟ್ಟಿ ಕಾಗದ ಮತ್ತಿತರ ಸಮಾಗ್ರಿಗಳ ಖರೀದಿ, ರದ್ದಿ ಕಾಗದ ಮಾರಾಟಗಳಲ್ಲಿನ ಅಕ್ರಮಗಳ ಬಗೆಗೆ ಕೂಡ ಸೂಕ್ತ ತನಿಖೆ ನಡೆಯಬೇಕೆಂದು ಎಸ್.ಎಫ್.ಐ. ಒತ್ತಾಯಿಸಿದೆ.

## ಅಸಂಘಟಿತ ಕಾರ್ಮಿಕರ ಉಪವಾಸ ಸತ್ಯಾಗ್ರಹ

ಹಳೇ ಮದ್ರಾಸ್ ರಸ್ತೆ, ಕೃಷ್ಣರಾಜಪುರದ ಬಳಿ ಇರುವ ಐ.ಟಿ.ಐ. ಕಾರ್ಖಾನೆಯಲ್ಲಿ 10-15 ವರ್ಷಗಳಿಂದ ಸುಮಾರು 500 ಜನ ಗುತ್ತಿಗೆ ಕಾರ್ಮಿಕರು ಕೆಲಸ ಮಾಡುತ್ತಿದ್ದು ಕನಿಷ್ಟ ವೇತನ, ರಜಾ ಸೌಲಭ್ಯ, ತುಟ್ಟಿ ಭತ್ಯ ಇತ್ಯಾದಿಗಳಿಂದ ವಂಚಿತರಾಗಿದ್ದು ಏಪ್ರಿಲ್ 15ರಂದು 12 ವರ್ಷಗಳಿಂದ ಸ್ಯಾನಿಟರಿ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ 61 ಜನ ಗುತ್ತಿಗೆ ಕಾರ್ಮಿಕರಿಗೆ ಕೆಲಸ ನಿರಾಕರಣೆ ಮಾಡಿ ಆ ಸ್ಥಾನದಲ್ಲಿ ಹೊಸ ಕಾರ್ಮಿಕರನ್ನು ನೇಮಿಸಿಕೊಂಡಿರುತ್ತಾರೆ.

ಆಡಳಿತ ವರ್ಗದ ಈ ಕಾರ್ಮಿಕ ವಿರೋಧಿ ನೀತಿಯನ್ನು ಪ್ರತಿಭಟಿಸಿ ಕಾರ್ಮಿಕರಿಗೆ ನ್ಯಾಯ ದೊರಕಿಸಿ ಕೊಡಬೇಕೆಂದು ಏಪ್ರಿಲ್ 20ರಂದು ಕಾರ್ಮಿಕ ಆಯುಕ್ತರಿಗೆ ಅರ್ಜಿ ಸಲ್ಲಿಸಲಾಗಿದ್ದು ಏನೂ ಪ್ರಯೋಜನವಾಗಲಿಲ್ಲ. ಆದ್ದರಿಂದ ಕಾರ್ಖಾನೆಯ ಮುಖ್ಯದ್ವಾರದ ಬಳಿ ಮೇ 13 ರಿಂದ ರತ್ನಮ್ಮ, ಸಾಕಮ್ಮ, ರಾಜಣ್ಣ, ನರಸಿಂಹ ಮೂರ್ತಿ ಅನಿರ್ದಿಷ್ಟ ಕಾಲ ಉಪವಾಸ ನಡೆಸುತ್ತಿದ್ದಾರೆ.

## ಅಂಗನವಾಡಿ ಕಾರ್ಯಕರ್ತೆಯರ ಪ್ರತಿಭಟನೆ

ಬಳ್ಳಾರಿ: ಹಗರಿಬೊಮ್ಮನಹಳ್ಳಿ ತಾಲೂಕು ಅಂಗನವಾಡಿ ಕಾರ್ಯಕರ್ತೆಯರು ತಮ್ಮ ಈಡೇರದ ಬೇಡಿಕೆಗಳ ಈಡೇರಿಕೆಗಾಗಿ ಹಾಗೂ ಸರ್ಕಾರದ ನಿರ್ಲಕ್ಷ್ಯತನದ ವಿರುದ್ಧ ಪ್ರತಿಭಟನೆ ನಡೆಸಿದರು. 200 ಕ್ಕೂ ಹೆಚ್ಚು ಕಾರ್ಯಕರ್ತೆಯರು ಮೆರವಣಿಗೆ ನಡೆಸಿ. ತಹಶಿಲ್ದಾರರಿಗೆ ಹಾಗೂ ಮಕ್ಕಳ ಕಲ್ಯಾಣ ಇಲಾಖೆಗೆ ಮನವಿ ಸಲ್ಲಿಸಿದರು. ಮೆರವಣಿಗೆಯಲ್ಲಿ ಸಂಘದ ಟಿ.ದೇವಮ್ಮ, ಡಿ.ಸೌಭಾಗ್ಯ, ಜಿ.ರತ್ನಮ್ಮ ಹಾಗೂ ಡಿ.ವೆಂಕಟರಮಣ ಭಾಗವಹಿಸಿ ಮಾತನಾಡಿದರು.

ಅಂಗನವಾಡಿ ಕಾರ್ಯಕರ್ತೆಯರ ಹೋರಾಟಕ್ಕೆ ಬೆಂಬಲ ಸೂಚಿಸಿ ಡಿ.ವೈ.ಎಫ್.ಐ.ನ ಜಿ.ಗಣೇಶ್, ಆಟೋ ಚಾಲಕರ ಸಂಘದ ಎಂ.ಅಬ್ದುಲ್ ರಜಾಕ್, ಕೈಲಾಸ್, ಟಿ.ಅನ್ವರ್‌ಬಾಷಾ ಹಾಗೂ ಜೆಎಂಎಸ್ ನ ಬಿ.ಮಾಳಮ್ಮ ಮಾತನಾಡಿದರು.

## ಬಿ.ಡಿ.ಎ. ಯಿಂದ ಮನೆಗಳ ಜಖಂ

ಬೆಂಗಳೂರು: ಬೊಮ್ಮನಹಳ್ಳಿ ನಗರ ಸಭೆ ವ್ಯಾಪ್ತಿಯ ದೇವರಚಿಕ್ಕನಹಳ್ಳಿಯ ಲೇಔಟ್‌ನಲ್ಲಿ 500 ರವಿನ್ನೂ ಮನೆಗಳಿದ್ದು ಇತ್ತೀಚಿಗೆ ನಗರ ಸಭೆ ವಿಧಿಸಿದ್ದ ಅಭಿವೃದ್ಧಿ ಶುಲ್ಕ ಪಾವತಿಸಿ ಹಕ್ಕು ಪತ್ರ ಪಡೆದಿದ್ದು. ರಸ್ತೆ, ದೀಪ, ನೀರು ಸೌಕರ್ಯ ಹೊಂದಿದ್ದು 1990 ರಲ್ಲಿ ಇದನ್ನು ಅಭಿವೃದ್ಧಿ ಪ್ರದೇಶ ಎಂದು ಸೂಚಿಸಲಾಗಿದೆ. ಆದರೆ ಬಿಡಿಎ ಕಛೇರಿ ರಸ್ತೆ ಮಾಡುವ ನೆಪದಲ್ಲಿ ಮನೆಗಳನ್ನು ಒಡೆಯುತ್ತಿರುವುದನ್ನು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್ಐ) ಖಂಡಿಸಿ. ಕೂಡಲೇ ಮನೆ ಮುರುಕ ಕೆಲಸ ನಿಲ್ಲಿಸುವಂತೆ ಆಗ್ರಹಿಸಿದೆ. ಇಲ್ಲದಿದ್ದರೆ ಭಾರೀ ಪ್ರತಿಭಟನೆ ನಡೆಸಲಾಗುವುದೆಂದು ಎಚ್ಚರಿಸಿದೆ.



### ದಾವಣಗೆರೆಯಲ್ಲಿ

## ಸಮತಾ ಸಮಾಜದ ಕನಸುಗಾರ.... ಇ.ಎಂ.ಎಸ್.ಗೆ 'ನಮನ'

ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ದುಡಿಯುವ ಜನತೆಯ ಪಕ್ಷಪಾತಿ, ಸಮತಾ ಸಮಾಜದ ಕನಸುಗಾರ, ಕ್ರಾಂತಿಕಾರಿ ಭೂಸುಧಾರಣೆಗಳ ಶಿಲ್ಪಿ, ಮಾರ್ಕ್ಸ್‌ವಾದಿ ಚಿಂತನೆಯ ಚಿಲುಮೆ, ದೇಶ ಕಂಡ ಅಪರೂಪದ ರಾಜಕಾರಣಿ.... ಕಾಮ್ರೇಡ್ ಇಎಂಎಸ್ ಅವರಿಗೊಂದು 'ನಮನ' ಎಂಬ ಕಾರ್ಯಕ್ರಮವನ್ನು ದಾವಣಗೆರೆಯ ರೋಟರಿ ಕ್ಲಬ್‌ನಲ್ಲಿ ಮಾರ್ಚ್ 30 ರಂದು ಏರ್ಪಡಿಸಲಾಗಿತ್ತು.

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಹಾಗೂ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್‌ಐ) ಜಂಟಿಯಾಗಿ ಸಂಘಟಿಸಿದ್ದ 'ಇ.ಎಂ.ಎಸ್.ನಮನ' ಕಾರ್ಯಕ್ರಮದಲ್ಲಿ ಸಾಹಿತಿಗಳು, ಪತ್ರಕರ್ತರು, ವಕೀಲರು, ಪ್ರಗತಿಪರ ಸಂಘಟನೆಗಳು ಬ್ಯಾಂಕ್, ವಿಮೆ, ಔಷಧಿ ಸಂಘಟನೆಗಳ ಮುಖಂಡರುಗಳು ವಿದ್ಯಾರ್ಥಿ-ಯುವಜನ- ಮಹಿಳೆಯರು ಸೇರಿದಂತೆ ನೂರಕ್ಕೂ ಅಧಿಕ ಜನರು ಪಾಲ್ಗೊಂಡು ಈ ಶತಮಾನದ ದಾರ್ಶನಿಕ ಕಾಮ್ರೇಡ್ ಇಎಂಎಸ್ ರವರ ಬದುಕು-ಬರಹ ಅವರ ತ್ಯಾಗಮಯ ಜೀವನವನ್ನು ನೆನಪಿಸುತ್ತಾ ತಮ್ಮ ನಮನಗಳನ್ನು ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅನಿಸಿಕೆಗಳನ್ನು ಹಂಚಿಕೊಂಡ 'ಜನತಾ ವಾಣಿ' ದಿನಪತ್ರಿಕೆ ಸಂಪಾದಕ ಹೆಚ್.ಎನ್.ಷಡಾಕ್ಷರಪ್ಪ 1957 ರಲ್ಲಿ ಇ.ಎಂ.ಎಸ್. ಕೇರಳದಲ್ಲಿ ನಡೆಸಿದ ಕ್ರಾಂತಿ ಅದ್ಭುತವಾದುದು. ಅದು ಆಗಿನ ಕಾಲದಲ್ಲಿ ನನ್ನಂತ ಯುವಕರಿಗೆ ಆಕರ್ಷಣೆ ಹಾಗೂ ಪ್ರೇರೇಪಿಸಿದ ಘಟನೆಯಾಗಿತ್ತು. ಕ್ರಾಂತಿಕಾರಿ ಭೂಸುಧಾರಣೆಗಳನ್ನು ಜಾರಿಗೆ ತರುವುದರ ಮೂಲಕ ಇ.ಎಂ.ಎಸ್. ಇಡೀ ದೇಶದ ದುಡಿಯುವ ಜನತೆಯ ಕಣ್ಮಣಿಯಾಗಿದ್ದರು. ನಾನು ಕಮ್ಯುನಿಸ್ಟನಲ್ಲದಿದ್ದರೂ ಆ ಸಿದ್ಧಾಂತದ ಬಗ್ಗೆ ಒಲವುಳ್ಳವನು. ಈ ದೇಶದಲ್ಲಿ ಭ್ರಷ್ಟಾಚಾರ ರಹಿತ ಸರ್ಕಾರ ನೀಡುವುದು ಕಮ್ಯುನಿಸ್ಟರಿಂದ ಮಾತ್ರ ಸಾಧ್ಯವೆಂದ ಅವರು ಇ.ಎಂ.ಎಸ್. ರವರ ಕೌಟುಂಬಿಕ ಬದುಕು ಅವರು ನಡೆಸಿದ ಸಾಮಾಜಿಕ ಆಂದೋಲನವನ್ನು ನೆನಪಿಸಿದರು.

ಉಪನ್ಯಾಸಕರು ಹಾಗೂ ಪ್ರಗತಿಪರ ಬರಹಗಾರರಾದ ಡಾ|| ಡಿ.ಎ.ಲೋಕಾಪೂರ, ಇ.ಎಂ.ಎಸ್.ರವರ ಬೌದ್ಧಿಕ ಚಿಂತನೆಗಳು ಭಾರತದ ಸಮಾಜದ ಪರಿಸ್ಥಿತಿಗೆ ಪ್ರಸ್ತುತವಾದವುಗಳು. ಆದರೆ ಅಂತಹ ಚಿಂತನೆಗಳನ್ನು ನಾವು ಕೇವಲ ಬೌದ್ಧಿಕವಾಗಿ ಒಪ್ಪಿದರೆ ಸಾಲದು ಅವುಗಳ ಜಾರಿಗಾಗಿ ಶ್ರಮಪಡುವುದು ಅಗತ್ಯವಿದೆ ಎಂದರು. ಕನ್ನಡ ಸಾಹಿತ್ಯ ಪರಿಷತ್‌ನ ಜಿಲ್ಲಾ ಅಧ್ಯಕ್ಷರಾದ ಡಾ.ಎಂ.ಜಿ.ಈಶ್ವರಪ್ಪ ಮಾತನಾಡುತ್ತಾ ಇ.ಎಂ.ಎಸ್. ಅವರೊಬ್ಬ ಮಹಾನ್ ವ್ಯಕ್ತಿ. ಅಂತವರ ಬಗ್ಗೆ ಅರುಂಧತಿ ರಾಯ್ ಎನ್ನುವ ಸಣ್ಣ ಮನಸ್ಸಿನ ಹೆಣ್ಣು ಮಗಳು ಕೀಳಾಗಿ ಮಾತನಾಡಿದ್ದು ಪತ್ರಿಕೆಗಳಲ್ಲಿ ನೋಡಿ ನಾನು ತುಂಬಾ ನೊಂದುಕೊಂಡವನು. ಆ ರೀತಿ ಮಾತನಾಡಿದ್ದು ಬಹುರಾಷ್ಟ್ರೀಯ ಕಂಪನಿಗಳು ನೀಡುವ ಪ್ರಶಸ್ತಿಗಳು. ಹೀಗಾಗಿ ಸಾಮ್ರಾಜ್ಯಶಾಹಿಗಳ ಏಜೆಂಟಳಾಗಿ ಶ್ರೀಮತಿ ರಾಯ್ ಮಾತನಾಡಿದ್ದಾಳೆ. ಅಂತಹ ಏಜೆಂಟರಿಗೆ ಮಾತ್ರ ಪ್ರಶಸ್ತಿಗಳು ಸಿಗುವುದು ಎನ್ನುತ್ತಾ ಕಾಂ. ಇ.ಎಂ.ಎಸ್. ಇಂತಹ ಎಲ್ಲಾ ಪ್ರಶಸ್ತಿಗಳ ಎಲ್ಲೆಯನ್ನೂ ಮೀರಿ ನಿಂತ ಮಹಾನ್ ಚಿಂತಕ ಎಂದು ಹೇಳಿ ಪ್ರಶಸ್ತಿಗಳ ಮೂಲಕ ಒಬ್ಬ ವ್ಯಕ್ತಿಯ ಬರಹವನ್ನು ಅಳೆಯಬಾರದು. ಅದು ಬಂಡವಾಳಶಾಹಿ ಸಮಾಜದ ಲಕ್ಷಣವೆಂದರು.

ಕಾರ್ಯಕ್ರಮದಲ್ಲಿ ಡಿವೈಎಫ್‌ಐ ಮುಖಂಡ, ಬ್ರಹ್ಮದೇವ ತುವಳಗಿ, ಸಿಪಿಐನ ರುದ್ರಮುನಿ, ಉಪನ್ಯಾಸಕ ತಿಪ್ಪೇಸ್ವಾಮಿ ಮುಂತಾದವರು ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ನಿತ್ಯಾನಂದಸ್ವಾಮಿ ವಹಿಸಿ ಮಾತನಾಡುತ್ತಾ ಇ.ಎಂ.ಎಸ್. ಸದಾ ದೇಶದಲ್ಲಿ ಚರ್ಚೆಯಲ್ಲಿರುತ್ತಿದ್ದ ಮುಖಂಡರಾಗಿದ್ದರು. ಅವರ ಬರಹಗಳು ಕೇರಳದಲ್ಲಿ ಮಾತ್ರವಲ್ಲ ಜಗತ್ತಿನಲ್ಲಿಯೇ ಬುದ್ಧಿಜೀವಿ ವಲಯದಲ್ಲಿ ಚರ್ಚೆಗೆ ಅರ್ಹವಾಗಿರುವಂತವಾಗಿರುತ್ತಿದ್ದವು. ಸೋವಿಯತ್ ವ್ಯವಸ್ಥೆ ಕುಸಿದು ಬಿದ್ದಾಗ ಭಾರತದಲ್ಲಿ ಎಡ ಆಂದೋಲನ ದೃಢ ನಿರ್ಧಾರ ತೆಗೆದುಕೊಳ್ಳುವಲ್ಲಿ ಇಎಂಎಸ್ ಅವರ ವೈಜ್ಞಾನಿಕ ಚಿಂತನೆಗಳು ಮೇಲ್ಪಂಕ್ತಿಯಾಗಿದ್ದವು. ಇ.ಎಂ.ಎಸ್. ಎಲ್ಲ ಜನವಿಭಾಗಗಳಿಗೂ ಪ್ರಿಯವಾದ, ರಾಜಕೀಯ ಎಲ್ಲೆಯನ್ನು ಮೀರಿ ಬೆಳೆದಂತಹ ಮಾರ್ಕ್ಸ್‌ವಾದಿ ಚಿಂತಕರಾಗಿದ್ದರು. ಅವರ ಅಗಲುವಿಕೆ ದೇಶದ ಎಡ-ಪ್ರಜಾಪ್ರಭುತ್ವ ಆಂದೋಲನ ಚೇತರಿಸಿಕೊಳ್ಳಲಾಗದ ಪೆಟ್ಟು ನೀಡಿದೆ ಎಂದರು.

ಆರಂಭದಲ್ಲಿ ಇಎಂಎಸ್ ರವರಿಗೆ ಎರಡು ನಿಮಿಷ ಮೌನ ಆಚರಿಸಲಾಯಿತು. ಡಿವೈಎಫ್‌ಐ ಜಿಲ್ಲಾ ಸಂಚಾಲಕ ಕೆ.ಮಹಾಂತೇಶ್ ಪ್ರಾಸ್ತವಿಕವಾಗಿ ಮಾತನಾಡಿ ಎಲ್ಲರನ್ನೂ ಸ್ವಾಗತಿಸಿದರು. ಎಸ್.ಎಫ್.ಐ.ನ ಪಿ.ಮಂಜುನಾಥ್ ವಂದಿಸಿದರು.



ಬಿಜೆಪಿ ನೇತೃತ್ವದ ಸರಕಾರ ಪರಮಾಣು ಸ್ಫೋಟ ನಡೆಸಿರುವುದು ರಾಷ್ಟ್ರೀಯ ಭದ್ರತೆಗಾಗಿ ಅಲ್ಲ, ತನ್ನ ಆಂತರಿಕ ಕಚ್ಚಾಟಗಳನ್ನು ಮರೆ ಮಾಚಲು; ಅದಕ್ಕೂ ಮುಖ್ಯವಾಗಿ ಬಿಜೆಪಿಯ ಬಚ್ಚಿಟ್ಟ ಅಜೆಂಡಾವನ್ನು ಜಾರಿಗೆ ತರಲಿಕ್ಕಾಗಿ. ಅದರ ಈ ಅಪಾಯಕಾರೀ ಆಟಕ್ಕೆ ದೇಶ ಬೆಲೆ ತೆರಬೇಕಾಗುತ್ತದೆ. ನಮ್ಮ ನೆರೆದೇಶಗಳೊಂದಿಗೆ ಸಂಬಂಧ ಹದಗೆಟ್ಟು ನಮ್ಮ ಉಪಖಂಡದಲ್ಲೂ ಶಸ್ತ್ರಾಸ್ತ್ರ ಪೈಪೋಟಿಯ ಆತಂಕಕಾರಿ ಬೆಳವಣಿಗೆ ಒಂದೆಡೆಯಾದರೆ ಅದರಿಂದಾಗಿ ಜನಗಳ ಮೇಲೆ ಮತ್ತಷ್ಟು ಹೊರೆ ಇನ್ನೊಂದು ಕಡೆ. ಇದು ಸಾಮ್ರಾಜ್ಯಶಾಹಿಗೆ ಈ ಪ್ರದೇಶದಲ್ಲಿ ಮೂಗು ತೂರಲು ಸುವರ್ಣಾವಕಾಶ ಒದಗಿಸುತ್ತಿದೆ ಎನ್ನುತ್ತಾರೆ ಸಿಪಿಐ(ಎಂ) ಪ್ರಧಾನಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್‌ರವರು.

# ಪರಮಾಣು ಪರೀಕ್ಷೆಗಳ ಹಿಂದಿದೆ ಕೋಮುವಾದಿ ಅಜೆಂಡಾ

ಮೇ 11 ಹಾಗೂ 13 ರಂದು ರಾಜಸ್ತಾನದ ಪೋಖ್ರಾನ್‌ನಲ್ಲಿ ಐದು ಪರಮಾಣು ಸಾಧನಗಳ ಭೂಗತ ಪರೀಕ್ಷಣೆಗಳ ಪರಿಣಾಮಗಳು, ತೊಂದರೆಗಳು ಈಗ ಹೆಚ್ಚೆಚ್ಚು ಸ್ಪಷ್ಟವಾಗುತ್ತಿವೆ. ಇದರ ಉದ್ದೇಶವಂತೂ ಮೊದಲ ದಿನದಿಂದಲೇ ಸ್ಪಷ್ಟವಾಗಿತ್ತು. ಪ್ರಧಾನ ಮಂತ್ರಿಗಳು ಅಮೆರಿಕಾದ ಅಧ್ಯಕ್ಷರಿಗೆ ಪತ್ರ ಬರೆದು ಈ ಸ್ಫೋಟಕ್ಕೆ ಕಾರಣವೆಂಬುದನ್ನು ತಿಳಿಸಿದರೂ ಹಲವು ದಿನಗಳ ನಂತರವೂ ಭಾರತದ ಜನತೆಗೆ ವಿವರ ನೀಡಬೇಕೆಂದು ಬಿಜೆಪಿ ನೇತೃತ್ವದ ಸರಕಾರಕ್ಕೆ ಅನಿಸಲಿಲ್ಲ. ಅರವತ್ತರ ದಶಕದಿಂದಲೇ ಆರ್.ಎಸ್.ಎಸ್. ಮತ್ತು ಬಿಜೆಪಿಯ ಹಿಂದಿನ ಅವತಾರ ಜನಸಂಘ ಬಾಂಬ್ ತಯಾರಿಸಬೇಕೆಂದು ಒತ್ತಾಯಿಸುತ್ತಾ ಬಂದಂತವುಗಳು. ಇದು ಅವರ 'ಹಿಂದುತ್ವ' ಸಿದ್ಧಾಂತಕ್ಕೆ ಅನುಗುಣವಾದ ಒಂದು ಬೇಡಿಕೆ.

1991ರ ನಂತರದ ತನ್ನ ಎಲ್ಲಾ ಚುನಾವಣಾ ಪ್ರಣಾಳಿಕೆಗಳಲ್ಲಿ ಅದು ಭಾರತ ಪರಮಾಣು ದಾರಿ ಹಿಡಿಯಬೇಕು ಎಂದು ಪ್ರತಿಪಾದಿಸುತ್ತಾ ಬಂದಿದೆ. 1991ರ ಪ್ರಣಾಳಿಕೆ "ನಮ್ಮ ರಕ್ಷಣಾ ಪಡೆಗಳಿಗೆ ಪರಮಾಣು ಹಲ್ಲು ಒದಗಿಸಬೇಕು" ಎಂದಿದ್ದರೆ, 1996ರ ಪ್ರಣಾಳಿಕೆ "ದೇಶದ ಪರಮಾಣು ಧೋರಣೆಯ ಮರುಮೌಲ್ಯಮಾಪನ ಮಾಡಬೇಕು ಮತ್ತು ಪರಮಾಣು ಅಸ್ತ್ರಗಳನ್ನು ಹೊಂದುವ ಆಯ್ಕೆಯನ್ನು ಚಲಾಯಿಸಬೇಕು" ಎಂದಿತ್ತು. 1998ರ ಪ್ರಣಾಳಿಕೆ ಇನ್ನೂ ಮುಂದೆ ಹೋಗಿ ನಾವು "ದೇಶದ ಪರಮಾಣು ಧೋರಣೆಯನ್ನು ತ್ವರಿತಗೊಳಿಸಿ ಪರಮಾಣು ಅಸ್ತ್ರಗಳನ್ನು ಹೊಂದುವ ಆಯ್ಕೆಯನ್ನು ಚಲಾಯಿಸಬೇಕು" ಎಂದಿದೆ. ಬಿಜೆಪಿ ಮತ್ತು ಅದರ ಮಿತ್ರರು ಅಂಗೀಕರಿಸಿದ 'ರಾಷ್ಟ್ರೀಯ ಆಡಳಿತ ಅಜೆಂಡಾ' ಮೊತ್ತಮೊದಲ ಸಾಮರಿಕ ರಕ್ಷಣಾ ಮರುವಿಮರ್ಶೆಯ ಮಾತಿನ ಹಿನ್ನೆಲೆಯಲ್ಲಿ ಹಿಂಗಂದಿದೆ-"ಆ ಉದ್ದೇಶದಿಂದ ಪರಮಾಣು ಧೋರಣೆಯ ಮರುಮೌಲ್ಯಮಾಪನ ಮಾಡುತ್ತೇವೆ ಮತ್ತು ಪರಮಾಣು ಅಸ್ತ್ರಗಳನ್ನು ಹೊಂದುವ ಆಯ್ಕೆಯನ್ನು ಚಲಾಯಿಸುತ್ತೇವೆ."

**ಅಲುಗಾಡುತ್ತಿರುವಂತವರಿಗೆ ಬಾಂಬೊಂದು ಆಸರೆ!**

ಈ ಪರೀಕ್ಷಣೆಗಳು ಭಾರತ ಪರಮಾಣು ಅಸ್ತ್ರಗಳನ್ನು ಹೊಂದುತ್ತದೆ ಎಂಬುದರ ಸಂಕೇತ. ಬಿಜೆಪಿ ತಾನು ತನ್ನ ಪ್ರಣಾಳಿಕೆಯಲ್ಲಿ ಹೇಳಿದ ಒಂದು ಭರವಸೆಯನ್ನು ಈಡೇರಿಸುತ್ತಿದ್ದೇನೆ ಎಂದು ಚಿತ್ರಿಸಬಯಸಬಹುದು. ಆದರೆ ಇದಕ್ಕೆ ನಿಜ ಕಾರಣ ಮಾತ್ರ ಬೇರೆಯೇ. ಒಂದು ಅಲುಗಾಡುವ ಸಮ್ಮಿಶ್ರ ಸರಕಾರವನ್ನು ನಡೆಸಬೇಕಾದಂತಹ ಸ್ಥಿತಿಯಲ್ಲಿ, ದೇಶ ಎದುರಿಸುತ್ತಿರುವ ಗಂಭೀರ ಸಮಸ್ಯೆಗಳನ್ನು ಪರಿಹರಿಸಲಾಗದೆ ಬಿಜೆಪಿಗೆ ಜನಗಳ ಗಮನವನ್ನು ಬೇರೆಡೆಗೆ ತಿರುಗಿಸಬೇಕಾಗಿದೆ. ಬಾಂಬು ಅದಕ್ಕೆ ಸಿದ್ಧ ಸಾಧನವಾಗಿಯೇ ಕಂಡಿದೆ. ಒಂದು ಮಟ್ಟದಲ್ಲಿ ರಾಷ್ಟ್ರಾಂಧ ಹಾಗೂ ಸಂಕುಚಿತ ಭಾವನೆಗಳನ್ನು ಉದ್ರೇಕಿಸುತ್ತಾ ಇನ್ನೊಂದು ಕಡೆ ಇದುವರೆಗೆ ಭಾರತದ ಬಳಿ ತಂತ್ರಜ್ಞಾನವೇ ಇರಲಿಲ್ಲವೋ ಏನೋ, ಬಿಜೆಪಿ ಅಧಿಕಾರ ವಹಿಸಿಕೊಂಡ ಮೇಲಷ್ಟೆ ಇದು ಸಾಧ್ಯವಾಯಿತೇನೋ ಎಂಬಂತೆ ಮಾಧ್ಯಮಗಳಲ್ಲಿ ಪ್ರಚಾರ ನಡೆಸಲಾಗುತ್ತಿದೆ. ಒಂದೆಡೆ ನಮ್ಮ ವಿಜ್ಞಾನಿಗಳು ಹಲವಾರು ವರ್ಷಗಳ ಕಾಲ ಪಟ್ಟ ಪರಿಶ್ರಮದ ಎಲ್ಲಾ ಕೀರ್ತಿಯನ್ನು ತಾನು ಬಾಚಿಕೊಳ್ಳಲು ಕಾತುರವಾಗಿರುವ ಬಿಜೆಪಿ ಇನ್ನೊಂದೆಡೆ ರಾಜಕೀಯವಾಗಿ ತನ್ನನ್ನು ಬಲಪಡಿಸಿಕೊಳ್ಳಲು ಪ್ರಯತ್ನಿಸುತ್ತಿದೆ.

ಈ ತಂತ್ರಜ್ಞಾನವನ್ನು ದೇಶೀಯವಾಗಿ ಬೆಳೆಸುವ ಬಗ್ಗೆ ದೇಶ ಖಂಡಿತಾ ಹೆಮ್ಮೆ ಪಡಬಹುದು. ಆದರೆ ಶಸ್ತ್ರಾಸ್ತ್ರ ಪೈಪೋಟಿಯ ಹೊಣೆ ಹೊರುವಲ್ಲಿ ಮುಂಚೂಣಿಯಲ್ಲಿರಬೇಕು ಎಂದು ದೇಶಕ್ಕೆ ಕರೆ ಕೊಡಲಾಗುತ್ತಿರುವುದು ನಿಜಕ್ಕೂ ಶೋಚನೀಯ. ಕೋಮುವಾದಿ ಮತ್ತು ಫ್ಯಾಸಿಸ್ಟ್ ಮಾದರಿಯ ಸಿದ್ಧಾಂತಕ್ಕೆ ಬದ್ಧರಾದವರು ಮಾತ್ರವೇ ಇಂತಹ ದಾರಿ ಹಿಡಿಯಲು ಸಾಧ್ಯ. ಗೃಹಮಂತ್ರಿ ಅಡ್ವಾಣಿಯವರ ಹೇಳಿಕೆ ಇದನ್ನು ಸ್ಪಷ್ಟಪಡಿಸುತ್ತದೆ. ಭಾರತ ಪರಮಾಣು ಶಸ್ತ್ರಸಜ್ಜಿತ ದೇಶವಾದ ಮೇಲೆ ಭಾರತ-ಪಾಕಿಸ್ತಾನ ಸಂಬಂಧಗಳಲ್ಲಿ ಗುಣಾತ್ಮಕ ಬದಲಾವಣೆ ಬರುತ್ತದೆ ಎಂದು ಪ್ರಧಾನಿ ಹೇಳಿದ್ದಾರೆ. ಈ ಮೊದಲು ಭಾರತ ಪರಮಾಣು ಅಸ್ತ್ರಗಳನ್ನು ಸ್ವಂತ ರಕ್ಷಣೆಗೆ ಮಾತ್ರ ಬಳಸುತ್ತದೆ ಎಂದು ಹೇಳಿದ್ದರು. ತದ್ವಿರುದ್ಧವಾಗಿ ಈಗ ನೆರೆ ದೇಶಗಳೊಂದಿಗೆ ವಿವಾದಗಳನ್ನು ಪರಿಹರಿಸಲು ಪರಮಾಣು ಶಸ್ತ್ರಾಸ್ತ್ರಗಳನ್ನು ಬಳಸುವ ಬೆದರಿಕೆ ಹಾಕಲಾಗುತ್ತಿದೆ.

**ಇದಕ್ಕೆ ಜನಾದೇಶವಿತ್ತೆ?**

ಶಾಂತಿ, ಸಾಮ್ರಾಜ್ಯಶಾಹಿ-ವಿರೋಧಿ ಒತ್ತು, ಸಾರ್ವತ್ರಿಕ ನಿಶ್ಶಸ್ತ್ರೀಕರಣಕ್ಕೆ ಶತಪ್ರಯತ್ನ, ನೆರೆ ದೇಶಗಳೊಂದಿಗೆ ಮಿತ್ರತ್ವಪೂರ್ಣ ಉತ್ತಮ ಸಂಬಂಧಗಳನ್ನು ಬೆಳೆಸುವ ಧೋರಣೆಯನ್ನು ಇದುವರೆಗೆ ಅನುಸರಿಸಲಾಗುತ್ತಿತ್ತು. ಈಗ ಅದನ್ನು ಕೈಬಿಡಲಾಗುತ್ತಿದೆ. ಅದರ ಬದಲು ನೆರೆ ದೇಶಗಳೊಂದಿಗೆ ಬಿಗುವು ಹೆಚ್ಚಿಸುವ ಉದ್ರೇಕಕಾರಿ ಕ್ರಮಗಳು, ಶಸ್ತ್ರಾಸ್ತ್ರ ಪೈಪೋಟಿಯನ್ನು ವಿಸ್ತರಿಸುವ ಕ್ರಮಗಳನ್ನು ಕೈಗೊಳ್ಳಲಾಗುತ್ತಿವೆ. ಇದು ಕೊನೆಗೆ ದೇಶವನ್ನು ರಾಜಕೀಯವಾಗಿ, ಆರ್ಥಿಕವಾಗಿ ಸಾಮ್ರಾಜ್ಯಶಾಹಿಗಳ ಮಡಲಿಗೆ ಹಾಕಲಿದೆ. ಬಿಜೆಪಿ ನೇತೃತ್ವದ ಸರಕಾರ ಇಂತಹ ಬಹಳ ಪರಿಣಾಮಕಾರಿಯಾದ ಪ್ರಮುಖ ಧೋರಣೆಗೆ ಸಂಬಂಧಪಟ್ಟಂತೆ ತನ್ನದೇ ಮಿತ್ರ ಪಕ್ಷಗಳೊಂದಿಗಾಗಲೀ, ಪ್ರಧಾನ ಪ್ರತಿಪಕ್ಷಗಳೊಂದಿಗಾಗಲೀ ಸಮಾಲೋಚಿಸುವ ಗೋಜಿಗೂ ಹೋಗಲಿಲ್ಲ. ಈ ಮೂಲಕ ಅದು ಪ್ರಜಾಪ್ರಭುತ್ವ ಹಕ್ಕುಗಳ ಬಗ್ಗೆ ಎಷ್ಟೇ ಮಾತಾಡಿದರೂ ವಾಸ್ತವವಾಗೀ ಅದು ಪ್ರಜಾಪ್ರಭುತ್ವ - ವಿರೋಧಿ ಎಂಬ ನಿಜ ಸಂಗತಿ ಮತ್ತೊಮ್ಮೆ ಬಯಲಾಯಿತು. ಇತರ ಪಕ್ಷಗಳೊಡನೆ ಸಮಾಲೋಚಿಸುವುದು ಬಹುಮತವಿಲ್ಲದೆ ಅಲುಗಾಡುವ ಸ್ಥಿತಿಯಲ್ಲಿರುವ ಈ ಸರಕಾರದ ಕರ್ತವ್ಯವಾಗಿತ್ತು. ಹಲವು ವರ್ಷಗಳ ಕಾಲ ದೇಶ ಅನುಸರಿಸಿದ ರಾಷ್ಟ್ರೀಯವಾಗಿ ಸ್ವೀಕೃತವಾದ ಒಂದು ಧೋರಣೆಯನ್ನು ಬದಲಿಸುವ ಜನಾದೇಶ ಬಿಜೆಪಿಗಿರಲಿಲ್ಲ. ಇದೊಂದು ಪ್ರಜಾಪ್ರಭುತ್ವ-ವಿರೋಧಿ ಕ್ರಮ.

ಈ ಧೋರಣೆ ಬದಲಾವಣೆ ದೂರಗಾಮೀ ಪರಿಣಾಮಗಳನ್ನು, ಅಂತರ್‌ರಾಷ್ಟ್ರೀಯ ದುಷ್ಪರಿಣಾಮಗಳನ್ನು ತರಲಿದೆ. ಒಂದೆಡೆ ಇದು ದೇಶದ ಮೇಲೆ ಆರ್ಥಿಕ ದಿಗ್ಬಂಧನಗಳನ್ನು ತಂದರೆ (ಪರಮಾಣು ಅಸ್ತ್ರಗಳನ್ನು ಹೊಂದಿರುವ ದೇಶಗಳಿಗೆ ಹೀಗೆ ಮಾಡುವ ಹಕ್ಕು ಇಲ್ಲದಿದ್ದರೂ) ಇನ್ನೊಂದು ಕಡೆ ನೆರೆ ದೇಶಗಳೊಂದಿಗೆ ಉತ್ತಮ ಸಂಬಂಧಗಳು, ಪರಮಾಣು ನಿಶ್ಶಸ್ತ್ರೀಕರಣ ಹಾಗೂ ಶಾಂತಿಗಾಗಿ ಬಹಳ ವರ್ಷಗಳಿಂದ ನಡೆಸಿದ ಪ್ರಯತ್ನಗಳು ಹಿನ್ನಡೆ ಕಾಣುತ್ತವೆ.

**ಶಸ್ತ್ರಾಸ್ತ್ರ ಪೈಪೋಟಿಯ ಆರಂಭ**

ಈ ಎರಡನೇ ಅಂಶವನ್ನು ಮೊದಲು ತಗೊಳ್ಳೋಣ. ಪಾಕಿಸ್ತಾನದೊಡನೆ ನಮ್ಮ ಸಂಬಂಧಗಳು ಸದಾ ಬಿಗುವಿನಿಂದ ಕೂಡಿದ್ದವು. ಆದರೆ ಸಂಯುಕ್ತ ರಂಗ ಸರಕಾರದ ಅವಧಿಯಲ್ಲಿ ಆ ದೇಶದೊಂದಿಗೆ ಸಂಬಂಧ ಸುಧಾರಿಸಲು ಗಂಭೀರ ಪ್ರಯತ್ನ ನಡೆಯಿತು. ಕಾಶ್ಮೀರದಲ್ಲಿ ಪರೋಕ್ಷ ಯುದ್ಧ ನಡೆಸುವ ಆದರ ಆಟವನ್ನು ಗಮನಿಸಿ ಅದನ್ನು ಎದುರಿಸಿ ಕಾಶ್ಮೀರವನ್ನು ರಕ್ಷಿಸುವಲ್ಲಿ ನಮ್ಮ ಸೇನಾಪಡೆಗಳು ನಿರತವಾಗಿರುವಾಗಲೇ ಈ ಬಗ್ಗೆ ವಿವಾದ ಪರಿಹಾರಕ್ಕೆ ಪ್ರಯತ್ನಿಸುವುದರೊಂದಿಗೆ ಎರಡು ದೇಶಗಳ ನಡುವೆ ಆರ್ಥಿಕ, ಸಾಂಸ್ಕೃತಿಕ ಸಂಬಂಧಗಳನ್ನು ಸುಧಾರಿಸಬೇಕು ಎಂದು ಭಾರತ ಸೂಚಿಸಿತ್ತು. 1974 ರಲ್ಲಿ ಪೋಖ್ರಾನ್‌ನಲ್ಲಿ ಮೊದಲ ಅಣು ಪರೀಕ್ಷಣೆಯ ನಂತರ ಪಾಕಿಸ್ತಾನವೂ ಈ ತಂತ್ರಜ್ಞಾನವನ್ನು ಗಳಿಸಿದೆ. ಅದರ ಪರಮಾಣು ಕಾರ್ಯಕ್ರಮ ಗಮನಾರ್ಹ ಮುನ್ನಡೆಯ ಹಂತದಲ್ಲಿದೆ ಎಂದು ಇತ್ತೀಚಿನ ವರದಿಗಳು ಸೂಚಿಸಿವೆ. ಭಾರತ ತೋರಿದ ಸಂಯಮದಿಂದಾಗಿ ಅದಕ್ಕೊಂದು ತಡೆ ಬಿದ್ದ ಹಾಗಿತ್ತು. ಈಗ ಭಾರತ ಪರಮಾಣು ಪರೀಕ್ಷಣೆ ಮಾಡಿದ ನಂತರ ಪಾಕಿಸ್ತಾನವೂ ಅಣ್ವಸ್ತ್ರಗಳನ್ನು ಪಡೆಯುವುದನ್ನು ಯಾರೂ ತಡೆಯಲು ಸಾಧ್ಯವಿಲ್ಲ. ಪಡೆಯುವುದಾಗಿ ಅದು ಈಗಾಗಲೇ ಸಾರಿದೆ. ಅದು ಕಾಶ್ಮೀರದಲ್ಲಿ ತನ್ನ ಚಟುವಟಿಕೆಗಳನ್ನು ತೀವ್ರಗೊಳಿಸಲಿದೆ. ಪಂಜಾಬಿನಲ್ಲಿ ಉಗ್ರಗಾಮಿ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಲಿದೆ. ಇದರಿಂದ ಬಿಗುವು ಇನ್ನಷ್ಟು ಹೆಚ್ಚಲಿದೆ. ಇದರಿಂದ ನಮ್ಮ ಉಪಖಂಡದಲ್ಲಿ ಶಸ್ತ್ರಾಸ್ತ್ರ ಪೈಪೋಟಿ ನಡೆಯಲಿದೆ. ಇತರ ನಮ್ಮ ನೆರೆದೇಶಗಳಲ್ಲೂ ನಮ್ಮಿಂದ ಬೆದರಿಕೆಯಿದೆ ಎಂಬ ಭಾವನೆ ಬೆಳೆಯಲಿದೆ.

ಇನ್ನೊಂದು ನೆರೆದೇಶ ಚೀಣಾದೊಡನೆಯೂ 1962 ರಲ್ಲಿ ನಮ್ಮ ಸಂಬಂಧಗಳು ಹದಗೆಟ್ಟವು. ಆದರೆ ಕಳೆದ ಎರಡು ದಶಕಗಳಿಂದ ಉತ್ತಮ ಸಂಬಂಧಗಳನ್ನು ಬೆಳೆಸುವ ಪ್ರಯತ್ನ ನಡೆಸಿದ್ದೇವೆ. 1988 ರಲ್ಲಿ ರಾಜೀವ್ ಗಾಂಧಿಯವರ ಬೀಜಿಂಗ್ ಭೇಟಿಯೊಂದಿಗೆ ಇದು ತೀವ್ರಗೊಂಡಿತು. ಗಡಿ ವಿವಾದಕ್ಕೆ ಒಂದು ಪರಿಹಾರಕ್ಕೆ ಪ್ರಯತ್ನಿಸುವುದರ ಜೊತೆಗೇ ಆರ್ಥಿಕ ಹಾಗೂ ಸಾಂಸ್ಕೃತಿಕ ಸಂಬಂಧಗಳನ್ನು ಸುಧಾರಿಸಲು ಎರಡೂ ದೇಶಗಳು ನಿರ್ಧರಿಸಿದವು. ನಿಜವಾದ ಹತೋಟಿ ರೇಖೆಯ ಅತ್ತಿತ್ತ ಸೇನಾ ಪಡೆಗಳ ಕಡಿತ ಹಾಗೂ ಶಾಂತಿ ಕಾಪಾಡಲು ಕೂಡಾ ಒಪ್ಪಂದಗಳು ನಡೆದವು. 1996 ರಲ್ಲಿ ಅಧ್ಯಕ್ಷ ಜಿಯಾಂಗ್ ಜೆಮಿನ್‌ರ ಭಾರತ ಭೇಟಿ

➜

## ಪ್ರಜಾಪ್ರಭುತ್ವ ಮೊದಲ ಬಲಿ

"ಗುರುತಿಸಬೇಕಾದ ಮುಖ್ಯ ಸಂಗತಿಯೆಂದರೆ ಪ್ರಜಾಪ್ರಭುತ್ವವೇ ಬಿಜೆಪಿಯ ಕಂಠೋಕ್ತ ಪರಮಾಣು ಧೋರಣೆಯ ಮೊದಲ ಬಲಿ. ಎಲ್ಲೇ ಆಗಲಿ, ಪರಮಾಣು ರಾಜಕೀಯ ಗುಟ್ಟಾಗಿಯೇ ನಡೆಯುತ್ತದೆ, ತನ್ನದೇ ವಿಚಿತ್ರ ಹಾಗೂ ಮುಚ್ಚಿದ ತರ್ಕದ ಪ್ರಕಾರ ಅದು ಕೆಲಸ ಮಾಡುತ್ತಾ ಎಂತಹ ರಭಸ ಪಡೆಯುತ್ತದೆಂದರೆ ಈ ಆಟದ ಆಟಗಾರರ ಕೈಗಳಲ್ಲೇ ಅದು ಉಳಿಯುವುದಿಲ್ಲ. ಪೋಖ್ರಾನ್‌ನಲ್ಲಿ ಕಂಡಂತೆ ಇಡೀ ರಾಷ್ಟ್ರೀಯ ಹಿತಾಸಕ್ತಿ ಎಂಬುದು ಒಂದು ಸಣ್ಣ ರಾಜಕೀಯ-ವೈಜ್ಞಾನಿಕ-ಮಿಲಿಟರಿ ಕೂಟ ವಿಧಿಸುವ ಪರಿಮಿತಿಯಲ್ಲೇ ಸಂಕುಚಿತಗೊಳ್ಳುತ್ತದೆ. ಇದುವರೆಗೆ ಭಾರತೀಯ ಮುಖಂಡರು ಈ ಪ್ರಕ್ರಿಯೆಯನ್ನು ಚೆನ್ನಾಗಿ ಅರಿತಿದ್ದರು. ಐವತ್ತು ವರ್ಷಗಳ ಕಾಲ ಪಂಡಿತ್ ನೆಹರೂರವರಿಂದ ಹಿಡಿದು ನರಸಿಂಹರಾವ್, ಗುಜ್ರಾಲ್‌ರವರೆಗೆ ನಮ್ಮ ರಾಜಕೀಯ ಮುಖಂಡತ್ವ ಪರಮಾಣ ದಾರಿ ಸ್ವಭಾವತಃ ಪ್ರಜಾಪ್ರಭುತ್ವ-ವಿರೋಧಿ ಎಂದು ಗುರುತಿಸಿತ್ತು, ಆದ್ದರಿಂದಲೇ ಅವರು ಶಸ್ತ್ರಾಸ್ತ್ರ ಹೊಂದಿದ ದೇಶಗಳು ಉದ್ರೇಕಿಸಿದರೂ, ದೇಶದೊಳಗೆ ಬಾಂಬ್ ಲಾಬ್ಬಿ ಒತ್ತಡ ಹಾಕಿದರೂ, ಸಾರ್ವಜನಿಕ ವಿಶ್ಲೇಷಕರು ಚಾಣಕ್ಯ ಮಾದರಿಯ ಕಣ್ಣೋಟಗಳನ್ನಿಟ್ಟರೂ ಈ ದಾರಿ ಹಿಡಿಯಬಾರದು ಎಂದು ಜಾಣ ನಿರ್ಧಾರಕ್ಕೆ ಬಂದಿದ್ದರು.

ಈಗೊಬ್ಬ ಪ್ರಧಾನ ಮಂತ್ರಿಯಿದ್ದಾರೆ, ಬಹಳಷ್ಟು ವಿಷಯಗಳ ಬಗ್ಗೆ ಅವರು ನಿರರ್ಗಳವಾಗಿ ಮಾತನಾಡುತ್ತಾರೆ. ಆದರೆ ಈ ಪರೀಕ್ಷಣೆಗಳು ಏಕೆ ಅಗತ್ಯವಾದವು, ಈ ಘಟ್ಟದಲ್ಲಿ ರಾಷ್ಟ್ರೀಯ ಭದ್ರತೆಗೆ ಏನು ಬೆದರಿಕೆ ಬಂತು, ಪರಮಾಣು ಭಾರತದ ಅವರ ಕಣ್ಣೋಟ ಏನು ಎಂದು ದೇಶಕ್ಕಿನ್ನೂ ವಿವರಿಸಿಲ್ಲ..........................

ಪರಮಾಣು ಧೋರಣೆಯ ಬಗ್ಗೆ, ಒಂದು ಉತ್ತಮ ರಾಷ್ಟ್ರೀಯ ಒಮ್ಮತವನ್ನು, ಪ್ರಜಾಪ್ರಭುತ್ವಕ್ಕೆ ಒಂದು ಬಲವಾದ ಬದ್ಧತೆಯ ಮೇಲೆ ಕಟ್ಟಿದ ಒಮ್ಮತವನ್ನು ಅಲುಗಾಡುವ, ಅನುಭವವಿಲ್ಲದ ಒಂದು ಸಮ್ಮಿಶ್ರ ಸರಕಾರ, ರಾಷ್ಟ್ರೀಯ ಭದ್ರತೆಯೆಂದರೆ ರಾಮಜನ್ಮಭೂಮಿಯೆಂಬ ಪೌರಾಣಿಕ ಕಲ್ಪನೆಯನ್ನು ಬೆಳೆಸಿಕೊಂಡ ಒಂದು ಪಕ್ಷದ, ತನ್ನ ರಾಜಕೀಯ ಕಾರ್ಯತಂತ್ರದಲ್ಲಿ ಅಂತರ್‌ರಾಷ್ಟ್ರೀಯ ಸಮುದಾಯಕ್ಕೆ ಅದು ಇದುವರೆಗೆ ಭಾರತೀಯ ಅಲಸಂಖ್ಯಾತರಿಗೆ ಕೊಟ್ಟ ಸ್ಥಾನವನ್ನೇ ಕೊಡುತ್ತಿರುವ ಒಂದು ಪಕ್ಷದ ನೇತೃತ್ವದಲ್ಲಿ ಬುಡಮೇಲು ಮಾಡಿರುವಾಗ ದೇಶ ಆತ್ಮವಿಶ್ವಾಸದಿಂದ ಮುಂದೆ ನೋಡುವುದು ಸಾಧ್ಯವಿಲ್ಲ

**- ಅಮೃತಾ ಅಬ್ರಹಾಂ**
ಪತ್ರಕರ್ತರು, ವಿಶ್ಲೇಷಕರು.

## ಆರ್.ಎಸ್.ಎಸ್. ಪ್ರೇರಿತ ದುಸ್ಸಾಹಸಕ್ಕೆ ಬೆಲೆ ಯಾರು ತೆರಬೇಕು?

### ಎಂದು ಕೇಳುತ್ತಾರೆ ಪ್ರಸಿದ್ಧ ಪತ್ರಕರ್ತ ಎನ್.ರಾಮ್

"ಬಿಜೆಪಿ 'ರಾಷ್ಟ್ರೀಯ ಆಡಳಿತ ಅಜೆಂಡಾ'ದಲ್ಲಿ ತನ್ನ ಬೇಡಿಕೆಗಳಾದ ಅಯೋಧ್ಯೆ, ೩೭೦ ನೇ ಕಲಮು ಮತ್ತು ಏಕರೂಪ ನಾಗರಿಕ ಸಂಹಿತೆಗಳನ್ನು ಸೇರಿಸಲಿಲ್ಲ. ಆದರೆ ತನ್ನ ಸುವಿದಿತ ಪರಮಾಣು ಧೋರಣೆ ಹಾಗೂ ಭದ್ರತಾ ಧೋರಣೆಗಳಲ್ಲಿನ ಉಗ್ರತನವನ್ನು ತನ್ನ ಮಿತ್ರರ ಯಾವುದೇ ಪ್ರತಿರೋಧವಿಲ್ಲದೆ ಅಜೆಂಡಾಕ್ಕೆ ತಂದಿತು................... . ರಾಷ್ಟ್ರೀಯ ಅಜೆಂಡಾ ಈ ಕೆಳಗಿನ ಹೆಜ್ಜೆಗಳ ಬಗ್ಗೆ ಹೇಳುತ್ತದೆ- ಒಂದು 'ರಾಷ್ಟ್ರೀಯ ಭದ್ರತಾ ಮಂಡಳಿ'ಯ ರಚನೆ ; ಇದು 'ಭಾರತದ ಮೊತ್ತ ಮೊದಲ ಸಾಮರಿಕ ಪುನರ್ವಿಮರ್ಶೆ ಮಾಡುತ್ತದೆ' ಎಂಬ ಭರವಸೆ; ಪರಮಾಣು ಧೋರಣೆಯ ಮರುಮೌಲ್ಯಮಾಪನ ಮತ್ತು ಪರಮಾಣು ಅಸ್ತ್ರಗಳನ್ನು ಹೊಂದುವ ಆಯ್ಕೆಯನ್ನು ಚಲಾಯಿಸುವುದು. ಒಂದು ಮರುವಿಮರ್ಶೆ ಅಥವಾ ಮರುಮೌಲ್ಯಮಾಪನದ ಸೂಚನೆ ಆರ್.ಎಸ್.ಎಸ್.-ಬಿಜೆಪಿ ಮುಖಂಡತ್ವ ಆಗಲೇ ಮಾಡಿದ್ದ ಒಂದು ನಿರ್ಣಯವನ್ನು ಮರೆಮಾಚಲು ಒಂದು ಹೊಗೆಪರದೆಯಷ್ಟೆ ಎಂಬುದೀಗ ಸ್ಪಷ್ಟ......

ಇಂತಹ ಒಂದು ಪ್ರಮುಖ ವಿಷಯದ ಮೇಲೆ ಯಾವುದೇ ವ್ಯಾಪಕ ಪ್ರಜಾಸತ್ತಾತ್ಮಕ ಚರ್ಚೆಯ ಅಥವಾ ಅದನ್ನು ತಪ್ಪಿಸಲು ಕೈಗೊಂಡ ನಿರ್ಣಯದ ವಸ್ತುನಿಷ್ಠ ವಿಮರ್ಶೆಯ ಅಭಾವವನ್ನು ಬಯಲಿಗೆಳೆಯಬೇಕು, ಖಂಡಿಸಬೇಕು......

ಪೋಖ್ರಾನ್ ಸ್ಫೋಟಗಳಲ್ಲಿ ಕಂಡುಬಂದ ವಾಜಪೇಯಿ ಸರಕಾರದ ಆರ್.ಎಸ್.ಎಸ್. ಪ್ರೇರಿತ ಪರಮಾಣು ಉಗ್ರತನದಿಂದ ಭಾರತದ ರಾಷ್ಟ್ರೀಯ ಮತ್ತು ಪ್ರಜಾಸತ್ತಾತ್ಮಕ ಹಿತಾಸಕ್ತಿಗಳಿಗೆ ಏನೂ ಪ್ರಯೋಜನವಾಗಿಲ್ಲ. ಏಕಪಕ್ಷೀಯವಾಗಿ ಸಕಾರಣವಿಲ್ಲದೆ ಪರಮಾಣು ಆಯ್ಕೆಯನ್ನು ಶಸ್ತ್ರಾಸ್ತ್ರವಾಗಿ ಪರಿವರ್ತಿಸುವುದು, ಅದಕ್ಕೆ ಬೆಂಬಲವಾಗಿ ಒಂದು ಕ್ಷಿಪಣಿ ವ್ಯವಸ್ಥೆ ಇವೆಲ್ಲಾ ಈ ಪ್ರದೇಶದಲ್ಲಿ ಶಾಂತಿ ಮತ್ತು ಭದ್ರತೆಗೆ ಬಹಳ ಗಂಡಾಂತಕಾರಿ. ವಿಶೇಷವಾಗಿ ಭಾರತ-ಚೀಣಾ ಮತ್ತು ಭಾರತ - ಪಾಕಿಸ್ತಾನ ಸಂಬಂಧಗಳಲ್ಲಿ. ಇದು ಭಾರತದ ಅಂತರ್‌ರಾಷ್ಟ್ರೀಯ ಖ್ಯಾತಿಗೂ ಕುಂದು ತರುತ್ತದೆ. ಈ ದುಸ್ಸಾಹಸದ ಕೃತ್ಯಕ್ಕೆ ತೆರಬೇಕಾದ ಆರ್ಥಿಕ ಮತ್ತು ರಾಜಕೀಯ ಬೆಲೆ ಕೂಡ ಭಾರೀ ಕಠಿಣ ಸ್ವರೂಪದ್ದು.

- ಎನ್.ರಾಮ್, ಫ್ರಂಟ್‌ಲೈನ್ ಸಂಪಾದಕ

ಕಾಲದಲ್ಲಿ ಹಲವು ದ್ವಿಪಕ್ಷೀಯ ಒಪ್ಪಂದಗಳೊಂದಿಗೆ ಪರಸ್ಪರ ವಿಶ್ವಾಸ ಕುದುರಿಸುವ ಕ್ರಮಗಳು ಹಾಗೂ ಸೇನಾಪಡೆಗಳ ಕಡಿತದ ಬಗ್ಗೆಯೂ ಒಪ್ಪಂದಗಳು ನಡೆದವು. ಈ ಅವಧಿಯಲ್ಲಿ ಈ ಎರಡೂ ದೇಶಗಳ ನಡುವೆ ವ್ಯಾಪಾರ ಮತ್ತು ಆರ್ಥಿಕ ಸಂಬಂಧಗಳು ಸುಧಾರಿಸಿದವು. ಈ ಇಡೀ ಪ್ರಕ್ರಿಯೆ ಈಗ ತಲೆಕೆಳಗಾಗಿದೆ.

ವಾಜಪೇಯಿ ಸರಕಾರ ಈ ಪರೀಕ್ಷಣೆಗಳನ್ನು ನಡೆಸಲು ಚೀಣಾದ ನೆಪವೊಡ್ಡಿದೆ. ಇದು ಮೇ 11, 1988 ರಂದು ಅಧ್ಯಕ್ಷ ಕ್ಲಿಂಟನ್‌ಗೆ ವಾಜಪೇಯಿ ಬರೆದ ಪತ್ರದಿಂದ ಇನ್ನಷ್ಟು ಸ್ಪಷ್ಟವಾಗುತ್ತದೆ. ಈ ಪರೀಕ್ಷಣೆಗಳನ್ನು ಏಕೆ ನಡೆಸಬೇಕಾಯಿತು ಎನ್ನುವುದಕ್ಕೆ ಕಾರಣಗಳ ಬಗ್ಗೆ ನಮ್ಮ ರಾಜಕೀಯ ಪಕ್ಷಗಳನ್ನು ಮತ್ತು ದೇಶವನ್ನು ಕತ್ತಲಲ್ಲಿಟ್ಟು ಪ್ರಧಾನಮಂತ್ರಿಗಳು ಅಮೆರಿಕಾದ ಅಧ್ಯಕ್ಷರಿಗೆ ಈ ಕಾರಣಗಳನ್ನು ಮುಂದಿಟ್ಟು ಪತ್ರ ಬರೆದದ್ದು ನಿಜವಾಗಿಯೂ ಸಿಟ್ಟು ಬರಿಸುವ ಸಂಗತಿ. ಈ ಪತ್ರವನ್ನು ಭಾರತದಲ್ಲಿ ಪ್ರಕಟಿಸಲಿಲ್ಲ, ಆದರೆ ನ್ಯೂಯಾರ್ಕ್ ಟೈಮ್ಸ್ ಅದನ್ನು ಪ್ರಕಟಿಸಿತು.

ಈ ಪತ್ರದಲ್ಲಿ ವಾಜಪೇಯಿಯವರು ಹೇಳುತ್ತಾರೆ-"ನನಗೆ ಕಳೆದ ಕೆಲವು ವರ್ಷಗಳಿಂದ ಭದ್ರತಾ ವಾತಾವರಣ, ವಿಶೇಷವಾಗಿ ಪರಮಾಣು ವಾತಾವರಣ, ಹದಗೆಡುತ್ತಿರುವುದನ್ನು ಕಂಡು ಆಳವಾದ ಆತಂಕವುಂಟಾಗಿದೆ. ನಮ್ಮ ಗಡಿಗಳಲ್ಲಿ ಪ್ರತ್ಯಕ್ಷವಾಗಿ ಒಂದು ಪರಮಾಣು ಅಸ್ತ್ರಸಜ್ಜಿತ ಪ್ರಭುತ್ವ ಇದೆ. ಇದು 1962ರಲ್ಲಿ ಭಾರತದ ವಿರುದ್ಧ ಆಕ್ರಮಣವನ್ನೂ ನಡೆಸಿತ್ತು. ಕಳೆದ ಒಂದೆರಡು ದಶಕಗಳಲ್ಲಿ ಆ ದೇಶದೊಂದಿಗೆ ನಮ್ಮ ಸಂಬಂಧಗಳು ಸುಧಾರಿಸಿದ್ದರೂ ಮುಖ್ಯವಾಗಿ ಪರಿಹಾರ ಕಾಣದ ಗಡಿ ಸಮಸ್ಯೆಯಿಂದಾಗಿ ಅಪನಂಬಿಕೆಯ ವಾತಾವರಣ ಇನ್ನೂ ಇದೆ. ಆ ದೇಶ ನಮ್ಮ ಇನ್ನೊಂದು ನೆರೆದೇಶಕ್ಕೆ ಒಂದು ಪರೋಕ್ಷ ಪರಮಾಣು ಅಸ್ತ್ರ ಪ್ರಭುತ್ವವಾಗಲು ಭೌತಿಕವಾಗಿ ನೆರವಾಗಿರುವುದರಿಂದ ಈ ಅಪನಂಬಿಕೆ ಇನ್ನೂ ಹೆಚ್ಚಿದೆ."

ನಿಜಸಂಗತಿಯೆಂದರೆ, ಪೋಖ್ರಾನ್‌ನ ಸ್ಫೋಟಗಳಿಗಿಂತ ಮುಂಚಿನ ದಿನಗಳಲ್ಲಿ ಜಾರ್ಜ್ ಫರ್ನಾಂಡೀಸ್ ಚೀಣಾದ ವಿರುದ್ಧ ಸತತವಾಗಿ ಪ್ರಚಾರ ನಡೆಸಿದರು. ಚೀಣಾದ ವಿರುದ್ಧ ಎಲ್ಲಾ ರೀತಿಯ ಬುಡವಿಲ್ಲದ ಆಪಾದನೆಗಳನ್ನು ಹಾಕಿದರು. ಘೌರಿ ಕ್ಷಿಪಣಿ ಅಭಿವೃದ್ಧಿಪಡಿಸಲು ಅದು ತಂತ್ರಜ್ಞಾನ ಒದಗಿಸಿದೆ ಎಂಬ ಆಪಾದನೆಯಿಂದ ಹಿಡಿದು (ಇದನ್ನು ಸ್ವತಃ ಅಮೇರಿಕಾವೇ ನಿರಾಕರಿಸಿದೆ) ಅರುಣಾಚಲಪ್ರದೇಶದಲ್ಲಿ ಹೆಲಿಕಾಪ್ಟರ್ ನಿಲ್ದಾಣ ನಿರ್ಮಿಸುತ್ತಿದೆಯೆಂದರು. ಪ್ರಧಾನಮಂತ್ರಿಗಳೇ ಅದು ನಿಜವಲ್ಲ ಎಂದರು. ನಂತರ ಕೃಷ್ಣಮೆನನ್ ಸ್ಮಾರಕ ಭಾಷಣದಲ್ಲಿ ಮಾತನಾಡುತ್ತಾ ಚೀಣಾ ಉತ್ತರಪ್ರದೇಶದಲ್ಲಿ ಗಡಿಯುದ್ದಕ್ಕೂ ವಿಮಾನಪಟ್ಟಿಯನ್ನು ನಿರ್ಮಿಸುತ್ತಿದೆ ಎಂದರು, ಟಿಬೆಟ್ಟಿನಲ್ಲಿ ಭಾರತದತ್ತ ಮುಖಮಾಡಿ ಕ್ಷಿಪಣಿಗಳನ್ನು ಸ್ಥಾಪಿಸಿದೆಯೆಂದರು. ಮ್ಯಾನ್ಮಾರಿನ ಕೋಕೋ ದ್ವೀಪದಲ್ಲಿ ಚೀಣಾ ಒಂದು ನೆಲೆ ಹೊಂದಿದೆ ಎಂದು ಹುಸಿ ಆಪಾದನೆ ಹಾಕಿದರು. ಚೀಣಾ ಭಾರತದ ಭದ್ರತೆಗೆ ಪ್ರಧಾನ ಅಪಾಯ ಎಂದೂ ಅವರು ವರ್ಣಿಸಿದರು.

ಈ ಹೇಳಿಕೆಗಳಿಗೆ ಚೀಣೀ ಸರಕಾರ ಬಲವಾದ ಪ್ರತಿಕ್ರಿಯೆ ವ್ಯಕ್ತಪಡಿಸಿದೆ. ಫರ್ನಾಂಡೀಸ್ ನಡೆಸಿದ್ದ ಕಸರತ್ತು ಕೇವಲ ಸಿದ್ಧತೆಯೆಂಬುದು ಕ್ಲಿಂಟನ್‌ಗೆ ವಾಜಪೇಯಿ ಪತ್ರದಿಂದ ಸ್ಪಷ್ಟವಾಗುತ್ತದೆ.

ಈ ಪ್ರಕ್ರಿಯೆಯಲ್ಲಿ ಶಾಂತಿಯ ಹಾಗೂ ನಿಶ್ಶಸ್ತ್ರೀಕರಣದ ಅವಿಶ್ರಾಂತ ಪ್ರತಿಪಾದಕ ದೇಶ ಎಂಬ ಭಾರತದ ಹೆಗ್ಗಳಿಕೆಯೂ ಬಲಿಯಾಗಿದೆ. ಭಾರತ ತನ್ನ ಹಕ್ಕುಗಳಿಗಾಗಿ, ವಿಶ್ವ ಶಾಂತಿಗಾಗಿ ಹಾಗೂ ಪಕ್ಷಪಾತಕಾರೀ ಆದೇಶಗಳನ್ನು, ಸಂಧಿಗಳನ್ನು ವಿರೋಧಿಸುವ ದೇಶವೆಂಬ ಅವರ ವಿಶ್ವಾಸವನ್ನು ಈಗ ಕಳಕೊಳ್ಳಬೇಕಾಗುತ್ತದೆ.

**ಡಿಗೋಗಾರ್ಸಿಯಾದ ಬಗ್ಗೆ ಏಕೆ ದಿವ್ಯ ಮೌನ?**

ಇಂತಹ ಒಂದು ಸನ್ನಿವೇಶ ಸಾಮ್ರಾಜ್ಯಶಾಹಿಗೆ, ಅದರ ಮಧ್ಯಪ್ರವೇಶಕ್ಕೆ ಹೆಚ್ಚಿನ ಅವಕಾಶ ನೀಡುತ್ತದೆ. ಈಗಾಗಲೇ ತಾವು ಸಾರಿದ ದಿಗ್ಬಂದನಗಳನ್ನು ಅವರು ಭಾರತ ಎನ್.ಪಿ.ಟಿ., ಸಿ.ಟಿ.ಬಿ.ಟಿಗೆ ಸಹಿ ಹಾಕುವಂತೆ ಒತ್ತಡ ತರಲು ಬಳಸುತ್ತಿದ್ದಾರೆ. ಭಾರತ ಸಹಾ ಪರಮಾಣು ಶಸ್ತ್ರಾಸ್ತ್ರಗಳನ್ನು ಸಂಪೂರ್ಣವಾಗಿ ನಿರ್ಮೂಲ ಮಾಡಬೇಕು, ಇದಕ್ಕೆ ಒಂದು ವೇಳಾ ಪಟ್ಟಿಯನ್ನು ತಯಾರಿಸಬೇಕು ಎಂದು ಪ್ರತಿಪಾದಿಸುತ್ತಾ ಬಂದಿತ್ತು. ಅಸಮಾನ ಪರಮಾಣು ವ್ಯವಸ್ಥೆಯನ್ನು ಹೇರುವ ಸಂಧಿಗಳೆಂದು ಇವನ್ನು ವಿರೋಧಿಸಿತ್ತು. ಅಷ್ಟೇ ಅಲ್ಲ, ವಾರ್ಸಾ ಸಂಧಿಯ ದೇಶಗಳೇ ಈಗ ಇಲ್ಲದಿರುವಾಗ ನಾಟೋ ಕೂಟವನ್ನು ಮುಂದುವರಿಸುವುದಷ್ಟೇ ಅಲ್ಲ, ಅದನ್ನು ವಿಸ್ತರಿಸುವ ಅಗತ್ಯ ಅಮೇರಿಕಾಕ್ಕೆ ಇಲ್ಲ. ಆದರೂ ಅದೇ ದಿಕ್ಕಿನಲ್ಲಿ ಅದು ಸಾಗಿದೆ.

ಈ ಹಿನ್ನೆಲೆಯಲ್ಲಿ ಚೀಣಾದ ನೆಪವೊಡ್ಡುವ ವಾಜಪೇಯಿ ಸರಕಾರದ ಕ್ರಮವನ್ನು ನೋಡಬೇಕು. ವಾಸ್ತವವಾಗಿ ಈ ನೆವವೊಡ್ಡುವಾಗ ಅದು ದೇಶಕ್ಕೆ ಇರುವ ನಿಜವಾದ ಅಪಾಯದ ಬಗ್ಗೆ ಮಾತ್ರ ದಿವ್ಯಮೌನ ತಾಳಿದೆ. ಹಿಂದೂ ಮಹಾಸಾಗರದಲ್ಲಿರುವ ಒಂದು ದ್ವೀಪ ಡಿಗೋ ಗಾರ್ಸಿಯಾದಲ್ಲಿ ಇಲ್ಲಿನ ಅಮೆರಿಕಾದ ಮಿಲಿಟರಿ ನೆಲೆಯಲ್ಲಿ ವಿವಿಧ ರೀತಿಗಳ ಪರಮಾಣು ಶಸ್ತ್ರಾಸ್ತ್ರಗಳಿವೆ. ಇತರ ಹಲವು ದೇಶಗಳಂತೆ ಭಾರತ ದೇಶದ ಮೇಲೆ ಗುರಿಯಿಟ್ಟು ಅವನ್ನು ಅಲ್ಲಿ ಇಡಲಾಗಿದೆ. ವಾಜಪೇಯಿ ಸರಕಾರ ಈ ಬಗ್ಗೆ ಚಕಾರವೆತ್ತುತ್ತಿಲ್ಲ ಏಕೆ? ಇನ್ನು ಜಾರ್ಜ್ ಫರ್ನಾಂಡೀಸರಿಗಂತೂ ಈ ನೆಲೆಯ ಬಗ್ಗೆ ಅರಿವೇ ಇದ್ದಂತಿಲ್ಲ.

ಎರಡನೆಯದಾಗಿ, ಈ ಪರೀಕ್ಷಣೆಯ ಆರ್ಥಿಕ ಪರಿಣಾಮಗಳೇನು? ಶಸ್ತ್ರಾಸ್ತ್ರ ಪೈಪೋಟಿಯಿಂದಾಗಿ ದೊಡ್ಡ ಪ್ರಮಾಣದಲ್ಲಿ ಹಣ ಅಭಿವೃದ್ಧಿ ಕಾರ್ಯಕ್ರಮಗಳಿಂದ ಶಸ್ತ್ರಾಸ್ತ್ರ ಉತ್ಪಾದನೆಯತ್ತ ಹೋಗುತ್ತದೆ. ಇದು ಕೋಟ್ಯಾಂತರ ಜನಗಳ ಜೀವನ ಪರಿಸ್ಥಿತಿಗಳನ್ನು ಹದಗೆಡಸಲಿದೆ. ಈ ರೀತಿ ಶಸ್ತ್ರಾಸ್ತ್ರ ತಯಾರಿಕೆ ಪರಿಣಾಮವಾಗಿ ಆರ್ಥಿಕ ಬೆಳವಣಿಗೆ ಇಳಿಮುಖವಾಗುತ್ತದೆ.

ಇದಕ್ಕೂ ಮಹತ್ವದ ಸಂಗತಿಯೆಂದರೆ, ಆರ್ಥಿಕ ವಲಯದಲ್ಲಿ ನಿರ್ಬಂಧ, ದಿಗ್ಬಂಧನಗಳನ್ನು ಎದುರಿಸುವ ನೆಪದಲ್ಲಿ ಬಿಜೆಪಿ ನೇತೃತ್ವದ ಸರಕಾರ ಇನ್ನಷ್ಟು ಭರದಲ್ಲಿ ಉದಾರೀಕರಣ ತರಲು ಮುಂದಾಗುವಂತೆ ಕಾಣುತ್ತಿದೆ. ಈಗಾಗಲೇ ವಿದ್ಯುತ್ ಯೋಜನೆಗಳಲ್ಲಿ ಮೂರು ಬಹುರಾಷ್ಟ್ರೀಯ ಕಂಪನಿಗಳಿಗೆ ಈ ಸರಕಾರ ಪ್ರತಿ-ಗ್ಯಾರಂಟಿ ನೀಡಿದೆ. ಇನ್ನಷ್ಟು ಕಂಪನಿಗಳಿಗೆ ನೀಡಲಿದೆ. ವಿದೇಶಿ, ಪೆಟ್ರೋಲಿಯಂ, ಗಣಿಗಾರಿಕೆ ಕಂಪನಿಗಳಿಗೆ ಕಾಂಟ್ರಾಕ್ಟುಗಳ ಸುಗ್ಗಿಯನ್ನೇ ಒದಗಿಸಿದೆ(ಕಳೆದ ಸಂಚಿಕೆ ನೋಡಿ) ಈ ಎಲ್ಲಾ ಕ್ರಮಗಳು ದಿಗ್ಬಂಧನಗಳನ್ನು ಎದುರಿಸಿ ನಿಲ್ಲುವ ಬದಲು ಭಾರತವನ್ನು ಇನ್ನಷ್ಟು ಸಾಮ್ರಾಜ್ಯಶಾಹಿ ಒತ್ತಡಗಳಿಗೆ ತಲೆಬಾಗುವಂತೆ ಮಾಡಿ ಈ ವಿನಾಶಕಾರಿ ದಾರಿಯನ್ನು ಇನ್ನಷ್ಟು ತೀವ್ರಗೊಳಿಸುತ್ತದೆ. ಕೊನೆಗೆ ಇವಕ್ಕೆಲ್ಲಾ ಜನಗಳೇ ಬೆಲೆ ತೆರಬೇಕಾಗುತ್ತದೆ. ಅವರ ಮೇಲೆ ಇನ್ನಷ್ಟು ಸಂಕಟಗಳ ಹೊರೆ ಹಾಕಲಾಗುತ್ತದೆ.

**ಜ್ಞಾನೋದಯ?**

ಬಿಜೆಪಿ ಹೀಗೆ ಈ ಪರೀಕ್ಷಣೆಗಳ ಮೇಲೆ ಭಾವೋದ್ರೇಕಗಳನ್ನು ಹಬ್ಬಿಸಿ ರಾಜಕೀಯವಾಗಿ ತನ್ನನ್ನು ಕ್ರೋಢೀಕರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಂತೆ ಇದರ ಕೀರ್ತಿ ಸಂಪೂರ್ಣವಾಗಿ ಬಿಜೆಪಿಗೆ ದಕ್ಕಬಾರದೆಂದು ಕೆಲವು ರಾಜಕೀಯ ಪಕ್ಷಗಳು ಬಯಸುತ್ತಿವೆ. ಈ ಪರೀಕ್ಷಣೆಗಳ ಪರಿಣಾಮಗಳನ್ನು ಲೆಕ್ಕಿಸದೆ ಇದನ್ನು ಹಾಡಿಹೊಗಳಿದ ಪಕ್ಷಗಳಿವು. ಆದರೆ ದಿನಗಳೆದಂತೆ ಅವರಿಗೂ ನಿಜ ಸ್ಥಿತಿಗಳ ಅರಿವಾಗುತ್ತಿದೆ. ಅಭಿಪ್ರಾಯಗಳು ಹೆಚ್ಚೆಚ್ಚು ಗಂಭೀರವಾಗುತ್ತಿವೆ. ಪ್ರಮುಖ ದೈನಿಕಗಳು ಈ ಪರೀಕ್ಷಣೆಗಳ ವಿರುದ್ಧ ಸಂಪಾದಕೀಯಗಳನ್ನು, ಪ್ರಮುಖ ಲೇಖನಗಳನ್ನು ಬರೆದಿವೆ. ಈ ಭಾವೋದ್ರೇಕ ಬಹಳ ದಿನ ಉಳಿಯುವದಿಲ್ಲ ಎಂದು ಬೇಗನೇ ಸ್ಪಷ್ಟವಾಗಲಾರಂಭಿಸಿದೆ. ಆರಂಭದಲ್ಲಿ ಪರೀಕ್ಷಣೆಗಳನ್ನು ಸ್ವಾಗತಿಸಿದ ಕಾಂಗ್ರೆಸ್ ಅಧ್ಯಕ್ಷರು ಕಾರ್ಯಕಾರಿ ಸಮಿತಿಯ ಸಭೆಯ ನಂತರ ಹೆಚ್ಚು ಜಾಗರೂಕ ನಿಲುವು ತಳೆದರು. ಟಿ.ಎಂ.ಸಿ. ಮತ್ತು ಸಮಾಜವಾದಿ ಪಕ್ಷಗಳೂ ದೂರನಿಂತವು. ಎಡಪಕ್ಷಗಳಂತೂ ಆಗಲೇ ದೃಢ ವಿರೋಧ ವ್ಯಕ್ತಪಡಿಸುತ್ತಾ, ಈ ವಿನಾಶಕಾರಿ ದಾರಿಯು ಸರಿಯಲ್ಲ ಎಂದು ದೇಶವನ್ನು ಎಚ್ಚರಿಸಿವೆ.

ಬಿಜೆಪಿ-ಆರ್.ಎಸ್.ಎಸ್. ನ ಈ ಇಡೀ ಆಟದ ಗುರಿಯೆಂದರೆ ದೇಶ ಎದುರಿಸುತ್ತಿರುವ ತುರ್ತು ಸಮಸ್ಯೆಗಳಿಂದ ದೇಶದ ಗಮನವನ್ನು ಬೇರೆಡೆಗೆ ಸೆಳೆಯುವುದು. ತನ್ನನ್ನು ರಾಜಕೀಯವಾಗಿ ಕ್ರೋಢೀಕರಿಸುವುದರೊಂದಿಗೆ ತನ್ನ ಕ್ಷಯರೋಗಪೀಡಿತವಾಗಿರುವ ಸಮ್ಮಿಶ್ರ ಕೂಟದೊಳಗಿನ ಕಿತ್ತಾಟಗಳು ಬಿಸಿಯೇರದಂತೆ ತಡೆಯಬೇಕಾಗಿತ್ತು. ಹಸಿವು, ಬಡತನ, ನಿರುದ್ಯೋಗ ಮತ್ತು ನಿರಕ್ಷರತೆಯ ಸಮಸ್ಯೆಗಳಿಗೆ ಯಾವುದೇ ಪರಿಹಾರ ಕೊಡಲಾಗದ ಬಿಜೆಪಿಗೆ ಜನಗಳ ಗಮನವನ್ನು ಬೇರೆಡೆ ತಿರುಗಿಸಲು ಇದಕ್ಕಿಂತ ಉತ್ತಮ ಆಯುಧ ಕಾಣಿಸಲಿಲ್ಲ. ಆದರೆ ಈ ಆಟ ಸಾಗದು.

ಇವೆಲ್ಲದರ ಹಿಂದೆ ಇರುವುದು ಬಿಜೆಪಿಯ ಬಚ್ಚಿಟ್ಟ ಅಜೆಂಡಾ - ಕೋಮು ಸನ್ನಿವೇಶವನ್ನು ಉಲ್ಬಣಗೊಳಿಸಿ ಹಿಂದುತ್ವದ ಗುರಿ ಸಾಧಿಸುವುದು. ಈಗಾಗಲೇ ವಿಶ್ವ ಹಿಂದೂ ಪರಿಷತ್ ಪೋಖ್ರಾನ್‌ನಲ್ಲಿ 'ಶಕ್ತಿಪೀಠ' ಕಟ್ಟುವ ಯೋಜನೆಯನ್ನು ಪ್ರಕಟಿಸಿದೆ. ಕೋಮುವಾದಿ ಭಾವನೆಗಳನ್ನು ಬಡಿದೆಬ್ಬಿಸಲು ಇದನ್ನು ಬಳಸಲಾಗುವುದು. ಇದಕ್ಕೆ ಪ್ರತಿಯಾಗಿ ದೀರ್ಘ ಸಮಯದ ನಂತರ ಶಾಂತಿ ಮರು ಸ್ಥಾಪನೆಯಾಗುತ್ತಿದ್ದ ಕಾಶ್ಮೀರದಲ್ಲಿ, ಶಾಂತಿ ನೆಲೆಸಿದ ಪಂಜಾಬಿನಲ್ಲಿ ಮತ್ತೆ ಪರಿಸ್ಥಿತಿ ಹದಗೆಡಲಿದೆ.

ಈ ಪರೀಕ್ಷಣೆಗಳ ಹಿಂದೆ ಯಾವುದೇ ಪರದೆಯಿದ್ದರೂ, 'ಹಿಂದುತ್ವ'ದ ಬಿಜೆಪಿಯ ಬಚ್ಚಿಟ್ಟ ಅಜೆಂಡಾ ಇರುವುದು ಸ್ಪಷ್ಟ. ರಾಮ ದೇವಸ್ಥಾನದ ಚಳುವಳಿಯ ಸಮಯದಲ್ಲಿ ಬಳಸಿದ ತಂತ್ರಗಳನ್ನೇ ಬಿಜೆಪಿ-ಈಗಲೂ ಬಳಸುತ್ತಿದೆ. ಆರಂಭದಲ್ಲಿ ಅದು ವಿ.ಹೆಚ್.ಪಿ. ಮಾಡುತ್ತಿರುವುದು ತಾನಲ್ಲ ಎಂದು ದೂರವೇ ಇದ್ದಂತಿದ್ದ ಬಿಜೆಪಿಯ ಅಧ್ಯಕ್ಷರೇ ಸ್ವತಃ ಬಿಜೆಪಿಯ ಚುನಾವಣಾ ಚಿಹ್ನೆಯನ್ನು ದೊಡ್ಡದಾಗಿ ಪ್ರದರ್ಶಿಸುತ್ತಾ ಸೋಮನಾಥದಿಂದ ಆಯೋಧ್ಯೆಗೆ 'ರಥಯಾತ್ರೆ' ನಡೆಸಿದರು. ಬಾಬ್ರಿ ಮಸೀದಿ ಧ್ವಂಸದ ನಂತರ ಆ 'ಕೀರ್ತಿ' ಯಲ್ಲಿ ತನ್ನ ಪಾಲೂ ಇದೆಯೆಂದು ಹೇಳಿಕೊಳ್ಳವದರಲ್ಲಿ ಅದು ಹಿಂದೆ ಬೀಳಲಿಲ್ಲ.

ಒಟ್ಟಿನಲ್ಲಿ ಸರಕಾರ ಅನುಸರಿಸುತ್ತಿರುವ ಈ ಅಜಾಗರೂಕ ಧೋರಣೆಗೆ ಬೆಲೆ ತೆರಬೇಕಾದ್ದು ಬಿಜೆಪಿಯಲ್ಲ, ದೇಶ.

ಎಲ್ಲಾ ದೇಶಪ್ರೇಮಿ ಹಾಗೂ ಶಾಂತಿಪ್ರಿಯ ದೇಶ ಬಾಂಧವರು ಒಂದಾಗಿ ಬಿಜೆಪಿಯ ಈ ದುಷ್ಟ ಆಟವನ್ನು ಬಯಲುಮಾಡಬೇಕು. ಬಿಜೆಪಿ ಸೃಷ್ಟಿಸ ಬಯಸುವ ರಾಷ್ಟ್ರಾಂಧತೆಯ ಭಾವೋದ್ರೇಕ ಬಹಳ ದಿನ ಉಳಿಯುವದಿಲ್ಲ. ಆದರೆ ಜನಗಳನ್ನು ಈ ಬಗ್ಗೆ ಎಚ್ಚರಿಸಬೇಕಾಗಿದೆ. ನೆರೆ ದೇಶಗಳೊಂದಿಗೆ ಶಾಂತಿ ಮತ್ತು ಸ್ನೇಹದ ಸಂಬಂಧಗಳಿಗಾಗಿ ಹೋರಾಟವನ್ನು ಮುಂದುವರೆಸಬೇಕಾಗುತ್ತದೆ.

## "ಸ್ವದೇಶಿ ಬಾಂಬಿನ ನಂತರ ಬೇರೇನೂ ಸ್ವದೇಶಿ ಬೇಕಿಲ್ಲ!"



"ಸಿ.ಐ.ಎ.ನ 'ಗೂಢಚರ್ಯೆ ವಿಫಲ'ವಾಯಿತಂತೆ, ಇರಬಹುದು. ಅಮೆರಿಕಾ ಸರಕಾರಕ್ಕೆ ಗೊತ್ತೇ ಆಗಲಿಲ್ಲವಂತೆ, ಇರಬಹುದು. ಅಮೆರಿಕಾದ ಜಾಗತಿಕ ಗೂಢಚರ್ಯೆ ಸಾಮರ್ಥ್ಯದ ಹಿನ್ನೆಲೆಯಲ್ಲಿ ನೋಡಿದಾಗ ಮಾತ್ರ ಇದು ಸಂಭವನೀಯವೆನಿಸುವುದಿಲ್ಲ. ಈ ರೀತಿಯ ಅಮೆರಿಕನ್ 'ಗೂಢಚರ್ಯೆ ವಿಫಲತೆ' ಇತ್ತೀಚಿನ ಇತಿಹಾಸದಲ್ಲಿ ಇದೇ ಮೊದಲಲ್ಲ. ತಾನು ವಿಧ್ಯುಕ್ತವಾಗಿ ವಿರೋಧಿಸಬೇಕಾದ ಬೆಳವಣಿಗೆಯನ್ನು ಮನ್ನಾ ಮಾಡಬೇಕೆಂದಿದ್ದಾಗ ಅಮೆರಿಕನ್ ಸರಕಾರ ಈ ಹಿಂದೆಯೂ ಇಂತಹ 'ವಿಫಲತೆ'ಯ ಬಗ್ಗೆ ಮಾತನಾಡಿದೆ. ತನಗೆ ಮೊದಲೇ ತಿಳಿದಿರಲಿಲ್ಲ ಎಂದು ನಟಿಸಿದೆ..........................

.................. ಬಿಜೆಪಿಯ ಸುಳ್ಳು ಸಾಮ್ರಾಜ್ಯಶಾಹಿ-ವಿರೋಧ ಹಾಗೂ ಅಮೆರಿಕ ವಿಧಿಸಿದ ದಿಗ್ಬಂದನಗಳ ಹಿಂದೆ ಹೊಸದೊಂದು (ಚೀಣಾದ ವಿರುದ್ಧ) ಶೀತಲಯುದ್ಧದಲ್ಲಿ ಇವೆರಡರ ನಡುವೆ ದೂರಗಾಮಿ ಮೈತ್ರಿಯ ಸಾಧ್ಯತೆಗಳು ಇವೆ......................

...................... ಇಂತಹ ಪ್ರಮಾಣದ ಹೆಜ್ಜೆಯಿಟ್ಟದ್ದು ಆರ್.ಎಸ್.ಎಸ್.ನ ಹೆಚ್ಚಿನ ಗರಿಮೆಗಾಗಿ. ಆದ್ದರಿಂದ ವಾಜಪೇಯಿಯವರ ಪರಮಾಣು ಧೋರಣೆಯ ಹಿಂದೆ ಒಮ್ಮತ ಎಂದರೆ ಹಿಂದುತ್ವಕ್ಕೆ ಕೊಡುವ ಒಮ್ಮತ ಎಂದೇ ಅರ್ಥವಾಗುತ್ತದೆ. ಈ ಬೋಗಸ್ ಸಾಮ್ರಾಜ್ಯಶಾಹಿ - ವಿರೋಧವನ್ನು ರೂಪಿಸಿರುವುದು ಜಾಗತೀಕರಣವನ್ನು ಮತ್ತು ಖಾಸಗೀಕರಣವನ್ನು ಇನ್ನಷ್ಟು ತೀವ್ರವಾಗಿ ಅನುಸರಿಸಲು ಹಿಂದುತ್ವ ಶಕ್ತಿಗಳಿಗೆ ಅನುವು ಮಾಡಿಕೊಡಲು. ಬಹುಶಃ ಪಿ.ಚಿದಂಬರಂ ಅನುಸರಿಸಲಾರದಷ್ಟು, ಅಷ್ಟೇ ಏಕೆ, ಕಂಡರಿಯದಷ್ಟು ತೀವ್ರವಾಗಿ. ಪರಮಾಣು ಬಿರು ಝಳಪಿಸುವುದರ ಸುತ್ತ ಹೆಣೆದ ಒಮ್ಮತವನ್ನು ಮುರಿಯದಿದ್ದರೆ ಸಾರ್ವಜನಿಕ ಆಸ್ತಿಗಳನ್ನು ಖಾಸಗೀ ಬಂಡವಾಳಕ್ಕೆ ಮಾರಲಾಗುತ್ತದೆ - ಸುಮಾರಾಗಿ ರಶ್ಯಾದಲ್ಲಾದಂತೆಯೇ. ಏಕೆಂದರೆ ಒಂದು ಸ್ವದೇಶಿ ಪರಮಾಣು ಬಾಂಬಿನ ನಂತರ ಬೇರೇನೂ ಸ್ವದೇಶಿ ಬೇಕಿಲ್ಲವಲ್ಲ!

- ಪ್ರೊ. ಐಜಾಜ್ ಅಹ್ಮದ್
ಹಿರಿಯ ಸಂಶೋಧಕರು

## ಎಲ್ಲಿ ಹೋಯಿತು ಒಮ್ಮತದ ಭರವಸೆ?


### ಮಾಜಿ ಪ್ರಧಾನಿಯ ಪ್ರಶ್ನೆ

"ಪ್ರಸ್ತುತ ಕ್ಷಣದಲ್ಲಿ ನೀವು ನಿಸ್ಸಂದೇಹವಾಗಿಯೂ ಪ್ರತಿಯೊಬ್ಬ ಭಾರತೀಯ ನಿಮ್ಮ ನಿರ್ಣಯವನ್ನು ಬೆಂಬಲಿಸಬೇಕು ಎಂದು ನಿರೀಕ್ಷಿಸುತ್ತೀರಿ. ಆದರೆ ಇಲ್ಲಿ ಹೇಳಬೇಕಾದ ಸಂಗತಿಯೆಂದರೆ ಎಲ್ಲಾ ಮಹತ್ವದ ರಾಷ್ಟ್ರೀಯ ಪ್ರಶ್ನೆಗಳ ಮೇಲೆ ಒಮ್ಮತವನ್ನು ರೂಪಿಸುತ್ತೇವೆ ಎಂಬ ನಿಮ್ಮದೇ ಭರವಸೆಯನ್ನು ಮೂಲಾಜಿಲ್ಲದೆ ಮರೆತು ಬಿಟ್ಟಿರಿ. ಈ ಸಂದರ್ಭದಲ್ಲಿ ಇನ್ನೊಂದು ವಿಷಯ ಹೇಳುವುದು ಉಪಯುಕ್ತವೆನಿಸುತ್ತದೆ. ೧೯೯೬-೯೭ ರಲ್ಲಿ ಸಿಟಿಬಿಟಿಗೆ ಸಹಿ ಹಾಕಲು ನಾನು ಒಪ್ಪಬೇಕೆಂದು ಕೇಳಿದಾಗ, ನನ್ನ ಸಹಯೋಗಿ ಹಾಗೂ ವಿದೇಶಾಂಗ ವ್ಯವಹಾರಗಳ ಮಂತ್ರಿಯಾಗಿದ್ದ ಶ್ರೀ ಐ.ಕೆ.ಗುಜ್ರಾಲ್‌ರನ್ನು ನಿಮ್ಮ, ಶ್ರೀ ವಿ.ಪಿ.ಸಿಂಗರ್‌ರವರ, ಶ್ರೀ ಪಿ.ವಿ.ನರಸಿಂಹರಾವ್‌ರವರ ಹಾಗೂ ಶ್ರೀ ಚಂದ್ರಶೇಖರ್‌ರವರ ಅಭಿಪ್ರಾಯ ಪಡೆಯಲು ಹೇಳಿದ್ದೆ. ನಿಮ್ಮೆಲ್ಲರೊಡನೆ ಸಮಾಲೋಚಿಸಿದ ನಂತರ ನನ್ನ ಸರಕಾರ ಸಿಟಿಬಿಟಿ ಗೆ ಸಹಿ ಹಾಕಬಾರದೆಂದು ನಿರ್ಧರಿಸಿತು..................................

.................................. ಈಗಿನ ಪರಸ್ಪರಾವಲಂಬಿ ಜಗತ್ತಿನಲ್ಲಿ ಯಾವುದೇ ಒಂದು ದೇಶ ಇನ್ನೊಂದು ದೇಶದ ವಿರುದ್ಧ ಯುದ್ಧ ಮಾಡಿಗೆಲ್ಲುವುದು ಸಾಧ್ಯವಿಲ್ಲ. ಎಲ್ಲಾ ದೇಶಗಳು ತಮ್ಮ ಜನಗಳ ಜೀವನ ಪರಿಸ್ಥಿತಿಗಳನ್ನು ಉತ್ತಮಗೊಳಿಸುವಲ್ಲಿ ಆಸಕ್ತವಾಗಿವೆ. ನಮ್ಮ ದೇಶದಲ್ಲಿ ಕೂಡಾ ಮೇಲ್ವರ್ಗದ ಜನಗಳು ಈ ಘಟನೆಯಿಂದ ಸಂತುಷ್ಟರಾಗಿ ಆಚರಿಸಿರಬಹುದು - ಆದರೆ ಬಡ ಜನರು ಬರಿಹೊಟ್ಟೆಯಲ್ಲಿ ಮಲಗಿ 'ತಿರುಕನ ಕನಸು' ಕಾಣುತ್ತಾರೆ. ಆದರೂ ಹೇಳಬೇಕಾದ ಸಂಗತಿಯೆಂದರೆ ಹಿಂದಿನಂತೆ ಈಗಲೂ ಕೂಡಾ ನಮ್ಮ ಜನಗಳು ತಮ್ಮ ಸಂಕಟ, ಬೇಸರಗಳೇನೇ ಇದ್ದರೂ ದೇಶದ ಸಮಗ್ರತೆ ಮತ್ತು ಭದ್ರತೆಗೆ ಬೆದರಿಕೆ ಬಂದಾಗಲೆಲ್ಲಾ ಒಗ್ಗಟ್ಟಿನಿಂದ ಸರಕಾರದ ಬೆಂಬಲಕ್ಕೆ ನಿಂತಿದ್ದಾರೆ; ಎಲ್ಲಾ ರಾಜಕೀಯ ಪಕ್ಷಗಳೂ ಪಕ್ಷಗಳ ಭೇದಭಾವ ಬಿಟ್ಟು ಜವಾಬ್ದಾರಿಯಿಂದ ವರ್ತಿಸಿದ್ದಾರೆ.

ಈ ಸಂದರ್ಭದಲ್ಲಿ ನಿಮ್ಮ ಸರಕಾರ ಅಂತಹ ಸೌಹಾರ್ದತೆಯನ್ನು ಪುನರುಜ್ಜೀವನಗೊಳಿಸುತ್ತದೆ, ಭಾವೋದ್ರೇಕವನ್ನು ತಗ್ಗಿಸುತ್ತದೆ ಎಂದು ನಾನು ನಂಬುತ್ತೇನೆ.

- ಸಂಯುಕ್ತ ರಂಗದ ಅಧ್ಯಕ್ಷ
ಹೆಚ್.ಡಿ.ದೇವೇಗೌಡರು
ಪ್ರಧಾನಮಂತ್ರಿಗಳಿಗೆ ಮೇ ೧೫ ರಂದು ಬರೆದ ಪತ್ರದಲ್ಲಿ.



# ರಾಜಸ್ಥಾನದಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ: ಉ.ಪ್ರದೇಶದಲ್ಲಿ ಅಧಿಕಾರ ಕಚ್ಚಾಟ

## ಬಿಜೆಪಿ 'ರಾಮರಾಜ್ಯ'ದ ಇತ್ತೀಚಿನ ಮಾಡೆಲ್‌ಗಳು

ರಾಜಸ್ಥಾನದಲ್ಲಿ ಬಿಜೆಪಿಯ ಪ್ರಭಾವ ಹೆಚ್ಚಿರುವುದಕ್ಕೂ ಅಲ್ಲಿ ಅವ್ಯಾಹತವಾಗಿ ಮಹಿಳೆಯರ ಮೇಲೆ ದೌರ್ಜನ್ಯಗಳು ನಡೆಯುತ್ತಿರುವುದಕ್ಕೂ ನೇರ ಸಂಬಂಧ ಇದೆಯೇ? ಇದು ಸಹಜವಾಗಿ ಏಳುವ ಪ್ರಶ್ನೆ. ಆ ರಾಜ್ಯದಲ್ಲಿ ಇತ್ತೀಚೆಗೆ ಹಾಸ್ಟೆಲ್ ಒಂದರಲ್ಲಿ ವಿದ್ಯಾರ್ಥಿನಿಯೊರ್ವಳ ಮೇಲೆ ಅತ್ಯಾಚಾರ, ಮೂರುಗಂಟೆಗಳ ನಂತರ ಅದೇ ಗುಂಪಿನಿಂದ ಮತ್ತ ಅದೇ ರೀತಿ ಅತ್ಯಾಚಾರ, ಒಂದು ತಿಂಗಳ ನಂತರವೂ ಅಪರಾಧಿಗಳನ್ನು ಪತ್ತೆ ಹಚ್ಚುವಲ್ಲಿ ರಾಜಸ್ಥಾನ ಬಿಜೆಪಿ ಸರಕಾರದ ನಿಷ್ಕ್ರಿಯತೆ ಇಡೀ ದೇಶದ ಗಮನ ಸೆಳೆದಿದೆ. ಸಂಸತ್ತಿನಲ್ಲೂ ಇದು ಪ್ರತಿಧ್ವನಿತ ಗೊಂಡಿದೆ.

ಬಿಜೆಪಿ ಆಡಳಿತದ ಈ ರಾಜ್ಯವಂತೂ ಮಹಿಳೆಯರ ವಿರುದ್ಧ ಅತ್ಯಾಚಾರಗಳ ಕರಾಳ ಇತಿಹಾಸವನ್ನೇ ಪಡೆದಿದೆ. ಈಗಿನ ಬಿಜೆಪಿ ಸಂಪುಟದಲ್ಲಿನ ಒಬ್ಬ ಮಂತ್ರಿ ಭಾರತೀಯ ಮಹಿಳೆಯರನ್ನು ನಿಕೃಷ್ಟ ಸ್ಥಾನದಲ್ಲಿಡಬೇಕೆಂದು ಪ್ರತಿಪಾದಿಸುವ ವ್ಯಕ್ತಿ ಹಾಗೂ ಸತಿ ಪದ್ಧತಿ ಪರವಾದ ಮೆರವಣಿಗೆಯಲ್ಲಿ ಭಾಗವಹಿಸಿದವರು. ಅತ್ಯಾಚಾರ ಆರೋಪವಿರುವವನೊಬ್ಬ ಆಳುವ ಪಕ್ಷದ ಶಾಸಕನಾಗಿರುವಾಗ ಮಹಿಳೆಯರು ನ್ಯಾಯ ನಿರೀಕ್ಷಿಸಲು ಸಾಧ್ಯವೇ - ಇದು ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಗಳ ಪ್ರಶ್ನೆ. ಹೆಣ್ಣು ಮಕ್ಕಳಿಗೆ ಸಮಾನ ಶಿಕ್ಷಣ ಕೊಡಲಾಗದ ಇಂತಹ ರಾಜ್ಯದಲ್ಲಿ 1997 ರ ಜನವರಿಯಿಂದ ಸೆಪ್ಟೆಂಬರ್ ನಡುವೆಯೇ 992 ಅತ್ಯಾಚಾರ ಪ್ರಕರಣಗಳು, 3430 ದೌರ್ಜನ್ಯ ಪ್ರಕರಣಗಳು ವರದಿಯಾಗಿದ್ದರೆ. ಹೆಣ್ಣು ಭ್ರೂಣ ಹತ್ಯೆಯ ಸಂಖ್ಯೆಯಲ್ಲಿ ಎಲ್ಲಕ್ಕೂ ಮೇಲಿನ ಸ್ಥಾನ ಪಡೆದಿದ್ದರೆ ಆಶ್ಚರ್ಯವೇನು?

ಇದು ಬಿಜೆಪಿ ರಾಜ್ಯದ ಒಂದು ಇತ್ತೀಚಿನ ಮಾದರಿಯಾದರೆ ಉತ್ತರ ಪ್ರದೇಶ ಮತ್ತೆ ಲೇಟೆಸ್ಟ್ ಮಾಡೆಲ್ ಸ್ಥಾನ ಪಡೆಯುವ ಸ್ಪರ್ಧೆಯಲ್ಲಿದೆ. ಅಲ್ಲಿ ಬಿಜೆಪಿಯೊಳಗಿನ ಅಧಿಕಾರದ ಕಚ್ಚಾಟ ವಂತೂ ಈಗ ಗುಟ್ಟೇನೂ ಅಲ್ಲ. ಕಲ್ಯಾಣ್ ಸಿಂಗ್ ಸರಕಾರದ ಅನೈತಿಕತೆಯಲ್ಲಿ ಭಾಗೀದಾರರಾದ ಪಕ್ಷಗಳು ಮತ್ತು ಬಿಜೆಪಿ ನಡುವಣ ಕಿತ್ತಾಟಗಳೂ ಈಗ ಗುಟ್ಟೇನಲ್ಲ. ಉತ್ತರ ಪ್ರದೇಶದ ಬಿಜೆಪಿ ನೇತೃತ್ವದ ಸರಕಾರದ ನಿಜ ಸ್ವರೂಪದ ಪ್ರತೀಕದಂತಿರುವ ಮಂತ್ರಿ 'ರಾಜಾ ಭಯ್ಯಾ' ನ ಇತ್ತೀಚಿನ ಸಾಹಸವೆಂದರೆ 60 ವರ್ಷದ ತನ್ನ ಮಹಿಳಾ ಬಾಡಿಗೆದಾರಳನ್ನು ಅಪಹರಿಸಿ 36 ಗಂಟೆ ಬಂಧನದಲ್ಲಿಟ್ಟಿದ್ದು.

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಬಿಜೆಪಿಯೇತರ ಪಕ್ಷಗಳ ನೇತೃತ್ವದಲ್ಲಿರುವ ರಾಜ್ಯ ಸರಕಾರಗಳ ಕಾನೂನು ವ್ಯವಸ್ಥೆ 'ಪರಿಸ್ಥಿತಿ'ಯನ್ನು ಪರಿಶೀಲಿಸಲೆಂದು ಕೂತಾಗ ತನ್ನ ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿನ ಇಂತಹ ಪರಿಸ್ಥಿತಿ ಇಡೀ ದೇಶದ ಪ್ರಜಾಪ್ರಭುತ್ವವಾದಿಗಳ ಗಮನ ಸೆಳೆದಿತ್ತು.

ಈ ನಡುವೆ ಮುರಾದಾಬಾದಿನಲ್ಲಿ ಮೇ 8 ಮತ್ತು 10 ರಂದು ನಡೆದ ಕೋಮುಗಲಭೆಗಳು ಹಲವರನ್ನು ಬಲಿತೆಗೆದುಕೊಂಡು ಬಿಜೆಪಿ ರಾಜ್ಯದಲ್ಲಿ ಕೋಮುದಂಗೆಗಳಾಗುವದಿಲ್ಲ ಎಂಬ ಮಿಥ್ಯೆಯನ್ನು ಒಡೆದಿದೆ.

## ಬಿಹಾರ: ಮೂರು ತಿಂಗಳ ಪ್ರಚಾರಾಂದೋಲನ ಕಾರ್ಯಕ್ರಮ

ಮೇ 8, 9 ರಂದು ಪಾಟ್ನಾದಲ್ಲಿ ಸಭೆ ಸೇರಿದ ಸಿಪಿಐ(ಎಂ) ಬಿಹಾರ ರಾಜ್ಯ ಸಮಿತಿ ರಾಜ್ಯಾದ್ಯಂತ ಮೂರು ತಿಂಗಳ ಪ್ರಚಾರಾಂದೋಲನ ನಡೆಸಲು ನಿರ್ಧರಿಸಿದೆ. ಈ ಹಿಂದೆ ಕೇಂದ್ರ ಸಮಿತಿ ಈ ಬಗ್ಗೆ ಕರೆ ನೀಡಿತ್ತು. ಪಾದಯಾತ್ರೆಗಳು, ಗ್ರಾಮಸಭೆಗಳು ಜೂನ್ 15 ರಿಂದ ಜುಲೈ 15 ರವರೆಗೆ ನಡೆಯಲಿವೆ. ನಂತರ ಜುಲೈ 30 ರವರೆಗೆ ಬ್ಲಾಕ್ ಮಟ್ಟದ ಸಭೆಗಳು ಆಗಸ್ಟ್ 11 ರಂದು ಜಿಲ್ಲಾ ಮಟ್ಟದ ಸಭೆಗಳು ನಡೆಯುತ್ತದೆ.

**ವನಾಂಚಲ ರಾಜ್ಯ ಬೇಡವೆಂದು ಮತಪ್ರದರ್ಶನ**

ಈಗಾಗಲೇ ರಾಜ್ಯದ ಜಿಲ್ಲಾ ಮುಖ್ಯಾಲಯಗಳಲ್ಲಿ ಮೇ 12 ರಂದು ವನಾಂಚಲ ರಾಜ್ಯ ರಚನೆಯ ವಿರುದ್ಧ ಸಾರ್ವಜನಿಕಾಭಿಪ್ರಾಯ ಮೂಡಿಸಲು ಮತಪ್ರದರ್ಶನ ನಡೆದಿವೆ. ಇದಕ್ಕೆ ಮೊದಲು ಏಪ್ರಿಲ್ 27 ರಂದು ಬ್ಲಾಕ್ ಮಟ್ಟಗಳಲ್ಲಿ ಇಂತಹ ಪ್ರತಿಭಟನೆಗಳು ನಡೆದಿದ್ದವು. ಝಾರ್ಖಂಡ್ ಸ್ವಾಯತ್ತ ಪ್ರದೇಶ ಮಂಡಳಿಗೆ ತಕ್ಷಣವೇ ಚುನಾವಣೆ ನಡೆಸಬೇಕು, ಬುಡಕಟ್ಟು ಹಿತಾಸಕ್ತಿಗಳನ್ನು ಮತ್ತು ಅವರ ಸ್ವಂತಿಕೆಯನ್ನು ರಕ್ಷಿಸಬೇಕು ಎಂದು ಘೋಷಣೆ ಕೂಗುತ್ತಾ ಸಾವಿರಾರು ಪಕ್ಷದ ಕಾರ್ಯಕರ್ತರು ಹಿತೈಷಿಗಳು ಈ ಸಭೆಗಳಲ್ಲಿ ಭಾಗವಹಿಸಿದರು.

**ಪಾಟ್ನಾದಲ್ಲಿ ಜಂಟಿ ಮತಪ್ರದರ್ಶನ.**

ಮೇ 12 ರಂದು ಪಾಟ್ನಾದಲ್ಲಿ ಎಡ ಪಕ್ಷಗಳ ಒಂದು ಜಂಟಿ ರ್‍ಯಾಲಿ ಹಿಂದಿನದಿನ ಭೋಜಪುರ ಜಿಲ್ಲೆಯ ನಗ್ರೀಬರ್ಝಾರ್‌ನಲ್ಲಿ ಮುಗ್ಧ ಗ್ರಾಮಸ್ಥರನ್ನು ರಣವೀರ ಸೇನಾದ ಗೂಂಡಾಗಳು ಅಮಾನುಷವಾಗಿ ಸಾಮೂಹಿಕ ಹತ್ಯೆ ಮಾಡಿರುವುದನ್ನು ಖಂಡಿಸಲು ನಡೆಯಿತು. ದಲಿತ, ಮುಸ್ಲಿಂ, ಒ.ಬಿ.ಸಿ. ಮಾತ್ರವಲ್ಲ ಮುಂದುವರಿದ ಜಾತಿಗಳ ಬಡ ಜನರೂ ಸೇರಿದಂತೆ 10 ಮಂದಿ ಈ ನರಹತ್ಯೆಗೆ ಬಲಿಯಾಗಿದ್ದಾರೆ. ರಣವೀರಸೇನೆಯ ಈ ಹಲ್ಲೆಗೆ ಯಾವುದೇ ಕಾರಣಗಳಿರಲಿಲ್ಲ. ಸಿಪಿಐ, ಸಿಪಿಐ(ಎಂ), ಸಿಪಿಐ(ಎಂ.ಎಲ್) ಮತ್ತಿತರರು ಈ ಪ್ರತಿಭಟನಾ ಮತಪ್ರದರ್ಶನದಲ್ಲಿ ಭಾಗವಹಿಸಿದ್ದರು.

## ಅಸ್ಸಾಂ: ಸಾಮೂಹಿಕ ಚಳುವಳಿ ನಡೆಸಲು ಸಿಪಿಐ(ಎಂ) ನಿರ್ಧಾರ

ಸಿಪಿಐ(ಎಂ)ನ ಅಸ್ಸಾಂ ರಾಜ್ಯ ಸಮಿತಿ ಮೇ 6-7 ರಂದು ಸಭೆ ಸೇರಿ ರಾಜ್ಯದ ರಾಜಕೀಯ ಬೆಳವಣಿಗೆಗಳನ್ನು ಚರ್ಚಿಸಿ ಆರು ಪ್ರಶ್ನೆಗಳ ಮೇಲೆ ಚಳುವಳಿ ನಡೆಸಲು ನಿರ್ಧರಿಸಿತು. ಕೇಂದ್ರದಲ್ಲಿ ಕೋಮುವಾದಿ ಶಕ್ತಿಗಳು ಒಡ್ಡಿರುವ ಅಪಾಯದೊಂದಿಗೆ ರಾಜ್ಯದಲ್ಲಿ ರಾಜ್ಯ ಸರಕಾರದ ವಿಫಲತೆ ಜನಗಳ ಸಮಸ್ಯೆಗಳನ್ನು ಉಲ್ಬಣಗೊಳಿಸಿದೆ. ಅಭಿವೃದ್ಧಿ ಕಾರ್ಯಗಳಾಗಿಲ್ಲ, ಹಲವು ಮಟ್ಟಗಳಲ್ಲಿ ಭ್ರಷ್ಟಾಚಾರಗಳಿಂದ ಜನ ಬೇಸತ್ತಿದ್ದಾರೆ.

ಜೀವನಾವಶ್ಯಕ ವಸ್ತುಗಳ ಬೆಲೆಯೇರಿಕೆ, ತನ್ನ ನೌಕರರಿಗೆ ಸರಿಯಾಗಿ ಸಂಬಳ ನೀಡದಿರುವುದು, ಉದ್ಯೋಗದ ಕಾಶಗಳ ಅಭಾವ, ಹಲವಾರು ಸಾರ್ವಜನಿಕ ವಲಯದ ಘಟಕಗಳ ಮುಚ್ಚಿಕೆಯಿಂದ ರಾಜ್ಯದಲ್ಲಿ ಆತಂಕಕಾರಿ ಸ್ಥಿತಿ ಉಂಟಾಗಿದೆ ಎಂದಿರುವ ಸಿಪಿಐ(ಎಂ) ರಾಜ್ಯ ಸಮಿತಿ ಇದರ ವಿರುದ್ಧ ಜನಪ್ರಿಯ ಆಂದೋಲನಗಳಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದೆ.

ದೇಶದೊಳಗೆ

## ಅಸ್ಸಾಂ : ಕೋಕ್ರಾಜಾರ್ - ಬಂಧ್ಯಾಗಾಂವ್‌ನಲ್ಲಿ ಜನಾಂಗ ಕಲಹಗಳೇಕೆ ನಡೆಯುತ್ತಿವೆ?

### ಸಿಪಿಐ(ಎಂ) ನಿಯೋಗದ ಅಧ್ಯಯನ

ಅಸ್ಸಾಂನ ಸಿಪಿಐ(ಎಂ) ಮುಖಂಡರ ಒಂದು ನಿಯೋಗ ಮೇ 13-14 ರಂದು ಕೋಕ್ರಾಜಾರ್ ಮತ್ತು ಬಂದಾಯ್ ಗಾಂವ್ ಜಿಲ್ಲೆಗಳ ಗಲಭೆ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿತು. ಬೋಡೋ ಮತ್ತು ಆದಿವಾಸಿ ನಿರಾಶ್ರಿತರನ್ನು ಪ್ರತ್ಯೇಕವಾಗಿ ಇರಿಸಿದ್ದ ನಿರಾಶ್ರಿತರ ಕ್ಯಾಂಪ್‌ಗಳಿಗೆ ಭೇಟಿ ನೀಡಿದ ನಿಯೋಗ ಅವರೊಂದಿಗೆ ಮಾತು ಕತೆ ನಡೆಸಿ ಬೋಡೋಗಳು ಮತ್ತು ಆದಿವಾಸಿಗಳ ನಡುವೆ ಮತ್ತೆ-ಮತ್ತೆ ತಿಕ್ಕಾಟ ನಡೆಯುವ ಕಾರಣಗಳನ್ನು ತಿಳಿಯಲು ಪ್ರಯತ್ನಿಸಿತು.

ಜನಗಳಿಗೆ ಇಂತಹ ಗಲಭೆಗಳು ಬೇಕಿಲ್ಲ, ಶಾಂತಿ ಬೇಕಾಗಿದೆಯೆಂಬುದು ವಿವಿಧ ವಿಭಾಗಗಳ ಜನಸಮೂಹಗಳೊಂದಿಗೆ ಮಾತನಾಡಿದಾಗ ನಿಯೋಗಕ್ಕೆ ಕಂಡುಬಂತು. ಜಿಲ್ಲಾ ಆಡಳಿತದ ಬಗ್ಗೆ ಅವರಿಗೆ ಬಹಳ ಸಿಟ್ಟಿದ್ದಂತಿತ್ತು. ಏಕೆಂದರೆ ಮೊದಲೇ ಸುದ್ದಿ ತಿಳಿಸಿದ್ದರೂ ಯಾವುದೇ ತಡೆ ಕ್ರಮಗಳನ್ನು ಕೈಗೊಂಡು ಇಂತಹ ಘಟನೆಗಳು ಮರುಕಳಿಸದಂತೆ ಆಡಳಿತ ನೋಡಿಕೊಳ್ಳಲಿಲ್ಲ. ನಿರಾಶ್ರಿತರ ಕ್ಯಾಂಪುಗಳಿಗೆ ಅಕ್ಕಿ, ಬೇಳೆ, ಎಣ್ಣೆ, ಉಪ್ಪು ಮುಂತಾದ ಪರಿಹಾರ ಸಾಮಗ್ರಿಗಳ ಸರಿಯಾದ ಪೂರೈಕೆಯಾಗುತ್ತಿಲ್ಲ ಎಂದೂ ಅವರು ದೂರಿದರು. ಸಿಪಿಐ(ಎಂ) ನಿಯೋಗ ಅಸಹಾಯಕ ಕ್ಯಾಂಪುವಾಸಿಗಳ ಪರಿಸ್ಥಿತಿ ಸುಧಾರಿಸಲು ಕ್ರಮ ಕೈಗೊಳ್ಳ ಬೇಕೆಂದು ಕೋಕ್ರಾಜಾರ್ ಜಿಲ್ಲೆಯ ಡಿ.ಸಿ.ಯನು ಆಗ್ರಹಪಡಿಸಿದರು.

ಬೋಡೋ ಮತ್ತು ಆದಿವಾಸಿಗಳ ನಡುವೆ ಜನಾಂಗ ಕಲಹಗಳು ಆಡಳಿತದ ಬಲವಾದ ಆಶ್ರಯದಲ್ಲಿ ನೀತಿಗೆಟ್ಟ ವ್ಯಕ್ತಿಗಳಿಂದಾಗಿ ಕಾಡುಗಳು ತ್ವರಿತವಾಗಿ ಧ್ವಂಸವಾಗುತ್ತಿರುವುದರಿಂದ ಉಂಟಾಗಿರುವಂತವುಗಳು. ತೀವ್ರ ಆರ್ಥಿಕ ಸಂಕಟಕ್ಕೊಳಗಾದ ಬಡತನದಿಂದ ಭೂಮಿ ಕಳಕೊಂಡ ಬೋಡೋಗಳು ಮತ್ತು ಆದಿವಾಸಿಗಳು ಈ ಕಾಡುಗಳಲ್ಲಿ ಸ್ವಲ್ಪ ಭಾಗವನ್ನು ಆಕ್ರಮಿಸಿಕೊಂಡು ಬೇಸಾಯ ಮಾಡುತ್ತಿದ್ದಾರೆ. ಈ ಎರಡು ಕೋಮುಗಳ ನಡುವಿನ ಸಹಕಾರ ಮತ್ತು ಮೈತ್ರಿ ಭಾವನೆಗಳಲ್ಲಿ ವಿವಿಧ ಬಣಗಳ ಉಗ್ರಗಾಮಿಗಳು ಹುಳಿಹಿಂಡಿದ್ದಾರೆ. ಈಗ ಈ ತಿಕ್ಕಾಟಗಳಲ್ಲಿ ಅರಣ್ಯ ಭೂಮಿಯಲ್ಲಿಲ್ಲದ ಜನಗಳೂ ಸಿಕ್ಕಿಕೊಂಡಿದ್ದಾರೆ.

ರಾಸುಗಾಂವ್‌ನಲ್ಲಿ ಪೋಲೀಸ್ ಗೋಳಿಬಾರಿನಿಂದ ಮೂವರು ಕೊಲ್ಲಲ್ಪಟ್ಟರು. ಏಳುಮಂದಿ ಗಾಯಗೊಂಡರು. ಈ ಘಟನೆಯ ಬಗ್ಗೆ ತನಿಖೆ ನಡೆಸಬೇಕು ಎಂದು ಸಿಪಿಐ(ಎಂ) ನಿಯೋಗ ಆಗ್ರಹಪಡಿಸಿತು.

ಜನಗಳಲ್ಲಿ ವಿಶ್ವಾಸ ಮೂಡಿಸಲು ಭದ್ರತಾ ಕ್ರಮಗಳನ್ನು ಬಲಪಡಿಸಬೇಕು ಎಂದು ಸಿಪಿಐ(ಎಂ) ನಿಯೋಗ ಅಭಿಪ್ರಾಯಪಟ್ಟಿದೆ. ಇಂತಹ ತಿಕ್ಕಾಟಗಳು ಮತ್ತೆ ನಡೆಯದಂತೆ ಆಡಳಿತ ನೋಡಿಕೊಳ್ಳಬೇಕು ಎಂದೂ ಅದು ಆಗ್ರಹಪಡಿಸಿತು.

ಸಂಪೂರ್ಣ ಹಸಿರು ಆವರಣದಿಂದ ಮುಕ್ತವಾಗಿರುವ ಅರಣ್ಯ ಭೂಮಿಯನ್ನು ಬಡ ಬೋಡೋ ಹಾಗೂ ಆದಿವಾಸಿ ಜನಗಳಲ್ಲಿ ಹಂಚಬಹುದು ಎಂಬುದು ಸಿಪಿಐ(ಎಂ)ನ ಅಭಿಪ್ರಾಯ. ಸರಕಾರ ಈ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಬೇಕು, ಸರಕಾರ ವಿವಿಧ ರಾಜಕೀಯ ಪಕ್ಷಗಳ ಹಾಗೂ ಶಾಂತಿಪ್ರಿಯ ಜನಗಳ ಸಹಕಾರದಿಂದ ಉಗ್ರಗಾಮಿಗಳನ್ನು ಜನಗಳಿಂದ ದೂರಮಾಡಲು ಪ್ರಯತ್ನಿಸಬೇಕು ಎಂದೂ ಸಿಪಿಐ(ಎಂ) ನಿಯೋಗ ಸೂಚಿಸಿತು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಉದ್ಧಬ್ ಬರ್ಮನ್, ಅನಂತದೇಶಾ, ಮನೋರಂಜನ್ ತಾಲೂಕ್‌ದಾರ್, ಮಹೇಂದರ್ ಪಾಠಕ್, ಜಿಲ್ಲಾ ಮುಖಂಡರು ಈ ನಿಯೋಗದಲ್ಲಿದ್ದರು. (ಐ.ಎನ್.ಎನ್.)

## ಸೈಕಲ್ ರಿಕ್ಷಾ ಚಾಲಕರ ಸಹಕಾರ ಸಂಘ

ಶಹಾಪುರ : ಮೇ 1ರಂದು ಶಹಾಪೂರದಲ್ಲಿ ಸಿ.ಐ.ಟಿ.ಯು ನೇತೃತ್ವದಲ್ಲಿ ವಿಶ್ವ ಕಾರ್ಮಿಕರ ದಿನಾಚರಣೆ ಆಚರಿಸಲಾಯಿತು. ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಸಿ.ಎಸ್. ಆನೇಗುಂದಿ ಮೇ ದಿನಾಚರಣೆ ವಿಶ್ವ ಕಾರ್ಮಿಕರ ಐಕ್ಯತೆಯನ್ನು ಎತ್ತಿ ಹಿಡಿಯುತ್ತದೆ ಎಂದ ಅವರು ಅಸಂಘಟಿತ ಕಾರ್ಮಿಕ ರನ್ನು ಒಗ್ಗೂಡಿಸಿ ಸಿ.ಐ.ಟಿ.ಯು ಸಂಘಟನೆಯ ಅಡಿಯಲ್ಲಿ ಕೆಲಸ ಮಾಡಲು ಎಲ್ಲಾ ಕಾರ್ಮಿಕರು ಶ್ರಮ ವಹಿಸಲು ಕರೆ ನೀಡಿದರು.

ಸರಕಾರದಿಂದ ಸಿಗುವ ಸೌಲಭ್ಯ ಬಡವರಿಗೆ ಕಲ್ಯಾಣ ಕಾನೂನು ಪ್ರತಿ ಕಾರ್ಡಿಗೆ 20 ಕೆ.ಜಿ. ಅಕ್ಕಿ ಕೊಡಲು ಮತ್ತು ಆಶ್ರಯ ಮನೆಗಳನ್ನು ಪಡೆಯಲು ಎಲ್ಲರೂ ಒಗ್ಗಟ್ಟಾಗಿ ಹೋರಾಟ ಮಾಡಲು ಕರೆ ನೀಡಿದರು. ಎಸ್.ಎಫ್.ಐ.ನ ಜೈಲಾಲ್ ತೋಟದಮನಿ ಮಾತನಾಡುತ್ತಾ ಚಿಕಾಗೋ ನಗರದಲ್ಲಿ ನಡೆದ ಕಾರ್ಮಿಕರ ಐತಿಹಾಸಿಕ ಹೋರಾಟ ಮೇ ದಿನಾಚರಣೆ ಬಗ್ಗೆ ವಿವರಿಸಿದರು. ಕಾರ್ಮಿಕರ ಮುಖಂಡ ಹಾಗೂ ನ್ಯಾಯವಾದಿಗಳಾದ ನಿಂಗಣ್ಣ ಸಗರ ಸಿ.ಪಿ.ಐ(ಎಂ) ಕಾರ್ಯಾಲಯದಲ್ಲಿ ಧ್ವಜಾರೋಹಣ ಮಾಡಿದರು. ರೈತ ಮುಖಂಡರಾದ ನಿಂಗಣ್ಣ, ಗ್ರಾ.ಪಂ. ನೌಕರರ ಸಂಘದ ಹೊನ್ನಪ್ಪಗೌಡ, ಅಂಗನವಾಡಿ ನೌಕರರ ಸಂಘದ ದಾಕ್ಷಾಯಿಣಿ ಇನ್ನಿತರ ಮುಖಂಡರು ಕಾರ್ಮಿಕ ದಿನಾಚರಣೆ ಬಗ್ಗೆ ತಿಳಿಸಿ ಸಂಘಟಿತರಾಗಿ ಹೋರಾಟ ಮಾಡಲು ಕರೆ ನೀಡಿದರು.

**ಸೈಕಲ್ ರಿಕ್ಷಾ ಚಾಲಕರ ಸಂಘದ ಪದಾಧಿಕಾರಿಗಳು**

ಅಧ್ಯಕ್ಷರು-ನಿಂಗಣ್ಣ ಸಗರ(ವಕೀಲರು), ಪ್ರಧಾನ ಕಾರ್ಯದರ್ಶಿಗಳು- ಸಿದ್ದಪ್ಪ ಪೂಜಾರಿ, ಖಜಾಂಚಿ-ಶರಣಪ್ಪ ಹ್ಯಾಳಕರ, ಉಪಾಧ್ಯಕ್ಷರು-ನಾಗಪ್ಪ ಜಮಖಂಡಿ, ಭೀಮರಾಯ ತಿಪ್ಪನಟಗಿ, ಲಕ್ಷ್ಮಣ ಯಾದಗಿರಿ, ಸಹ ಕಾಯದರ್ಶಿಗಳು -ಯಂಕಪ್ಪ ದೋರಿ, ರಾಮಸ್ವಾಮಿ ಹ್ಯಾಳಕರ, ಕಬುಲ್‌ಬಕ್ಷ.

## ಮಹಿಳಾ ಸಮಾವೇಶ

ಜಾಲಹಳ್ಳಿ: ಅಖಿಲ ಭಾರತ ಮಹಿಳಾ ಸಮ್ಮೇಳನದ ಪೂರ್ವಭಾವಿಯಾಗಿ ಜಾಲಹಳ್ಳಿಯಲ್ಲಿ ಮೇ 12 ರಂದು ಮಹಿಳಾ ಸಮಾವೇಶ ನಡೆಯಿತು.

ಸಮಾವೇಶ ಉದ್ಘಾಟಿಸಿ ಮಾತನಾಡಿದ ನೀಲಾ.ಕೆ ಮಹಿಳೆಯರ ನಿತ್ಯ ಸಮಸ್ಯೆಗಳಾದ ಕುಡಿಯುವ ನೀರು, ಶೌಚಾಲಯಗಳ ನಿರ್ಮಾಣ, ಮಹಿಳೆಯ ಮೇಲಿನ ದೌರ್ಜನ್ಯಗಳ ಬಗ್ಗೆ ವಿವರಿಸಿ ಜೂನ್ 11-14 ರ ವರೆಗೆ ಬೆಂಗಳೂರಿನಲ್ಲಿ ನಡೆಯುವ ರಾಷ್ಟ್ರ ಸಮ್ಮೇಳನದ ಬಗ್ಗೆ ವಿವರಿಸಿ ಜೂನ್ 13 ರಂದು ನಡೆಯುವ ರ್‍ಯಾಲಿಯಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕರೆ ನೀಡಿದರು.

ಸಭೆಯಲ್ಲಿ 300 ಮಹಿಳೆಯರು ಭಾಗವಹಿಸಿದ್ದರು.

## ಸ್ಮಶಾನಕ್ಕೆ ಒತ್ತಾಯಿಸಿ ಮೆರವಣಿಗೆ

ಮಳವಳ್ಳಿ: ತಾಲೂಕಿನ ಹುಲ್ಲಾಗಾಲ ಗ್ರಾಮದ ಡಿವೈಎಫ್‌ಐ ಮತ್ತು ಕೃಷಿ ಕೂಲಿಕಾರ ಸಂಘಟನೆಗಳ ನೇತೃತ್ವದಲ್ಲಿ ಊರಿಗೆ ಸ್ಮಶಾನ ಇಲ್ಲದಿರುವುದನ್ನು ಪ್ರತಿಭಟಿಸಿ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಶವದ ಪ್ರತಿಕೃತಿಯೊಡನೆ ಗ್ರಾಮಸ್ಥರು ಮೆರವಣಿಗೆ ನಡೆಸಿದರು.

ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ ಡಿವೈಎಫ್‌ಐನ ತಾಲ್ಲೂಕು ಕಾರ್ಯದರ್ಶಿ ಎನ್.ಎಲ್.ಭರತ್‌ರಾಜ್ ಸದರಿ ಗ್ರಾಮದಲ್ಲಿ ಶೇ 90 ರಷ್ಟು ಭೂರಹಿತ ಹಾಗೂ ಹಿಂದುಳಿದ ಜನಾಂಗ ವಾಸವಿದ್ದು, ಶವ ಹೂಳುವಲ್ಲಿ ಸಂಕಷ್ಟ ಎದುರಿಸುತ್ತಿರುವುದರಿಂದ ಸರ್ಕಾರ ಕೂಡಲೇ ಸರ್ಕಾರಿ ಜಮೀನಿನಲ್ಲಿ ಸ್ಮಶಾನಕ್ಕೆ ಸ್ಥಳ ಒದಗಿಸಬೇಕೆಂದರು.

ಡಿವೈಎಫ್‌ಐ ರಾಜ್ಯ ಮುಖಂಡ ಪುಟ್ಟಮಾದು ಮತ್ತು ಎಸ್.ಎಫ್.ಐ. ನ ಕೃಷ್ಣೇಗೌಡ ಮಾತನಾಡಿ, ಕಳೆದ ಐವತ್ತು ವರ್ಷಗಳಿಂದ ನಮ್ಮನ್ನಾಳಿದ ಸರ್ಕಾರಗಳು ಹಳ್ಳಿಗಳಿಗೆ ಮೂಲಭೂತ ಸೌಕರ್ಯಗಳಾದ ರಸ್ತೆ, ನೀರು, ಶಾಲೆ, ಅಷ್ಟೇ ಏಕೆ ಶವ ಹೂಳಲು ಸ್ಮಶಾನ ಒದಗಿಸುವಲ್ಲಿ ವಿಫಲವಾಗಿರುವುದನ್ನು ಖಂಡಿಸಿದರು.

ಮೆರವಣಿಗೆಯಲ್ಲಿ ಟಿ.ಎಚ್.ಆನಂದ್, ಮರಿಯಪ್ಪ, ಬೋರಯ್ಯ, ಶಿವಕುಮಾರ್, ಪುಟ್ಟರಾಜು ಮುಂತಾದವರು ಪಾಲ್ಗೊಂಡಿದ್ದರು.

ಸ್ಮಶಾನ ಮಂಜೂರು: ಪ್ರತಿಭಟನೆಗೆ ಬಗ್ಗಿದ ಅಧಿಕಾರಿಗಳು ಗ್ರಾಮಕ್ಕೆ ಭೇಟಿ ನೀಡಿ ಸರಕಾರಿ ಜಮೀನಿನಲ್ಲಿ ಪರಿಶೀಲಿಸಿ ಸ್ಮಶಾನಕ್ಕೆ ಮಂಜೂರು ನೀಡಿದ್ದಾರೆ.

## ವೈದ್ಯರ ನೇಮಕಕ್ಕೆ ಒತ್ತಾಯ

ಮಂಗಳೂರು : ಕೊಳೂರು, ಕಿಲೆಂಜರು, ಮುತ್ತೂರು ಅಲ್ಲದೆ ಸುತ್ತಮುತ್ತಲಿನ ಜನಕ್ಕೆ ಕುಪ್ಪೆದಪದವು ಆರೋಗ್ಯ ಘಟಕ ಕೇಂದ್ರವಾಗಿದ್ದು ಇಲ್ಲಿಗೆ ಕಳೆದ 9 ತಿಂಗಳಿಂದ ವೈದ್ಯರಿಲ್ಲದೆ ಜನರು ತೀರಾ ತೊಂದರೆಗೊಳಗಾಗಿದ್ದು ಕೂಡಲೆ ವೈದ್ಯರನ್ನು ನೇಮಿಸುವಂತೆ ಪ್ರದೇಶ ಬೀಡಿ ಕಾರ್ಮಿಕರ ಸಂಘವು ಸರ್ಕಾರವನ್ನು ಒತ್ತಾಯಿಸಿದೆ.

ಈ ಬಗ್ಗೆ ಸ್ಥಳೀಯ ಡಿ.ವೈ.ಎಫ್.ಐ. ಘಟಕವು ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಅಧ್ಯಕ್ಷರು ಹಾಗೂ ಜಿಲ್ಲಾ ವೈದ್ಯಾಧಿಕಾರಿಗಳನ್ನು ಭೇಟಿ ಮಾಡಿ ವೈದ್ಯರನ್ನು ನೇಮಿಸುವಂತೆ ಮನವಿ ಸಲ್ಲಿಸುವುದರ ಜೊತೆಗೆ ಏಪ್ರಿಲ್ 21 ರಂದು ಸ್ಥಳೀಯ ಪಂಚಾಯತ್ ಕಛೇರಿ ಮುಂದೆ ಪ್ರತಿಭಟಿಸಿತ್ತು.

ಜಿಲ್ಲಾ ಆಡಳಿತವು ಈ ಬಗ್ಗೆ ಇನ್ನೂ ನಿರ್ಲಕ್ಷಿಸಿದರೆ ಭಾರೀ ಪ್ರತಿಭಟನೆ ನಡೆಸಲಾಗುವುದೆಂದು ಬೀಡಿ ಕಾರ್ಮಿಕರ ಸಂಘವು ಎಚ್ಚರಿಸಿದೆ.

## ಡಿವೈಎಫ್‌ಐ ಘಟಕ ಅಸ್ತಿತ್ವಕ್ಕೆ

ಗುಲ್ಬರ್ಗ: ಜಿಲ್ಲೆಯ ತಾವರಗೇರಾ ಗ್ರಾಮದಲ್ಲಿ ಮೇ 9 ರಂದು ನೂತನವಾಗಿ ಡಿವೈಎಫ್‌ಐ ಘಟಕವು ರಚನೆಗೊಂಡಿತು. ಘಟಕ ಉದ್ಘಾಟಿಸಿದ ಜೆಎಂಎಸ್‌ನ ನೀಲಾ.ಕೆ ಮಾತನಾಡಿ ಯುವ ಜನತೆ ಗ್ರಾಮಗಳ ಸರ್ವಾಂಗೀಣ ಅಭಿವೃದ್ಧಿಗೆ ಹಾಗೂ ದೇಶದ ಐಕ್ಯತೆಗಾಗಿ ಹೋರಾಡಬೇಕಾಗಿದೆ ಎಂದರು.

ಮುಖ್ಯ ಅತಿಥಿಗಳಾಗಿ ಸಿದ್ದಣ್ಣ ಮುಕರಂಬಿ, ವಿ.ಕೆ.ಸಲಗರ, ಬಾಬರಖಾನ, ನಾಗಣ್ಣ ಅವರಾದಿ ದಿಗ್ಗಾಂವ ಭಾಗವಹಿಸಿದ್ದರು. ಸಭೆಯ ಅಧ್ಯಕ್ಷತೆಯನ್ನು ಗ್ರಾ.ಪಂ. ಉಪಾಧ್ಯಕ್ಷ ರಫೀಕ ಪಟೇಲ ವಹಿಸಿದ್ದರು.

**ಪದಾಧಿಕಾರಿಗಳು**

ಅಧ್ಯಕ್ಷ: ಶಾಂತಲಿಂಗ ಮಠಪತಿ, ಉಪಾಧ್ಯಕ್ಷರು: ರಾಜಶೇಖರಪಂಚಾಳ, ಕಾರ್ಯದರ್ಶಿ: ಶಮಶ್ಯಾಕಿನ್ ಮೋಮಿನ್ ಆಯ್ಕೆಗೊಂಡಿದ್ದಾರೆ.



# ಸದನದಲ್ಲಿ ಶ್ರೀರಾಮರೆಡ್ಡಿ

## ಸರ್ಕಾರಿ ಆಸ್ಪತ್ರೆಗಳ ಸುಧಾರಣೆಗೆ ಆಗ್ರಹ

**ಇತ್ತೀಚೆಗೆ ಮುಕ್ತಾಯಗೊಂಡ ವಿಧಾನ ಸಭೆಯ ಕಾರ್ಯ ಕಲಾಪಗಳಲ್ಲಿ ಬಾಗೇಪಲ್ಲಿ ಕ್ಷೇತ್ರದ ಸಿಪಿಐ(ಎಂ) ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿ ವೈದ್ಯಕೀಯ ಶಿಕ್ಷಣ, ಆರೋಗ್ಯ ಹಾಗೂ ಕೃಷಿ ಇಲಾಖೆಗಳ ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಚರ್ಚಿಸಿದ ಸಾರಾಂಶ.**

ಇಡೀ ಜಗತ್ತಿನ ಪ್ರತಿಯೊಬ್ಬ ಪ್ರಜೆಗೂ ಆರೋಗ್ಯ ಕೊಡಬೇಕೆಂಬ ಉದ್ದೇಶದಿಂದ 1948 ರಲ್ಲಿ ವಿಶ್ವಬ್ಯಾಂಕ್ ಸರ್ವರಿಗೂ ಆರೋಗ್ಯ ನಿರ್ಣಯ ಅಂಗೀಕರಿಸಿತು. ಅದಕ್ಕೆ ಒಪ್ಪಿ ಸಹಿಮಾಡಿದ ಪ್ರಮುಖ ರಾಷ್ಟ್ರಗಳಲ್ಲಿ ಭಾರತವೂ ಒಂದು. ಈ ಘೋಷಣೆ ಹೊರಬಿದ್ದು 60 ವರ್ಷ ಕಳೆದಿದೆ. ಆದರೆ ಕರ್ನಾಟಕ ರಾಜ್ಯದ ಶೇ 60 ಜನ ಆಧುನಿಕ ವೈದ್ಯಕೀಯ ಸೌಕರ್ಯ ಪಡೆಯುವುದಿರಲಿ ಅದರ ದರ್ಶನವನ್ನೂ ಕಂಡಿಲ್ಲವೆಂಬುದು ಆಳುವ ಜನಕ್ಕೆ ಅಪಮಾನಕರ ಸಂಗತಿ ಎಂದು ಶ್ರೀರಾಮರೆಡ್ಡಿ ವಿಷಾದಿಸಿದರು.

ಎಲ್ಲರಿಗೂ ವೈದ್ಯಕೀಯ ಸೌಲಭ್ಯವಿರಲಿ ಇಡೀ ರಾಜ್ಯದ ಒಂದೇ ಒಂದು ಸರ್ಕಾರಿ ಆಸ್ಪತ್ರೆಯಲ್ಲಿ ಎಲ್ಲಾ ರೀತಿಯ ಸಲಕರಣೆಗಳು, ವೈದ್ಯರು, ನರ್ಸ್, ಅಟೆಂಡರ್ ಆಯಾಗಳು ಔಷಧಿಗಳು ಇರುವ ವೈದ್ಯಕೀಯ ಇತಿಹಾಸ ರಾಜಕ್ಕಿಲ್ಲವಾಗಿದೆ. ಗ್ರಾಮಾಂತರ ಆಸ್ಪತ್ರೆಗಳಂತೂ ದನದ ಕೊಟ್ಟಿಗೆಗಿಂತ ಕಡೆಯಾಗಿದೆ. ಮೂಗು ತೂರಿಸಲು ಕೂಡ ಅಸಹ್ಯ ಪಡುವಂತ ವಾತಾವರಣ ರೂಪುಗೊಂಡಿದೆ. ಗ್ರಾಮಾಂತರ ಜನತೆ ಸರ್ಕಾರಿ ಆಸ್ಪತ್ರೆಗಳನ್ನು ನಂಬಿ ತಮ್ಮ ಪ್ರಾಣ ಕಳೆದುಕೊಳ್ಳುವಂತಹ ಸ್ಥಿತಿ ಮುಟ್ಟಿದ್ದಾರೆ. ಈ ಬಗ್ಗೆ ಸದನದಲ್ಲಿ ಹಲವಾರು ಬಾರಿ ಚರ್ಚಿಸಿದರೂ ಸರ್ಕಾರ ಕಿವಿಕೊಡದಿರುವುದು ಬೇಸರ ಮೂಡಿಸಿದೆ ಎಂದ ಶ್ರೀರಾಮರೆಡ್ಡಿ ಸರ್ಕಾರದ ವೈದ್ಯಕೀಯ ನಿಲುಮೆಯನ್ನು ಬಹಿರಂಗಗೊಳಿಸಿದರು.

ಮತ್ತೊಂದೆಡೆ ಅತ್ಯಾಧುನಿಕ ಅತ್ಯುತ್ತಮ ಆರೋಗ್ಯ ಸೌಲಭ್ಯಗಳು ಲಕ್ಷಾಂತರ ಹಣ ಖರ್ಚು ಮಾಡುವ ಶ್ರೀಮಂತರಿಗೆ ರಾಜ್ಯದಲ್ಲಿ ಮೀಸಲಾಗಿದೆ, ಹಣವಿಲ್ಲದ ಸಾಮಾನ್ಯರಿಗೆ ಕರ್ನಾಟಕ ರಾಜ್ಯದಲ್ಲಿ ಯಾವುದೇ ವೈದ್ಯಕೀಯ ಸೌಲಭ್ಯ ಸ್ವತಂತ್ರ ಭಾರತದ 50 ವರ್ಷಗಳ ನಂತರವೂ ದೊರೆತಿಲ್ಲವೆಂದರೆ ಈ ಸರ್ಕಾರಗಳನ್ನು ನಾಗರೀಕ ಸರ್ಕಾರವೆಂದು ಕರೆಯಲು ಸಾಧ್ಯವೇ ಎಂದು ಸರ್ಕಾರದ ಅಸ್ತಿತ್ವವನ್ನು ಪ್ರಶ್ನಿಸಿದರು.

**ಹದಿನೆಂಟು ವೈದ್ಯಕೀಯ ಕಾಲೇಜು!**

ಕರ್ನಾಟಕ ರಾಜ್ಯದ 18 ವೈದ್ಯಕೀಯ ಕಾಲೇಜುಗಳಲ್ಲಿ 4 ಸರ್ಕಾರಿ ಕಾಲೇಜು ಹಾಗೂ 14 ಖಾಸಗಿ ಕಾಲೇಜುಗಳನ್ನು ಹೊಂದಿ ದೇಶದಲ್ಲೇ ಅತ್ಯಧಿಕ ವೈದ್ಯಕೀಯ ಕಾಲೇಜುಗಳಿದ್ದು ವರ್ಷಕ್ಕೆ 350 ವೈದ್ಯರು ಹೊರ ಬಂದರೂ ಗ್ರಾಮೀಣ ಪ್ರದೇಶದ ಸರ್ಕಾರಿ ಆಸ್ಪತ್ರೆಗಳಿಗೆ ವೈದ್ಯರ ಕೊರತೆ ವರ್ಷಂಪ್ರತಿ ಮುಂದುವರೆದಿದೆ. ವೈದ್ಯ ವಿದ್ಯಾರ್ಥಿ ವೈದ್ಯನಾಗಿ ಹೊರಬರಲು ಸರ್ಕಾರ 3 ಲಕ್ಷದ 80 ಸಾವಿರ ಹಣ ಖರ್ಚು ಮಾಡಿದರೂ ಹಳ್ಳಿಗಾಡಿನ ಜನತೆ ವೈದ್ಯರ ಸೇವೆಯಿಂದ ವಂಚಿತರಾಗುತ್ತಿದ್ದಾರೆಂದ ಶ್ರೀರಾಮರೆಡ್ಡಿ ವೈದ್ಯಕೀಯ ಪ್ರವೇಶ ಪಡೆಯುವ ಪ್ರತಿ ವಿದ್ಯಾರ್ಥಿಯಿಂದಲೂ ಕನಿಷ್ಟ ಮೂರು ವರ್ಷಗಳ ಕಾಲ ಗ್ರಾಮಾಂತರ ಆಸ್ಪತ್ರೆಗಳಲ್ಲಿ ಸೇವೆ ಸಲ್ಲಿಸುತ್ತೇವೆಂಬ ಕಡ್ಡಾಯದೊಂದಿಗೆ ಪ್ರವೇಶ ನೀಡಬೇಕೆಂಬ ಸಲಹೆಯನ್ನು ಮತ್ತೊಮ್ಮೆ ಸರ್ಕಾರಕ್ಕೆ ನೀಡಿದರು.

ಸರ್ಕಾರ ಗ್ರಾಮಾಂತರ ಆಸ್ಪತ್ರೆಗಳಿಗೆ ವೈದ್ಯರ ನೇಮಕದ ಅಧಿಕಾರವನ್ನು ಆಯಾ ಜಿಲ್ಲಾಧಿಕಾರಿಗಳಿಗೆ ನೀಡಿದ್ದೇವೆ. ಇದರಿಂದ ಎಲ್ಲಾ ಸರಿಹೋಗುತ್ತದೆಂಬ ಉತ್ತರ ನೀಡಿದೆ. ಆದರೆ ಜಿಲ್ಲಾಧಿಕಾರಿ ವೈದ್ಯರನ್ನು ನೇಮಕ ಮಾಡಿದರೂ ಕೆಲಸದ ಆದೇಶ ಪಡೆಯುತ್ತಿಲ್ಲ, ಉದಾಹರಣೆ ಕೋಲಾರದಲ್ಲಿ 24 ವೈದ್ಯರನ್ನು ನೇಮಕ ಮಾಡಿದರೆ 3 ಜನ ಮಾತ್ರ ಡ್ಯೂಟಿ ರಿಪೋರ್ಟ್ ಮಾಡಿಕೊಂಡಿದ್ದಾರೆ ಕಾರಣ ಸರ್ಕಾರ ಕೊಡುವ ಸಂಬಳಕ್ಕಿಂತ ಖಾಸಗಿ ಆಸ್ಪತ್ರೆಗಳಲ್ಲಿ ಹೆಚ್ಚಿನ ಸಂಬಳ ಸಿಗುತ್ತದೆ. ಅವರ ಮಕ್ಕಳಿಗೆ ಇಂಗ್ಲೀಷ್ ಶಾಲೆಗಳು ನಗರಗಳಲ್ಲಿ ಇದೆ ಎಂಬ ಕಾರಣವಾಗಿದೆ. ಖಾಸಗಿ ಆರೋಗ್ಯ ಸಂಸ್ಥೆಗಳಿಗೆ ನಾವು ಸೌಲಭ್ಯ ಒದಗಿಸುತ್ತೇವೆ (ಉದಾ: ಮಲ್ಯಾ ಆಸ್ಪತ್ರೆಗೆ ವಿರೋಧ ಲೆಕ್ಕಿಸದೆ ನಿಲ್ದಾಣದ ಅವಕಾಶ ಕಲ್ಪಿಸಿದ್ದು) ಸರ್ಕಾರಿ ಆಸ್ಪತ್ರೆಗಳ ಸುಧಾರಣೆಗೆ ಯಾವ ಗಮನ ಹರಿಸದಿರುವುದು ಸರ್ಕಾರದ ನೋಟವನ್ನು ಪ್ರತಿಬಿಂಬಿಸುತ್ತದೆ ಎಂದ ಸಿಪಿಐ(ಎಂ) ಶಾಸಕರು ಖಾಸಗಿ ನರ್ಸಿಂಗ್ ಹೋಂಗಳಿಗೆ ಜ್ವರವೆಂದು ಹೋದರೂ ಸಾವಿರಾರು ರೂ ಬಿಲ್ಲು ಪಾವತಿಸಬೇಕಾಗಿದೆ. ಇದು ರಾಜ್ಯದ ಬಹುತೇಕ ಜನಸಾಮಾನ್ಯರಿಗೆ ಸಾಧ್ಯವಿಲ್ಲದಾಗಿದೆ ಎಂದರು. ಇಂದು ನರ್ಸಿಂಗ್ ಹೋಂಗಳೆಂದರೆ ರೋಗಿಗಳ 'ಸುಲಿಗೆ ಯಂತ್ರ'ಗಳಂತೆ ಸುಲಿಯುತೊಡಗಿವೆ ಯಾದ್ದರಿಂದ ನರ್ಸಿಂಗ್ ಹೋಂ ಮತ್ತು ಖಾಸಗಿ ಮೆಡಿಕಲ್ ಕಾಲೇಜುಗಳನ್ನು ತೆರಿಗೆ ವ್ಯಾಪ್ತಿಗೆ ತಂದು ಗೋಧಿ, ಸಕ್ಕರೆ ಮೇಲೆ ತೆರಿಗೆ ಹಾಕಬಾರದೆಂದು ಶ್ರೀರಾಮರೆಡ್ಡಿ ಸರ್ಕಾರವನ್ನು ಒತ್ತಾಯಿಸಿದರು.

**ಮಾನವೀಯತೆ ಸೇವೆ:**

ವೈದ್ಯಕೀಯ ಸೇವೆ ಮಾನವೀಯತೆ ಸೇವೆ, ಮಹನೀಯರ ಸೇವೆ. ಆದರೆ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರಿಲ್ಲ, ನರ್ಸ್‌ಗಳಿಲ್ಲ. ಮೊದಲನೆಯದಾಗಿ ಔಷಧಿಗಳಿಲ್ಲ. ಇನ್ನು ಮಾನವೀಯತೆ ಸೇವೆ ಎಲ್ಲಿಂದ ಎಂದ ಶಾಸಕರು ತಾಲೂಕು ಕೇಂದ್ರದ ಆಸ್ಪತ್ರೆ ಇರಲಿ ಜಿಲ್ಲಾ ಕೇಂದ್ರದ ಆಸ್ಪತ್ರೆಗಳ ಶೌಚಾಲಯಗಳ ಸ್ಥಿತಿ ವಾಕರಿಕೆ ತರುವಂತದ್ದಾಗಿದೆ. ಅಧಿಕಾರಿಗಳು, ಮಂತ್ರಿಗಳು ಅಲ್ಲಿಗೆ ಭೇಟಿ ನೀಡುವುದು ಒಳಿತು. ಯಾಕೆಂದರೆ ಸರ್ಕಾರಿ ಪ್ರಮುಖ ಆಸ್ಪತ್ರೆಗಳನ್ನು ಅತ್ಯಾಧುನಿಕ ಸಲಕರಣೆ ಗಳಿಂದ ಉನ್ನತ ದರ್ಜೆಗೆ ಏರಿಸುವ ಯತ್ನ ಯಶಸ್ವಿಯಾಗಬೇಕಾದರೆ ಕನಿಷ್ಟ ಸೌಲಭ್ಯಗಳ ಕೊರತೆ ನೀಗಬೇಕಾಗಿದೆ ಎಂದ ಶ್ರೀರಾಮರೆಡ್ಡಿ ಹಾವು ಕಡಿದರೆ ಕೆಲವೇ ಆಸ್ಪತ್ರೆಗಳಿಗೆ ಹೋಗಬೇಕಾಗಿದೆ. ಎಲ್ಲಾ ಆಸ್ಪತ್ರೆಗಳಿಗೂ ಈ ಔಷಧಿಯನ್ನು ಪೂರೈಸಬೇಕೆಂದು ಸರ್ಕಾರವನ್ನು ಆಗ್ರಹಿಸಿದರು.

ಪ್ರತಿಯೊಬ್ಬ ಮನುಷ್ಯನಿಗೂ ಆರೋಗ್ಯ ಎಂಬ ಘೋಷಣೆಯಲ್ಲಿ ನಿಜವಾದ ಪ್ರಾಮಾಣಿಕ ಕಾಳಜಿ ಸರ್ಕಾರಕ್ಕಿದ್ದರೆ ಈಗಲಾದರೂ ಒಂದು ಸಮಗ್ರ ಆರೋಗ್ಯ ನೀತಿಯ ಮುಖಾಂತರ ಕರ್ನಾಟಕದ ಜನಸಾಮಾನ್ಯರಿಗೆ, ಕೆಳಸ್ತರದ ಜನತೆಗೆ ಆರೋಗ್ಯ ಕಲ್ಪಿಸುವ ಯತ್ನ ಮಾಡುವಂತೆ ಸರ್ಕಾರವನ್ನು ಒತ್ತಾಯಿಸಿದರು.

**ಇಂದು ಕೃಷಿಯ ರಕ್ಷಣೆ ಅತ್ಯಾವಶ್ಯಕ**

ರೈತ ಬೆಳೆ ಬೆಳೆದು ಆತ್ಮಹತ್ಯೆಗೆ ಸರಿದಿರುವುದು ಒಂದೆಡೆಯಾದರೆ ಕರ್ನಾಟಕ ರಾಜ್ಯ ಮುಂದಿನ ಎರಡು ವರ್ಷಗಳಲ್ಲಿ 50 ಲಕ್ಷ ಟನ್ ಆಹಾರ ದಾನ್ಯಗಳ ಕೊರತೆ ಎದುರಿಸಬೇಕಾಗಿದೆ. ಇಂತಹ ಸಂಕಷ್ಟದಿಂದ ಪಾರಾಗಬೇಕಾದರೆ ಸರ್ಕಾರ ತುರ್ತಾಗಿ ರೈತರ ರಕ್ಷಣೆಗೆ ನಿಲ್ಲುವುದು ಅತ್ಯವಶ್ಯಕವಾಗಿದೆ ಎಂದು ಶ್ರೀರಾಮರೆಡ್ಡಿ ಸದನದಲ್ಲಿ ಎಚ್ಚರಿಸಿದರು.

ರೈತರಿಗೆ ಅವಶ್ಯಕವಾದ ಉತ್ತಮ ಬೀಜ, ಗೊಬ್ಬರ, ಕ್ರಿಮಿನಾಶಕ ಔಷದಿ ಮುಂತಾದವುಗಳ ಹೊಣೆ ಗ್ಯಾಟ್ ಒಪ್ಪಂದದ ನಂತರ ಬಹುರಾಷ್ಟ್ರೀಯ ಕಂಪನಿಗಳ ಕೈ ಸೇರಿದ್ದು, ವಿಶ್ವ ವ್ಯಾಪಾರ ಸಂಘಟನೆಯು ಏಕರೂಪದ ಬೆಳೆ ಬೆಳೆಯುವಂತೆ ರೈತರ ಮೇಲೆ ಒತ್ತಡ ಹೇರತೊಡಗಿರುವ ಪರಿಣಾಮ "ದೇಶದ ಬೆನ್ನೆಲುಬಾದ" ರೈತರ ಬೆನ್ನು ಮೂಳೆ ಮುರಿದಿದ್ದು ಆತ್ಮಹತ್ಯೆಯಂತಹ ಹೇಯ ಕೃತ್ಯದತ್ತ ಸರಿದಿರುವುದೆಂದ ಶ್ರೀ ರಾಮರೆಡ್ಡಿ, ಇದೇ ಮೇ 18ರಂದು ಭಾರತ ಸರ್ಕಾರ 'ವಿಶ್ವ ವಾಣಿಜ್ಯ ಸಂಸ್ಥೆಯ ಪುನರ್ ಒಪ್ಪಂದ'ಕ್ಕೆ ಸಹಿ ಮಾಡಿರುವುದು ಆತಂಕದ ವಿಷಯವೆಂದು ಕಳವಳ ವ್ಯಕ್ತಪಡಿಸಿದರು.

ಪ್ರಸ್ತುತ 1997-98ನೇ ಸಾಲಿನಲ್ಲಿ ರಾಜ್ಯದಲ್ಲಿ ಆಹಾರ ಉತ್ಪಾದನೆ 87 ಲಕ್ಷ ಟನ್ ಆಗಿದೆ. 2000 ಇಸ್ವಿಯೊಳಗೆ ರಾಜ್ಯದ ಪ್ರತಿಯೊಬ್ಬ ಪ್ರಜೆಗೂ ಎರಡೊತ್ತಿನ ಊಟ ಸಿಗಬೇಕಾದರೆ 148 ಲಕ್ಷ ಟನ್ ಆಹಾರ ದಾನ್ಯ ಉತ್ಪಾದನೆಯಾಗಬೇಕಾಗಿದೆ. ಇನ್ನು ಎರಡು ವರ್ಷದಲ್ಲಿ 51 ಲಕ್ಷ ಟನ್ ಆಹಾರ ಉತ್ಪಾದನೆಗೆ ಏನು ಕ್ರಮ ಕೈಗೊಂಡಿದ್ದೀರಿ ಎಂಬುವುದನ್ನು ರಾಜ್ಯಕ್ಕೆ ವಿವರಿಸಬೇಕೆಂದು ಶಾಸಕ ಶ್ರೀರಾಮರೆಡ್ಡಿ ಆಗ್ರಹಿಸಿದರು.

ವಿಶ್ವ ವ್ಯಾಪಾರ ಸಂಸ್ಥೆಗೆ ದೇಶದ ಕೃಷಿಯನ್ನು ಒಪ್ಪಿಸಿರುವದರಿಂದ ಕೃಷಿ ಕ್ಷೇತ್ರಕ್ಕೆ ಧಕ್ಕೆ ಬಂದು ಇಡೀ ಕೃಷಿಕ ಸಮುದಾಯವೇ ಸಂಕಷ್ಟದಲ್ಲಿ ಸಿಲುಕಲಿದೆ. ಈಗಾಗಲೇ 370 ಸರಕುಗಳ ಮೇಲೆ ಆಮದು-ರಫ್ತು ನಿರ್ಬಂಧ ತೆಗೆದು ಹಾಕಿ ದೇಶದ ಆಹಾರ ದಾನ್ಯ ಹಾಗೂ ಮೂಲ ಅವಶ್ಯಕ ವಸ್ತುಗಳ ಕೊರತೆ ಅನುಭವಿಸುವತ್ತ ಸಾಗುತ್ತಿದೆ. ಬಹು ರಾಷ್ಟ್ರೀಯ ಕಂಪನಿಗಳಾದ ಕಾರ್ಗಿಲ್-ಸನ್‌ಫ್ಲವರ್ ದೇಶದ ಕೃಷಿಯಲ್ಲಿ ತಮ್ಮ ಹಿಡಿತ ಸಾಧಿಸ ತೊಡಗಿವೆ ಎಂದರು.

ಈ ಎಲ್ಲಾ ಸಂಕಷ್ಟದಿಂದ ರೈತ ಮೇಲೆ ಬರಬೇಕಾದರೆ ರೈತರ ರಕ್ಷಣೆ ಹಾಗೂ ಅವರ ಬೆಳೆಗಳ ರಕ್ಷಣೆಗೆ ಸರ್ಕಾರ ತುರ್ತಾಗಿ ಆಗಮಿಸಬೇಕಾಗಿದೆ. ಭಾರತ ಕೃಷಿಯಾಧಾರಿತ ದೇಶವಾಗಿದ್ದರೂ ಕೈಗಾರಿಕಾ ವಲಯಕ್ಕೆ ನೀಡುವಷ್ಟು ಆದ್ಯತೆ, ರಕ್ಷಣೆ ಕೃಷಿ ವಲಯಕ್ಕೆ ಇಲ್ಲವಾಗಿದೆ. ಕೈಗಾರಿಕೆಗಳಿಗಾದರೆ ಅವರ ಉತ್ಪನ್ನಗಳಿಗೆ ರಕ್ಷಣೆ, ಮಾರುಕಟ್ಟೆ, ಕಾರ್ಮಿಕರಿಂದ ರಕ್ಷಣೆ, ಬೆಂಕಿ ಬಿದ್ದರೆ ರಕ್ಷಣೆ, ದಾಸ್ತಾನಿನಲ್ಲಿ ಸರಕು ಉಳಿದರೆ ಸಹಾಯ ಧನ, ರಫ್ತಿಗೆ ರಕ್ಷಣೆ ಹಾಗೂ ಸಹಾಯಧನ. ಆದರೆ ರೈತರ ಭೂಮಿಗಾಗಲಿ, ಅವರೂಡಿದ ಬಂಡವಾಳ, ಬಿತ್ತಿದ ಬೀಜ, ಬೆಳೆದ ಬೆಳೆ ಯಾವುದಕ್ಕೂ ರಕ್ಷಣೆ ಇಲ್ಲವಾಗಿದೆ. ಆದಕಾರಣ ರೈತ ಸ್ವಾಭಿಮಾನಿಯಾಗಿರಲು, ರಾಜ್ಯ ಆಹಾರ ಸ್ವಾವಲಂಬನೆ ಸಾಧಿಸಬೇಕಾದರೆ ಕೃಷಿ ರಂಗವನ್ನು ರಕ್ಷಿಸುವ ಹೊಣೆಯನ್ನು ಸರ್ಕಾರ ಹೊರಬೇಕಾಗಿದೆ.

ರಾಜ್ಯ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಬೇಕಾದರೆ ಕೇವಲ ದೊಡ್ಡ ನೀರಾವರಿ ಯೋಜನೆಗಳಿಂದಲೇ ಸಾಧ್ಯವೆಂಬುವುದಿಲ್ಲ. ಶೇ. 60% ವ್ಯವಸಾಯ ಸಣ್ಣ ನೀರಾವರಿಯಿಂದಲೇ ಸಾಧ್ಯವಾಗಿದೆ. ಆದ ಕಾರಣ ಕೆರೆಗಳು, ಕೊಳವೆ ಬಾವಿ, ಬಾವಿ, ಸಣ್ಣ ಅಣೆಕಟ್ಟುಗಳನ್ನು ಅಭಿವೃದ್ಧಿ ಪಡಿಸುವುದರ ಜೊತೆಗೆ ಉತ್ತಮ ಬೀಜ, ಗೊಬ್ಬರ ಔಷದಿ ಒದಗಿಸುವಲ್ಲಿ ಸರ್ಕಾರ ವಿಫಲವಾಗಿದ್ದು ಒಂದು ಸಮಗ್ರ ಕೃಷಿ ನೀತಿಯ ಮುಖಾಂತರ ರೈತರ ರಕ್ಷಣೆ ಅಗತ್ಯವೆಂದು ಶ್ರೀರಾಮರೆಡ್ಡಿ ತಿಳಿಸಿದರು.

ವರದಿ: **ಜಯರಾಮು.ಎಂ**

# ಪರಮಾಣು ಯುದ್ಧದ ಭೀಕರತೆಯನ್ನು ಮರೆಯಲು ಸಾಧ್ಯವಿಲ್ಲ

**ಪರಮಾಣು ಶಸ್ತ್ರಾಸ್ತ್ರ ಸಮಾರ್ಥ್ಯದ ಬಗ್ಗೆ ಪ್ರತಿಯೊಂದು ದೇಶವೂ ಹೆಮ್ಮೆ ಪಡುವಂತಹ ವಿಶ್ವದಲ್ಲಿ ಸಂತೋಷ, ಭದ್ರತೆ ಸಾಧ್ಯವಿಲ್ಲ ಎನ್ನುತ್ತಾರೆ ವಿಜ್ಞಾನಿಗಳು.**



"ಭಾರತ ಅಂತರ್ರಾಷ್ಟ್ರೀಯ ಮರ್ಡರ್ ಕಂಪನಿ ಸೇರಿತು!"

ಎಡಪಕ್ಷಗಳನ್ನು ಬಿಟ್ಟು ಬೇರೆಲ್ಲರೂ ಪರಮಾಣು ಪರೀಕ್ಷಣೆಯನ್ನು ಸ್ವಾಗತಿಸಿದ್ದಾರೆ. ವಿಜ್ಞಾನಿಗಳಂತೂ ಕೊನೆಗೂ ತಮಗೆ ಮಾನ್ಯತೆ ಸಿಕ್ಕಿತು ಎಂದು ಹೆಮ್ಮೆ ಪಡುತ್ತಿದ್ದಾರೆ ಎಂದೆಲ್ಲಾ ಚಿತ್ರಿಸಲು ಬಿ.ಜೆ.ಪಿ. ನೇತೃತ್ವದ ಸರಕಾರದ ಮುಷ್ಠಿಯಲ್ಲಿರುವ ಮಾಧ್ಯಮಗಳು ಹಾಗೂ ಇತರ ಕೆಲವರು ಶತಪ್ರಯತ್ನ ಮಾಡುತ್ತಿದ್ದಾರೆ.

ಆದರೆ ಮೇ 19ರಂದು 75ಕ್ಕೂ ಹೆಚ್ಚು ಭಾರತೀಯ ವಿಜ್ಞಾನಿಗಳು ನೀಡಿದ ಒಂದು ಹೇಳಿಕೆ ಇದು ಕೇವಲ ಅಪಪ್ರಚಾರವೆಂದು ಸಾಬೀತು ಮಾಡಿದೆ. ಅಷ್ಟೇ ಅಲ್ಲ, ಈ ವೈಜ್ಞಾನಿಕ ಸಾಧನೆಯ ಮಹತ್ವವನ್ನು ಅತಿಶಯಗೊಳಿಸಲಾಗಿದೆ ಎಂದೂ ವಿಜ್ಞಾನಿಗಳೇ ಹೇಳುವಂತಾಗಿದೆ. ವಿದೇಶಗಳಲ್ಲಿಯೂ ಇರುವ ಭಾರತೀಯ ವಿಜ್ಞಾನಿಗಳು ನೀಡಿರುವ ಈ ಹೇಳಿಕೆಯ ಅನುವಾದವನ್ನು ಕೊಡುತ್ತಿದ್ದೇವೆ.

"ಕಳೆದ ಕೆಲವು ದಿನಗಳಲ್ಲಿ ಭಾರತ ಐದು ಪರಮಾಣು ಪರೀಕ್ಷಣೆಗಳನ್ನು ನಡೆಸಿದೆ. ಅದರಲ್ಲಿ ಒಂದು ತಾಪ-ಪರಮಾಣು ಸಾಧನದ ಪರೀಕ್ಷಣೆಯೂ ಸೇರಿದೆ. ನಮ್ಮ ರಾಷ್ಟ್ರೀಯ ಭದ್ರತೆಯ ಹೆಚ್ಚಿನ ಸಾಮರಿಕ ಅಗತ್ಯದಿಂದಾಗಿ ಈ ಪರೀಕ್ಷಣೆಗಳನ್ನು ಮಾಡಲಾಯಿತು ಎಂದು ಹೇಳಲಾಗುತ್ತಿದೆ. ಇದೊಂದು ಪ್ರಮುಖ ವೈಜ್ಞಾನಿಕ ಮತ್ತು ತಾಂತ್ರಿಕ ಸಾಧನೆ ಎಂದೂ ಹೇಳಲಾಗುತ್ತಿದೆ.

ಈ ಪರಮಾಣು ಪರೀಕ್ಷಣೆಗಳನ್ನು ಮಾಡಿದಾಗ ಹೆಚ್ಚಿನ ವೈಜ್ಞಾನಿಕ ಸಾಧನೆಯ ಪರಿಮಾಣವನ್ನು ಅತಿಶಯಗೊಳಿಸುವುದು ಸರಿಯಲ್ಲ. ಪರಮಾಣು ಶಸ್ತ್ರಾಸ್ತ್ರ ತಂತ್ರಜ್ಞಾನದಲ್ಲಿ ಸಾಧನೆಯ ಪ್ರಭೆಯ ಬಹುಪಾಲು ಈ ತಂತ್ರಜ್ಞಾನವನ್ನು ಪಡೆಯುವ ಹಾಗೂ ಅದರಲ್ಲಿ ಪ್ರಾವೀಣ್ಯತೆ ಪಡೆಯುವ ಕೆಲಸ ಬಹಳ ಗುಟ್ಟಾಗಿ ನಡೆಯುವುದರಿಂದ ಎಂಬುದನ್ನು ನಾವು ನೆನಪಿಸ ಬಯಸುತ್ತೇವೆ. ಸುರಕ್ಷಿತ ಪರಮಾಣು ಸ್ಥಾವರಗಳನ್ನು ರೂಪಿಸಿ, ಸ್ಫೋಟಿಸಿ, ಯಶಸ್ವಿಯಾಗಿ ನಡೆಸುವ ತಾಂತ್ರಿಕ ಸವಾಲುಗಳು ಇಷ್ಟೇ ದೊಡ್ಡದಾದ, ಕೆಲವೊಮ್ಮೆ ಇದಕ್ಕಿಂತಲೂ ದೊಡ್ಡ ಸವಾಲುಗಳು. ಇದನ್ನು ನಾವು ಈಗಾಗಲೇ ಬಹಳ ದಿನಗಳಿಂದ ಮಾಡಿತೋರಿಸುತ್ತಿದ್ದೇವೆ. ಈ ಬಗ್ಗೆ ನಾವು ಸಹಜವಾಗಿಯೇ ಹೆಮ್ಮೆ ಪಟ್ಟುಕೊಳ್ಳುತ್ತೇವೆ.

ಈ ಪರೀಕ್ಷಣೆಗಳು ದಕ್ಷಿಣ ಏಶ್ಯಾ ಪ್ರದೇಶದಲ್ಲಿ ವಾತವರಣವನ್ನು ಕದಡಿಸುವುದು ಖಂಡಿತ. ಈ ಮೂಲಕ ಈ ಪ್ರದೇಶದಲ್ಲಿ ಒಂದು ಪರಮಾಣು ಶಸ್ತ್ರಾಸ್ತ್ರ ಪೈಪೋಟಿ ಸಿಡಿಯುವಂತಾಗಿ ಈಗಾಗಲೇ ಇರುವ ಬಿಗು ಪರಿಸ್ಥಿತಿಯನ್ನು ಇನ್ನಷ್ಟು ಉಲ್ಬಣಗೊಳಿಸಿ ಈ ಪ್ರದೇಶದ ಜನಗಳ ಹಾಗೂ ದೇಶಗಳ ನಡುವೆ ಶಾಂತಿಯುತ ಸಹಬಾಳ್ವೆ ಹಾಗೂ ಸಹಕಾರವನ್ನು ಸಾಧಿಸುವುದು ಮತ್ತಷ್ಟು ಕಷ್ಟಕರವಾಗಿದೆ. ಈ ಪರೀಕ್ಷಣೆಗಳು ನಿಶ್ಯಸ್ತ್ರೀಕರಣಕ್ಕೆ ನೆರವಾಗುತ್ತವೆ ಎನ್ನುವ ಮೂಲಕ ಭಾರತ ಸರಕಾರವೂ ಪರಮಾಣು ಶಸ್ತ್ರಾಸ್ತ್ರ ಹೊಂದಿರುವ ಶಕ್ತಿಗಳ ಸಿನಿಕ ಭಾಷೆಯನ್ನೇ ಅಂಗೀಕರಿಸಿದೆ.

ಈ ಪರೀಕ್ಷಣೆಗಳು ಬಹಳ ವರ್ಷಗಳಿಂದ ಪರಮಾಣು ನಿಶ್ಯಸ್ತ್ರೀಕರಣದ ಬಗ್ಗೆ ನಿರಂತರವಾಗಿ ತಳೆದುಕೊಂಡು ಬಂದ ಒಂದು ನಿಲುವನ್ನು ಬದಲಿಸಿ ಬಿಟ್ಟಿದೆ. ನಮ್ಮಲ್ಲಿ ಅಗತ್ಯ ತಂತ್ರಜ್ಞಾನವಿದೆ ಎಂದು ಸ್ಪಷ್ಟಪಡಿಸುತ್ತಲೇ ಭಾರತ ಈ ಉಪಖಂಡದಲ್ಲಿ ಶಸ್ತ್ರಾಸ್ತ್ರ ಪೈಪೋಟಿ ನಿರ್ಮಾಣವಾಗದಿರಲಿ ಎಂದು ಪರಮಾಣು ಶಸ್ತ್ರಾಸ್ತ್ರಗಳನ್ನು ಹೊಂದುವತ್ತ ಕ್ರಮಗಳನ್ನು ಕೈಗೊಂಡಿರಲಿಲ್ಲ. ಅದೇ ವೇಳೆಗೆ ಪ್ರಸರಣ ನಿಷೇಧ ಸಂಧಿ(ಎನ್.ಪಿ.ಟಿ.) ಹಾಗೂ ಸಮಗ್ರ ಪರೀಕ್ಷಾ ನಿಷೇಧ ಸಂಧಿ (ಸಿ.ಟಿ.ಬಿ.ಟಿ.)ಗಳು ಪಕ್ಷಪಾತ ಸ್ವರೂಪದ್ದಾದ್ದರಿಂದ ಅದಕ್ಕೆ ಸಹಿ ಮಾಡುವುದಿಲ್ಲ ಎಂದೂ ಭಾರತ ದೃಢ ನಿಲುವು ತಳೆದಿತ್ತು. ಈಗ ಸರಕಾರ ಮತ್ತು ಮಾಧ್ಯಮಗಳಲ್ಲಿನ ಕೆಲವು ವಿಭಾಗಗಳು ನಾವು ಸಿ.ಟಿ.ಬಿ.ಟಿ.ಯನ್ನು ಒಪ್ಪಿ ಸಹಿ ಮಾಡಬೇಕು ಎಂದು ಹೇಳುತ್ತಿರುವುದು ವಿಚಿತ್ರವೇ ಸರಿ!

ಒಂದು ರಾಷ್ಟ್ರೀಯ ಚರ್ಚೆಯಿಲ್ಲದೆ ಅತ್ಯಂತ ವೆಚ್ಚದ ಶಸ್ತ್ರಾಸ್ತ್ರ ಕಾರ್ಯಕ್ರಮಕ್ಕೆ ಬದ್ಧಗೊಳಿಸಲಾಗಿದೆ. ರಾಷ್ಟ್ರೀಯ ಭದ್ರತೆಗೆ ಬಂದಿರುವ ಯಾವ ತಕ್ಷಣದ ಬೆದರಿಕೆಯಿಂದಾಗಿ, ಈ ಕ್ರಮ 'ಅನಿವಾರ್ಯ'ವಾಯಿತು ಎಂದು ನಮಗೆ ಕಾಣುತ್ತಿಲ್ಲ. ಅದೂ ವಿಶೇಷವಾಗಿ ಶಿಕ್ಷಣ, ಆರೋಗ್ಯ, ಮೂಲರಚನೆ ಮತ್ತು ಕೈಗಾರಿಕಾ ಬೆಳವಣಿಗೆಯ ಮೂಲಕ ಜನಗಳ ತುರ್ತು ಅಗತ್ಯಗಳನ್ನು ಈಡೇರಿಸಬೇಕಾಗಿದ್ದಾಗ ಇಂತಹ ಒತ್ತಡ ಏಕೆ ಬಂತೋ ಕಾಣದು. ಬಿ.ಜೆ.ಪಿ. ಸರಕಾರ ಅಧಿಕಾರಕ್ಕೆ ಬಂದಾಗ ರಾಷ್ಟ್ರೀಯ ಭದ್ರತೆಯ ಪ್ರಶ್ನೆಯ ಮೇಲೆ ಒಂದು ಚರ್ಚೆ ನಡೆಸುವುದಾಗಿ ಭರವಸೆ ನೀಡಿತ್ತು. ಆದರೆ ಅದು ಲವಲೇಶವೂ ಚರ್ಚೆಯಿಲ್ಲದೆ ಒಂದು ಸಂಪೂರ್ಣ ತಿರುಗು-ಮುರುಗುಗೊಳಿಸುವ, ಒಳ ಪರಿಣಾಮಗಳನ್ನುಂಟು ಮಾಡುವ ಕ್ರಮವನ್ನು ಕೈಗೊಂಡಿತು.

ಪರಮಾಣು ಯುದ್ಧವೆಂಬ ಭಯಾನಕ ಕತೆಯನ್ನು ನಾವಿಲ್ಲಿ ಒತ್ತಿ ಒತ್ತಿ ನೆನಪಿಸ ಬಯಸುತ್ತೇವೆ. ಪರಮಾಣು ಶಸ್ತ್ರಾಸ್ತ್ರಗಳನ್ನು ಹೊಂದುವುದನ್ನು ನಿರಂತರವಾಗಿ ವಿರೋಧಿಸಿಕೊಂಡು ಬಂದ ಪ್ರಖ್ಯಾತ ವಿಜ್ಞಾನಿಗಳ ಪರಂಪರೆಯನ್ನು ನಾವು ದೃಢವಾಗಿ ಪಾಲಿಸುತ್ತೇವೆ. ವಿಜ್ಞಾನ ತಂತ್ರಜ್ಞಾನದ ಸಾಧನೆಗಳಲ್ಲಿ ಯಾವುದೇ ಹೆಮ್ಮೆಯ ಭಾವನೆಯಿದ್ದರೂ ಅಥವಾ ಯಾವುದೇ ಸಾಮರಿಕ ಲೆಕ್ಕಚಾರಗಳನ್ನು ನಾವು ಮಾಡಿದರೂ ಪರಮಾಣು ಯುದ್ಧ ಭೀಕರತೆಯನ್ನು ಮರೆಯಲು ಸಾಧ್ಯವಿಲ್ಲ. ಹಿರೋಶಿಮಾದ ಬಾಂಬ್ ಧಾಳಿ ಸಾಮರಿಕ "ಒತ್ತಾಯ"ಗಳಿಂದಾಗಿ ನಡೆಯಿತು ಎಂಬ ವಾದವನ್ನೂ ಈಗಲೂ ಕೇಳುತ್ತಿದ್ದೇವೆ ತಾನೆ? 1991ರ ಕೊಲ್ಲಿಯುದ್ಧವನ್ನು ಅಮೇರಿಕಾದ ಮಾಧ್ಯಮ ತಾಂತ್ರಿಕ ಪ್ರಾಬಲ್ಯತೆಯ ಪ್ರದರ್ಶನವನ್ನಾಗಿ ಮಾಡಿದ್ದು ನಮ್ಮಲ್ಲಿ ಹಲವರಿಗೆ ಜಿಗುಪ್ಸೆಯುಂಟು ಮಾಡಿತ್ತು ತಾನೇ? ಇಷ್ಟೇ ಅಲ್ಲ, ಪ್ರತಿಯೊಂದು ದೇಶವೂ ಪರಮಾಣು ಶಸ್ತ್ರಾಸ್ತ್ರದ ಸಮಾರ್ಥ್ಯದ ಬಗ್ಗೆ ಹೆಮ್ಮೆ ಪಡಬಹುದು, ಅದು ಇತರ ದೇಶಗಳ ಆಕ್ರಮಣವನ್ನು ತಡೆಯುವ ಸಾಧನವೆಂದೂ ನಂಬಿರುವ ಒಂದು ವಿಶ್ವದಲ್ಲಿ ನಾವು ಸಂತೋಷವಾಗಿರಲು, ಸುಭದ್ರತೆಯ ಭಾವನೆಯಿಂದಿರಲು ಸಾಧ್ಯವೇ?

## ಸಮುದಾಯ ಖಂಡನೆ

## ವಿಜ್ಞಾನ, ವೈಚಾರಿಕತೆಯ ಬದ್ಧವೈರಿಗಳಿವರು ಪೋಖ್ರಾನ್‌ನಲ್ಲಿ 'ಶಕ್ತಿ ಪೀಠ' ರಚನೆ

ಇತ್ತೀಚಿಗೆ ಪೋಖ್ರಾನ್‌ನಲ್ಲಿ ನಡೆದ ಅಣುಅಸ್ತ್ರಗಳ ಪರೀಕ್ಷಣೆಗಳನ್ನು ಬಿ.ಜೆ.ಪಿ. ಮತ್ತು ಸಂಘ ಪರಿವಾರದವರು ತಮ್ಮ ಕೇಂದ್ರ ಸರ್ಕಾರದ ಸ್ವಂತ ಸಾಧನೆ ಎಂದು ಪರಿಗಣಿಸಿ, ತಮ್ಮ ಶಕ್ತಿ ಪ್ರದರ್ಶನವನ್ನು ಚಿರಸ್ಥಾಯಿಗೊಳಿಸಲು ಆ ಪ್ರದೇಶದಲ್ಲಿ ಹಿಂದೂ ಸಾಧು ಸಂತರ ನೆರವಿನಿಂದ ವಿಶ್ವಹಿಂದೂ ಪರಿಷತ್ 'ಶಕ್ತಿ ಪೀಠ' ರಚಿಸಲು ಪ್ರಯತ್ನಿಸುತ್ತಿರುವುದು. ಇದು ಫ್ಯಾಸಿಸ್ಟ್ ಪ್ರವೃತ್ತಿ ಎಂದು ಸಮುದಾಯ ಸಾಂಸ್ಕೃತಿಕ ಸಂಘಟನೆಯ ರಾಜ್ಯ ಸಮಿತಿ ತನ್ನ ಪತ್ರಿಕಾ ಪ್ರಕಟಣೆಯಲ್ಲಿ ತೀವ್ರವಾಗಿ ಖಂಡಿಸಿದೆ. ವಿಜ್ಞಾನ ಮತ್ತು ವೈಚಾರಿಕತೆಯ ಬದ್ಧ ವೈರಿಗಳಾದ ಸಂಘ ಪರಿವಾರದವರಿಂದ ಪೋಖ್ರಾನ್ ಪ್ರದೇಶವನ್ನು ದೂರವಿರಿಸಿ, ಅದನ್ನು ರಕ್ಷಣಾ ಇಲಾಖೆಗೆ ಒಪ್ಪಿಸಿ, ಅಲ್ಲಿ ಯಾವುದೇ ಧಾರ್ಮಿಕ ಸ್ಮಾರಕ ಸ್ಥಾಪಿಸದಂತೆ ಮಾಡಲು ಸಮುದಾಯ ಬಿ.ಜೆ.ಪಿ. ಸರಕಾರವನ್ನು ಒತ್ತಾಯಿಸಿದೆ. ಪೋಖ್ರಾನ್ ಅಣುಅಸ್ತ್ರಗಳ ಪರೀಕ್ಷಣೆ ಬಿ.ಜೆ.ಪಿ. ಮತ್ತು ಸಂಘ ಪರಿವಾರದ ಸಾಧನೆ ಆಗಿರದೆ, ಭಾರತದ ವಿಜ್ಞಾನಿಗಳ 25 ವರ್ಷಗಳ ದೀರ್ಘ ಕಾಲದ ಸಂಶೋಧನೆಗಳ ಪ್ರತಿಫಲವಾಗಿದೆ ಎಂದು ಸಮುದಾಯದ ವಕ್ತಾರರಾದ ಸಿ.ಕೆ. ಗುಂಡಣ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

1966ರಲ್ಲಿ ಕರ್ನಾಟಕದಾದ್ಯಂತ 60 ದಿನಗಳ ಕಾಲ ವಿಶ್ವ ಶಾಂತಿಗಾಗಿ ಮತ್ತು ಅಣು ಅಸ್ತ್ರಗಳ ನಾಶಕ್ಕಾಗಿ ಸಂದೇಶ ಹೊತ್ತ ಬೃಹತ್ ಗಾತ್ರದ ಬಣ್ಣದ ಚಿತ್ರದ ಪ್ರದರ್ಶನಗಳ ಮೂಲಕ ಸಾಂಸ್ಕೃತಿಕ ಜಾಥಾ ನಡೆಸಿ ಜನಜಾಗೃತಿ ಮೂಡಿಸಿದ ಸಮುದಾಯ, ಪೋಖ್ರಾನ್ ಅಣುಅಸ್ತ್ರಗಳ ಪರೀಕ್ಷಣೆಗಳಿಂದ ಸಂಭವಿಸಬಹುದಾದ ಭಾರತದ ಉಪಖಂಡದಲ್ಲಿ ಅಣುಅಸ್ತ್ರಗಳ ಪೈಪೋಟಿ, ಭಾರತದ ಮೇಲಿನ ಜಾಗತಿಕ ದಿಗ್ಬಂದನ, ನೆರೆಹೊರೆಯ ದೇಶಗಳೊಂದಿಗಿನ ಸಂಬಂಧಗಳಲ್ಲಿ ಬಿಕ್ಕಟ್ಟು ಮುಂತಾದ ಅಹಿತಕರ ಅಪಾಯಗಳ ಕುರಿತು ತೀವ್ರ ಚಿಂತಿತವಾಗಿದೆ. ಪಾಕಿಸ್ತಾನ ಮತ್ತು ಜನತಾ ಚೀನಾದೊಂದಿಗೆ ಭಾರತದ ಸ್ನೇಹಸಂಬಂಧ ಸತತ ಪರಿಶ್ರಮಗಳಿಂದ ಸುಧಾರಿಸುತ್ತಿರುವಾಗ, ಈ ಎರಡು ದೇಶಗಳ ವಿರುದ್ಧ ಯುದ್ಧ ಪ್ರೇರಿತ ಭಾವೋದ್ರೇಕವನ್ನು ದೇಶದಾದ್ಯಂತ ಜನರಲ್ಲಿ ಬಡಿದೆಬ್ಬಿಸುತ್ತಿರುವ ಸಂಘ ಪರಿವಾರದ ಫ್ಯಾಸಿಸ್ಟ್ ನೀತಿಯ ವಿರುದ್ಧ ಜನಾಂದೋಲನ ನಡೆಸಲು ಸಮುದಾಯ ಕರೆ ಕೊಟ್ಟಿದೆ. ಈ ಕುರಿತು ಈಗಾಗಲೇ ದೇಶದ ಪತ್ರಿಕೆಗಳು, ರಾಜನೀತಿ ತಜ್ಞರು, ಸಾಮೂಹಿಕ ಸಂಘಟನೆಗಳು, ಹಲವು ರಾಜಕೀಯ ಪಕ್ಷಗಳು, ಬುದ್ಧಿಜೀವಿಗಳು ಮುಖ್ಯವಾಗಿ ಖ್ಯಾತ ವಿಜ್ಞಾನಿಗಳು ತಮ್ಮ ಧ್ವನಿ ಎತ್ತಿರುವುದನ್ನು ಸಮುದಾಯ ಸ್ವಾಗತಿಸಿದೆ.

1992ರಲ್ಲಿ ಬಾಬ್ರಿ ಮಸೀದಿಯನ್ನು ಕೆಡವಿ ದೇಶದಾದ್ಯಂತ ಕೋಮುಗಲಭೆಗಳನ್ನು ಭುಗಿಲೆಬ್ಬಿಸಿದ ಸಂಘ ಪರಿವಾರದವರು ತಮ್ಮ ಸರಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದೊಡನೆ, ಮಸೀದಿ ಸ್ಥಳದಲ್ಲಿಯೇ ಮಂದಿರ ಕಟ್ಟಲು ರಾಜಾಸ್ತಾನ ಮತ್ತಿತರ ಪ್ರದೇಶಗಳಲ್ಲಿ ಕಲ್ಲು ಕಂಬಗಳ ಹಾಗೂ ಚಪ್ಪಡಿಗಳ ಕೆತ್ತನೆ ನಡೆಸುತ್ತಿರುವುದರ ವಿರುದ್ಧ ಸಮುದಾಯ ನೆನಪಿಸಿಕೊಟ್ಟು ಮಸೀದಿ ಸ್ಥಳದಲ್ಲಿ ಮಂದಿರ ಕಟ್ಟುವ ದುಸ್ಸಾಹಸವನ್ನು ತಡೆಯಲು ಸರ್ಕಾರವನ್ನು ಸಮುದಾಯ ಒತ್ತಾಯಿಸಿದೆ. ಇದೇ ಸಂದರ್ಭ, ಸಂಘ ಪರಿವಾರದವರು ಖ್ಯಾತ ಚಿತ್ರ ಕಲಾವಿದ ಎಂ.ಎಫ್. ಹುಸೇನರ ಕಲಾಕೃತಿಗಳನ್ನು ಧ್ವಂಸಗೊಳಿಸುದುದರ ಮತ್ತು ಅವರ ಮನೆಗೆ ನುಗ್ಗಿ ಆಸ್ತಿ ಪಾಸ್ತಿ ನಾಶಗೊಳಿಸುದುದರ ವಿರುದ್ಧ, ಪಾಕಿಸ್ತಾನದ ಖ್ಯಾತ ಗಾಯಕ ಗುಲಾಮ್ ಅಲಿ ಅವರ ಸಂಗೀತ ಕಛೇರಿ ನಡೆಯಗೊಡದಂತೆ ಮಾಡಿದುದರ ವಿರುದ್ಧ ಪ್ರತಿಕಾರವಾಗಿ ಪಾಕಿಸ್ತಾನದಲ್ಲಿ ಭಾರತದ ಖ್ಯಾತ ಚಿತ್ರ ನಟಿ ಮತ್ತು ರಾಜ್ಯ ಸಭಾ ಸದಸ್ಯೆ ಶಬಾನಾ ಆಜ್ಮಿ ಮತ್ತು ಖ್ಯಾತ ಚಿತ್ರನಟ ಫಾರುಕ್ ಶೇಖ್ ಇವರು ಬಡ ಮಕ್ಕಳ ಸಹಾಯ ನಿಧಿಗಾಗಿ ನಡೆಸಲು ಉದ್ದೇಶಿಸಿದ್ದ 'ತುಮಾರಿ ಅಮೃತ್' ಎಂಬ ನಾಟಕ ನಡೆಯಗೊಡದಂತೆ ಮಾಡಿದುದರ ವಿರುದ್ಧ ಸಮುದಾಯ ತನ್ನ ಪ್ರತಿಭಟನೆ ವ್ಯಕ್ತಪಡಿಸಿದೆ. ಭಾರತ ಮತ್ತು ಪಾಕಿಸ್ತಾನ ದೇಶಗಳ ನಡುವೆ ಸಾಂಸ್ಕೃತಿಕ ಸಂಬಂಧಗಳು ಯಾವುದೇ ಅಡೆತಡೆ ಇಲ್ಲದೆ ನಡೆಯುವಂತೆ ಉಭಯ ದೇಶಗಳು ಕಾನೂನು ಕ್ರಮ ಕೈಗೊಳ್ಳುವಂತೆ ಸಮುದಾಯ ಒತ್ತಾಯಿಸಿದೆ.

ಮುಂದಿನ ಮೂರು ತಿಂಗಳ ಕಾಲದಲ್ಲಿ, ಭಾರತ ಸ್ವಾತಂತ್ರದ ಸುವರ್ಣ ಉತ್ಸವದ ಅಂಗವಾಗಿ "ಶಾಂತಿ, ಸೌಹಾರ್ದ, ಸಮೃದ್ಧಿಗಾಗಿ ಸಾಂಸ್ಕೃತಿಕ ಆಂದೋಲನ" ನಡೆಸಲು ಸಮುದಾಯ ನಿರ್ಧರಿಸಿದೆ ಎಂದು ತಿಳಿಸಲಾಗಿದೆ.

## "ಇದು ರಾಷ್ಟ್ರೀಯ ಹಿತಕ್ಕಾಗಿ ಎಂಬುದನ್ನು ನಾವು ಒಪ್ಪುವುದಿಲ್ಲ"

### ಪರಮಾಣು ಪರೀಕ್ಷಣೆಗಳ ಬಗ್ಗೆ ಪ್ರಧಾನಿಗೆ ಮಹಿಳಾ ಸಂಘಟನೆಗಳ ಬಹಿರಂಗ ಪತ್ರ

"ಎಲ್ಲರೂ ಒಪ್ಪಿದ್ದ ಧೋರಣೆಗಳಲ್ಲಿ ತೀವ್ರ ಬದಲಾವಣೆ ಮಾಡಿರುವುದನ್ನು ಹಾಗೂ ಪರಮಾಣು ಶಸ್ತ್ರಾಸ್ತ್ರಗಳನ್ನು ಹೊಂದುವ ನಿಮ್ಮ ಕ್ರಮಗಳನ್ನು ಅವು ರಾಷ್ಟ್ರೀಯ ಹಿತಾಸಕ್ತಿಯ ಕ್ರಮಗಳು ಎಂಬುದನ್ನು ನಾವು ಒಪ್ಪುವುದಿಲ್ಲ. ಈ ಪ್ರದೇಶದಲ್ಲಿ ಶಾಂತಿ ಪ್ರಕ್ರಿಯೆಗೆ ನಾವು ಬದ್ಧರಾಗಿದ್ದೇವೆ."

ಇದು ಹಲವು ಮಹಿಳಾ ಸಂಘಟನೆಗಳು ಹಾಗೂ ಪ್ರತಿಷ್ಠಿತ ಮಹಿಳೆಯರು ಪ್ರಧಾನಮಂತ್ರಿಗಳಿಗೆ ಬರೆದ ಒಂದು ಬಹಿರಂಗ ಪತ್ರದ ಕೊನೆಯಲ್ಲಿನ ಒಕ್ಕಣಿಕೆ.

ಬಿ.ಜೆ.ಪಿ. ನೇತೃತ್ವದ ಸರಕಾರದ ಆಡಳಿತದ ಅಲ್ಪಾವಧಿಯಲ್ಲಿ ಭದ್ರತಾ ವಾತಾವರಣದಲ್ಲಿ ಅಂತಹ ಗಮನಾರ್ಹ-ಬದಲಾವಣೆಯೇನೂ ಆಗಿಲ್ಲ. ಆದ್ದರಿಂದ ಪ್ರಧಾನಿಗಳು ಪರಮಾಣು ಪರೀಕ್ಷಣೆಗಳಿಗೆ ಆದೇಶ ನೀಡಿರುವುದು ಆತುರದ ವಿಷಯ ಎಂದು ಈ ಮಹಿಳೆಯರು ಹೇಳಿದ್ದಾರೆ.

ಈ ಪರೀಕ್ಷಣೆಗಳಿಗೆ ದೇಶವ್ಯಾಪಿ ಬೆಂಬಲ ವ್ಯಕ್ತಗೊಂಡಿದೆ ಎಂದು ಮಾಧ್ಯಮಗಳು ಚಿತ್ರಿಸುತ್ತಿರುವುದು ಸರಿಯಲ್ಲ, ಈ ದೇಶದ ದೊಡ್ಡ ವಿಭಾಗವೊಂದು ಪರಮಾಣು ಶಸ್ತ್ರಾಸ್ತ್ರಗಳನ್ನು ಹೊಂದುವ ಈ ಹೊಸ ಧೋರಣೆ ದಕ್ಷಿಣ ಏಶ್ಯಾದಲ್ಲಿ ಒಂದು ಪರಮಾಣೀಕರಣದ ಅನಂತ ಸುರಳಿಯನ್ನು ಅಪಾಯಕಾರೀ ರೀತಿಯಲ್ಲಿ ಬಿಚ್ಚಿಟ್ಟಿದೆ ಎಂದು ಈ ಮಹಿಳೆಯರು ಅಭಿಪ್ರಾಯಪಟ್ಟಿದ್ದಾರೆ.

"ಭಾರತದಂತಹ 40 ಕೋಟಿ ಜನಗಳಿಗಿಂತಲೂ ಹೆಚ್ಚು ಜನ ಬಡತನದ ರೇಖೆಯ ಕೆಳಗಿರುವ ಒಂದು ಬಡದೇಶದಲ್ಲಿ ಜನಗಳ ಅಗತ್ಯಗಳನ್ನು ಈಡೇರಿಸಲು ಬೇಕಾದ ಅಗತ್ಯ ಸಂಪನ್ಮೂಲಗಳನ್ನು ಒಂದು ಪರಮಾಣು ಶಸ್ತ್ರಾಸ್ತ್ರ ಪೈಪೋಟಿಗಾಗಿ ಬಳಸುವುದೆಂದೇ ಇದರರ್ಥ" ಎಂದಿರುವ ಮಹಿಳೆಯರ ಈ ಪತ್ರ ವಾಜಪೇಯಿ ಮತ್ತು ಅವರ ಸರಕಾರದಲ್ಲಿರುವ ಇತರರು ಇತ್ತಿರುವ ಹೇಳಿಕೆಗಳು ತಕ್ಷಣವೇ ಏನೋ ಒಂದು ಬೆದರಿಕೆ ಅಥವಾ ಯುದ್ಧದ ಅಪಾಯವಿದೆ ಎಂಬ ಭಾವನೆ ಸೃಷ್ಟಿಸುವುದನ್ನು ನಾವು ಬಲವಾಗಿ ಆಕ್ಷೇಪಿಸುವುದಾಗಿ ಹೇಳಿದೆ. ಇದನ್ನು ಸಂಕುಚಿತ ಭಾವನೆಗಳನ್ನು ಬಡಿದೆಬ್ಬಿಸುವ ಕೆಲಸ ಎಂದೇ ವರ್ಣಿಸಬೇಕಾಗುತ್ತದೆ. ಇದು ದೇಶಕ್ಕಾಗಲೀ, ಜನತೆಗಾಗಲೀ ಕೇಡು ತರುವ ಭಾವನೆಗಳು ಎಂದು ಅವರು ಖೇದ ವ್ಯಕ್ತಪಡಿಸಿದ್ದಾರೆ.

"ಮಹಿಳೆಯರಾಗಿ ನಾವು ಶಾಂತಿಯ ಪ್ರಕ್ರಿಯೆಗೆ ಆಳವಾದ ಬದ್ಧತೆ ಹೊಂದಿದ್ದೇವೆ. ಅಮೇರಿಕ ಮತ್ತು ಅದರ ಮಿತ್ರರಿಂದಾಗಿ ಆರಂಭವಾದ ಪರಮಾಣು ಶಸ್ತ್ರಾಸ್ತ್ರ ಪೈಪೋಟಿಯ ವಿರುದ್ಧ ಬೃಹತ್ ಶಾಂತಿ ಆಂದೋಳನಗಳ ಮುಂಚೂಣಿಯಲ್ಲಿ ಮಹಿಳೆಯರಿರಲು ಇದೇ ಕಾರಣ ಎಂದಿರುವ ಮಹಿಳೆಯರು ಭಾರತದ ವಿರುದ್ಧ ದಿಗ್ಬಂದನ ಹೇರುವ ಬೆದರಿಕೆಗಳನ್ನೂ ಬಲವಾಗಿ ಖಂಡಿಸಿದ್ದಾರೆ. ಅವರಿಗೆ ಆ ಹಕ್ಕು ಇಲ್ಲವೇ ಇಲ್ಲ ಎಂದು ನಾವು ಸ್ಪಷ್ಟವಾಗಿ ಸಾರುತ್ತಾ "ನಿಮ್ಮ ಸರಕಾರ ಎಲ್ಲರೂ ಒಪ್ಪಿದ್ದ ಧೋರಣೆಯನ್ನು ಬದಲಿಸಿ ಇಂತಹ ಪರಮಾಣೀಕರಣದಿಂದ ಉಂಟಾದ ಬಿಗುವನ್ನೂ ಬಳಸಿಕೊಂಡು ಈ ಪ್ರದೇಶದಲ್ಲಿ ತನ್ನ ಪಾತ್ರವನ್ನು ಹೆಚ್ಚಿಸಿಕೊಳ್ಳಲು ಅಮೇರಿಕಾಕ್ಕೆ ನೀವು ನೆರವಾಗುತ್ತಿದ್ದೀರಿ" ಎಂದು ಆಪಾದಿಸಿದೆ.

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಸಹೇಲಿ, ಜಾಗೋರಿ, ನಿರಂತರ, ಸಬಲಾ ಸಂಘ, ಕಾಳಿ ಫಾರ್ ವುಮೆನ್ ಇತ್ಯಾದಿ ಮಹಿಳಾ ಸಂಘಟನೆಗಳು, ಹಲವು ಪತ್ರಕರ್ತೆಯರು, ಮಹಿಳಾ ಆರ್ಥಿಕ ತಜ್ಞರು, ಪ್ರಾಧ್ಯಾಪಕರು, ವಕೀಲರು, ಡಾಕ್ಟರುಗಳು ಮೇ 14ರ ಈ ಬಹಿರಂಗ ಪತ್ರಕ್ಕೆ ಸಹಿ ಹಾಕಿದ್ದಾರೆ.

## ಅಡ್ವಾಣಿಯವರ ಪಟಾಕಿಗಳು ಸಿಪಿಐ(ಎಂ) ಟೀಕೆ

ಕಾಶ್ಮೀರ ಸಮಸ್ಯೆಗೆ ಶಾಶ್ವತ ಪರಿಹಾರಕ್ಕೂ ಭಾರತ ಪರಮಾಣು ಶಸ್ತ್ರಾಸ್ತ್ರ ಹೊಂದಿದ ದೇಶವಾಗುವುದಕ್ಕೂ ಸಂಬಂಧ ಕಲ್ಪಿಸುವ ಕೇಂದ್ರ ಗೃಹಮಂತ್ರಿ ಅಡ್ವಾಣಿಯವರ ಹೇಳಿಕೆಯನ್ನು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಬಲವಾಗಿ ಖಂಡಿಸಿದೆ. ಭಾರತ ಒಂದು ಪರಮಾಣು ಶಸ್ತ್ರ ಹೊಂದಿದ ದೇಶವಾಗಲು ನಿರ್ಧರಿಸಿದ ಮೇಲೆ ಭಾರತ-ಪಾಕಿಸ್ತಾನ ಸಂಬಂಧಗಳಲ್ಲಿ ಒಂದು ಗುಣಾತ್ಮಕವಾಗಿ ಹೊಸ ಘಟ್ಟ ಬಂದಿದೆ" ಎಂದು ಗೃಹಮಂತ್ರಿಗಳು ಹೇಳಿದ್ದರು.

ಭಾರತ ಕಾಶ್ಮೀರದಲ್ಲಿ ಹಸ್ತಕ್ಷೇಪ ಮಾಡುವುದಕ್ಕೆ ಅಲ್ಲಿ ಉಗ್ರಗಾಮಿ, ಹಿಂಸಾತ್ಮಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವುದಕ್ಕೆ ಪಾಕಿಸ್ತಾನೀ ಆಳುವ ವಲಯಗಳನ್ನು ಬಲವಾಗಿ ಖಂಡಿಸುತ್ತಾ ಬಂದಿದೆ. ಜಮ್ಮು-ಕಾಶ್ಮೀರ ರಾಜ್ಯದಲ್ಲಿ ಇಂತಹ ಚಟುವಟಿಕೆಗಳನ್ನು ಎದುರಿಸಲು ದೃಢ ಕ್ರಮಗಳನ್ನು ಕೈಗೊಳ್ಳುವುದು ಸಂಪೂರ್ಣವಾಗಿ ಕಾನೂನುಬದ್ಧ. ಆದರೆ ಭಾರತ-ಪಾಕಿಸ್ತಾನ ಸಂಬಂಧಗಳನ್ನು ಕುರಿತು ವ್ಯವಹರಿಸುವಾಗ ಪರಮಾಣು ಪಟಾಕಿಗಳನ್ನು ಹಾರಿಸುವುದು ಸಂಪೂರ್ಣ ಅನಗತ್ಯ. ಇದು ಅಪಾಯಕಾರಿ ಪರಿಣಾಮಗಳನ್ನು ಉಂಟುಮಾಡಬಹುದು ಎಂದು ಪೊಲಿಟ್‌ಬ್ಯೂರೋ ಹೇಳಿದೆ.

ಈ ಮೊದಲು ಪ್ರಧಾನ ಮಂತ್ರಿಗಳು ಭಾರತ ಪರಮಾಣು ಅಸ್ತ್ರಗಳನ್ನು ಆತ್ಮರಕ್ಷಣೆಗೆ ಬಳಸುತ್ತದೆ ಎಂದು ಹೇಳಿರುವುದನ್ನು ನೆನಪಿಸಿರುವ ಪೊಲಿಟ್‌ಬ್ಯೂರೋ ಪರಮಾಣು ಪ್ರಶ್ನೆಯನ್ನು ನೆರೆದೇಶಗಳೊಂದಿಗೆ ವಿವಾದಗಳನ್ನು ಪರಿಹರಿಸುವಲ್ಲಿ ಒಂದು ಅಂಶವನ್ನಾಗಿ ಬಳಸಲು ಭಾರತ ಸಿದ್ಧವಿದೆಯೆಂದು ತಪ್ಪು ಸಂಕೇತ ನೀಡುತ್ತದೆ ಎಂದು ಹೇಳಿದೆ.

ಬಿಜೆಪಿ ಮುಖಂಡತ್ವ ಪರಮಾಣು ಅಸ್ತ್ರಗಳ ಪ್ರಶ್ನೆಯನ್ನು ಬಳಸುವ ರೀತಿಯನ್ನು ನೋಡಿದರೆ ಇದು ಅವರ ಹಿಂದುತ್ವ ಅಜೆಂಡಾವನ್ನು ಈಡೇರಿಸುವ ಒಟ್ಟಾರೆ ಯೋಜನೆಯ ಭಾಗವಾಗಿದೆಯೆಂಬುದು ಸ್ಪಷ್ಟವಾಗುತ್ತದೆ ಎಂದು ಪೊಲಿಟ್‌ಬ್ಯೂರೋ ಅಭಿಪ್ರಾಯಪಟ್ಟಿದೆ.

ರಾಮ ದೇವಸ್ಥಾನದಂತೆ ಬಾಂಬನ್ನು ಆರ್.ಎಸ್.ಎಸ್. ನೇತೃತ್ವದ ಕೂಟದ ಬತ್ತಳಿಕೆಯಲ್ಲಿನ ಒಂದು ಬಾಣವಾಗಿಯೇ ಕಾಣಲಾಗುತ್ತಿದೆ. ಈಗಾಗಲೇ ವಿಶ್ವ ಹಿಂದೂ ಪರಿಷತ್ ಪೋಖ್ರಾನ್‌ನಲ್ಲಿ ಒಂದು 'ಶಕ್ತಿಪೀಠ' ವನ್ನು ಕಟ್ಟುವ ಯೋಜನೆಯನ್ನು ಪ್ರಕಟಿಸಿದೆ. ಇದನ್ನು ಜನಗಳನ್ನು ಧರ್ಮದ ಹೆಸರಿನಲ್ಲಿ ದಾರಿತಪ್ಪಿಸಲು ಬಳಸಲಾಗುತ್ತದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಇಂತಹ ಸಂಕುಚಿತ ಮತ್ತು ವಿಭಜನಕಾರೀ ಸಂಚುಗಳ ಬಗ್ಗೆ ಜಾಗರೂಕತೆಯಿಂದರಬೇಕು ಎಂದು ಎಲ್ಲಾ ಜನವಿಭಾಗಗಳಿಗೆ ಕರೆ ನೀಡಿದೆ. ವಾಜಪೇಯಿ ಸರಕಾರ ಭಾರತದ ದೀರ್ಘಕಾಲದ ಧೋರಣೆಗಳನ್ನು ತಿರುಗು-ಮುರುಗು ಗೊಳಿಸಿ ರಾಷ್ಟ್ರಾಂಧತೆಯನ್ನು ಉದ್ರೇಕಿಸುತ್ತದೆ. ಇದು ರಾಷ್ಟ್ರೀಯವಾಗಿ ಒಪ್ಪಿಗೆಯಾದ ಧೋರಣೆಗಳಿಗೆ ಪರ್ಯಾಯವಾಗಲು ಸಾಧ್ಯವಿಲ್ಲ ಎಂದು ಸಿಪಿಐ(ಎಂ) ಎಚ್ಚರಿಸಿದೆ.

## ಪ್ರಜಾಪ್ರಭುತ್ವ ರಚನೆಯನ್ನು ಮೊಟಕು ಮಾಡುವ ಪರಮಾಣು ಬಾಂಬು ನೀತಿ

### ಎಸ್.ಎಫ್.ಐ. ಖಂಡನೆ

ಭಾರತ ನಿರಂತರವಾಗಿ ಅನುಸರಿಸಿಕೊಂಡು ಬಂದ ಪರಮಾಣು ನಿಶ್ಯಸ್ತ್ರೀಕರಣದ ಸರ್ವಸಮ್ಮತ್ರದ ಧೋರಣೆಯಿಂದ ಬಿಜೆಪಿ ಸರಕಾರ ಹಿಂದೆ ಸರಿದು ಈ ನೀತಿಯನ್ನು ಬೇರೆ ದಾರಿಗೆ ತಿರುಗಿಸಿದೆ ಎಂದು ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್.ಎಫ್.ಐ) ನ ಕೇಂದ್ರ ಕಾರ್ಯಕಾರಿ ಸಮಿತಿ ಖಂಡಿಸಿದೆ. ಭಾರತದ ಭದ್ರತೆಗೆ ಬೆದರಿಕೆಯಿದೆಯೇ, ಇದ್ದರೆ ಅದೇನು ಎಂಬುದನ್ನು ಬಿಜೆಪಿ ಸರಕಾರ ತಿಳಿಸಿಲ್ಲ ಎಂದು ಅದು ಟೀಕಿಸಿದೆ.

ಅಮೆರಿಕದ ದಿಗ್ಬಂಧನಗಳನ್ನು ಬಲವಾಗಿ ಖಂಡಿಸುತ್ತಾ "ಭಾರತದ ಸಾರ್ವಭೌಮತೆಯನ್ನು ಉಲ್ಲಂಘಿಸುವ ಸಾಮ್ರಾಜ್ಯಶಾಹಿಯ ಅನೈತಿಕ ಕ್ರಮವನ್ನು ವಿರೋಧಿಸಬೇಕು" ಎಂದು ವಿದ್ಯಾರ್ಥಿ ಸಮುದಾಯಕ್ಕೆ ಕರೆ ನೀಡಿದೆ. ಬೃಹತ್ ಪರಮಾಣು ಶಸ್ತ್ರಾಗಾರ ಹೊಂದಿರುವ ಅಮೆರಿಕಾಕ್ಕೆ ಭಾರತದ ಮೇಲೆ ದಿಗ್ಭಂದನ ಹೇರುವ ಹಕ್ಕೇನಿದೆ?

ಭಾರತ ತನ್ನ ಭದ್ರತಾ ಅಗತ್ಯಗಳಿಗಾಗಿ ಒಂದು ಸ್ವತಂತ್ರ ಪರಮಾಣು ಸಾಮರ್ಥ್ಯವನ್ನು ಮುಂದೆಯೂ ಬೆಳೆಸಬೇಕು ಎಂದು ಅಭಿಪ್ರಾಯ ಪಟ್ಟಿರುವ ಎಸ್.ಎಫ್.ಐ. "ಅದೇ ವೇಳೆಗೆ ನಮ್ಮ ಪರಮಾಣು ಕಾರ್ಯಕ್ರಮವನ್ನು ಅಣ್ವಸ್ತ್ರೀಕರಣ ಗೊಳಿಸದಿರುವ ನಮ್ಮ ನಿಲುವಿಗೆ ಒಂದು ಪರಮಾಣು ಬೆದರಿಕೆ ಕಾಣಿಸುವವರೆಗೂ ಬದ್ಧರಾಗಿರಬೇಕು" ಎಂದಿದೆ.

ಸಿಟಿಬಿಟಿಯಂತಹ "ಗೋಸುಂಬೆ ತನದ, ಆಗಲೇ ಪರಮಾಣು ಅಸ್ತ್ರ ಹೊಂದಿರುವವರ ಪರವಾಗಿರುವ ಪಕ್ಷಪಾತಪೂರ್ಣ" ಸಂಧಿಯನ್ನು ಒಪ್ಪುವ ಬಗ್ಗೆ ಪರಿಶೀಲಿಸುವುದಾಗಿ ಬಿಜೆಪಿ ಸರಕಾರ ಹೇಳಿರುವುದನ್ನು ಎಸ್.ಎಫ್.ಐ. ಖಂಡಿಸಿದೆ. ಭಾರತ ಇದನ್ನು ವಿರೋಧಿಸಿ ಸಾರ್ವತ್ರಿಕ ಪರಮಾಣು-ನಿಶ್ಯಸ್ತ್ರೀಕರಣ ತರಲು ಒತ್ತಾಯಿಸುವಂತೆ ಸಾರ್ವಜನಿಕಾ ಭಿಪ್ರಾಯ ಮೂಡಿಸಲು ಶಾಂತಿಯ ವಿಶ್ವ ನಾಯಕರಾಗಿ ಕೆಲಸ ಮಾಡಬೇಕು ಎಂದು ಎಸ್.ಎಫ್.ಐ ಸೂಚಿಸಿದೆ.

ಈ ಪರೀಕ್ಷಣೆಗಳನ್ನು ನಡೆಸುವಲ್ಲಿ ಬಿಜೆಪಿ ಸರಕಾರ ನಡೆಸಿದ ಹೊಲಸು ಪಕ್ಷ ರಾಜಕೀಯವನ್ನು ಟೀಕಿಸುತ್ತಾ ಎಸ್.ಎಫ್.ಐ. ಇದು ಖಂಡಿತ ವಾಗಿಯೂ ಅಭಿವೃದ್ಧಿ ಕಾಮಗಾರಿಗಳನ್ನು ತಟ್ಟುತ್ತದೆ. ಜನಗಳ ಸಂಕಟಗಳನ್ನು ಹೆಚ್ಚಿಸುತ್ತದೆ ಎಂದಿದೆ.

"ರಾಜಕೀಯ ಅನಿಶ್ಚಿತತೆಯ ಈ ಹಂತದಲ್ಲಿ ಪರಮಾಣು ಪರೀಕ್ಷಣೆ ನಡೆಸುವ ಬಿಜೆಪಿಯ ಕ್ರಮ ಉದ್ದೇಶಪೂರ್ವಕವಾದದ್ದು ಹಾಗೂ ಚುನಾವಣಾ ಹಿತಸಾಧನೆಯ ದೃಷ್ಟಿಯದ್ದು, ಇದು ರಾಷ್ಟ್ರೀಯ ಸಂಕುಚಿತವಾದವನ್ನು ಉದ್ರೇಕಿಸುವಂತದ್ದು. ಬಿಜೆಪಿ-ಆರ್.ಎಸ್.ಎಸ್. ನ ಯುದ್ಧಕೋರ ಸಿದ್ಧಾಂತದ ಪ್ರಜಾಪ್ರಭುತ್ವ-ವಿರೋಧಿ, ಕೋಮುವಾದಿ ಸ್ವರೂಪದ್ದು. ಇದರ ಅಂತಿಮ ಹುಚ್ಚೀನೆಂದರೆ ನಮ್ಮ ದೇಶ ಹಾಗೂ ಜನತೆಯ ಅಭಿವೃದ್ಧಿಗೆ ಅಗತ್ಯವಾದ ಪ್ರಜಾಪ್ರಭುತ್ವ ರಚನೆಯ ನಿರಾಕರಣೆ" ಎಂದು ಎಸ್.ಎಫ್.ಐ. ಒತ್ತಿ ಹೇಳಿದೆ.

ಬಿಜೆಪಿ ನೇತೃತ್ವದ ಸರಕಾರದ ಅಪಾಯಕಾರಿ ಗುರಿಗಳನ್ನು ಅರಿತು ಅದು ಪ್ರದರ್ಶಿಸುತ್ತಿರುವ ಉಗ್ರ ರಾಷ್ಟ್ರಾಂಧತೆಯ ವಿರುದ್ಧ ಒಗ್ಗಟ್ಟಾಗಬೇಕೆಂದು ಶಿಕ್ಷಣ ಸಮುದಾಯಕ್ಕೆ ಹಾಗೂ ಇತರ ಜನವಿಭಾಗಗಳಿಗೆ ಎಸ್.ಎಫ್.ಐ. ಮನವಿ ಮಾಡಿದೆ.

## ವಾರದ ವ್ಯಂಗ್ಯ ಚಿತ್ರ




KRNM/BGS-405 MAG(2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು-9 ಮುದ್ರಣ: ಕಂಠೀರವ ಆಫ್‌ಸೆಟ್, ನಂ.6, 7ನೇ ಮುಖ್ಯರಸ್ತೆ, ಎಸ್.ಆರ್.ನಗರ, ಬೆಂ.27